Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–29 | ಜುಲೈ 15–21, 2024 | ಪುಟ 16 | ರೂ.10/–
Volume-18 | Issue-29 | July 15-21, 2024 | Pages:16 | Price: 10/-



ರೈತರ ಆತ್ಮಹತ್ಯೆ ಹೆಚ್ಚಳ: ಕಾರಣಗಳೇನು?



ಜನಾದೇಶವನ್ನು ಮರೆತು ನಡೆದಿರುವ ಕಾಂಗ್ರೆಸ್ ಸರ್ಕಾರ

ಮೋದಿ ಸರ್ಕಾರದ ಬಜೆಟ್ ಹೇಗಿರಬೇಕು?

ಹೈಟೆಕ್ ಗುರುಗಳ ಅಧ್ಯಾತ್ಮ ತರಬೇತಿ ಅನುಭವಗಳು



ಫ್ರೆಂಚ್ ಚುನಾವಣಾ ಫಲಿತಾಂಶ: ಅತಿ ಬಲಪಂಥೀಯತೆಗೆ ತಡೆ

ನಾಳಿನ ಕಾಮ್ರೇಡ್‌ಗಳು

ಆಂಧ್ರಪ್ರದೇಶದ ರಂಗನಾಯಕಮ್ಮ ನವರು ತೆಲುಗು ಭಾಷೆಯ ಮಾರ್ಕ್ಸ್‌ವಾದಿ ಲೇಖಕಿ ಮತ್ತು ವಿಮರ್ಶಕಿ. ಅವರು ಕಮ್ಯುನಿಸಂ ಮತ್ತು ಸ್ತ್ರೀವಾದದ ಪ್ರಮುಖ ಪ್ರತಿಪಾದಕರಾಗಿದ್ದಾರೆ. ಆಡುಮಾತಿಗೆ ಹತ್ತಿರವಾದ ಭಾಷೆಯನ್ನು ಬಳಸಿ ಮಾರ್ಕ್ಸ್‌ವಾದ ಕುರಿತಂತೆ ಹಲವು ಲೇಖನಗಳನ್ನು ಬರೆದಿದ್ದಾರೆ. ಅವರು 1973 ರಲ್ಲಿ ಮಾರ್ಕ್ಸ್‌ವಾದ ಸಂಪರ್ಕಕ್ಕೆ ಬಂದ ನಂತರ, ಅಂದಿನಿಂದ ಆ ದೃಷ್ಟಿಕೋನದಿಂದ ಬರೆಯಲು ಪ್ರಾರಂಭಿಸಿದರು. ನವ ತೆಲಂಗಾಣ ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ರಂಗನಾಯಕಮ್ಮ ಅವರ ಲೇಖನವನ್ನು, ಕಂತುಗಳಲ್ಲಿ ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಲಿದೆ. ಕನ್ನಡಕ್ಕೆ ಸಿ.ಚಿ. ಅನುವಾದಿಸಿದ್ದಾರೆ.

ಭಾಗ 3

ರವಿ: 'ವಿಮೋಚನೆ'ಎಂದು ಹೇಳಿದೆ. ಅದೇಗೆ ಗೋಪಾಲ್?

ಗೋಪಾಲ: ಹೇಗೆ ಅಂತೀಯಾ? ಹೇಗೋ ನಿನ್ನ ಬ್ಯಾಗಿನಲ್ಲಿ 'ಕ್ಯಾಪಿಟಲ್' ಪುಸ್ತಕ ಇದೆ ಅಂದೆಯಲ್ಲ. ನೀನು ಅದನ್ನು ಓದ್ಬೇಕು ಎನ್ನುತ್ತೇನೆ. ನಿಜವಾಗಿಯೂ ಆ ಪುಸ್ತಕ ಬ್ಯಾಗಿನಲ್ಲಿ ಇದೆಯಾ? ಕೊಂಡುಕೊಂಡಿದ್ದೀಯಾ?

ರವಿ: ಬ್ಯಾಗಿನಲ್ಲಿ ಈಗ ನಿಜವಾಗಿಯೂ ಇಲ್ಲ. ಮೊನ್ನೆ ನನ್ನ ಕ್ಲಾಸ್ ನಲ್ಲಿ ಆ ಪುಸ್ತಕ ಓದುತ್ತಾ ಕುಳಿತಿದ್ದೆ. ಆ ಸಮಯದಲ್ಲಿ ಒಬ್ಬ ಬಗ್ಗಿ ಬಗ್ಗಿ ನೋಡಿ, "ಓ, ಕ್ಯಾಪಿಟಲ್ಲಾ? ಈ ಪುಸ್ತಕದಲ್ಲಿ ತುಂಬಾ ವಿಷಯಗಳಿವೆ ಅಂತ ಏನೇನೋ ಹೇಳ್ತಾರೆ. ಕೊಂಡ್ಕೊಂಡ್ರಾ? ನನಗೂ ಒಂದ್ಸಾರಿ ಕೊಡ್ತೀರಾ? ನಾಳೆ ಬೆಳಿಗ್ಗೆ ವಾಪಸ್ ತಂದ್ಕೊಡ್ತೀನಿ. ನಿಜವಾಗಿಯೂ ಮಿಸ್ ಮಾಡದೆ ತಂದ್ಕೊಡ್ತೀನಿ. ಪ್ಲೀಸ್, ಅದರ ಮೇಲೆ ಏನಾದ್ರೂ ಬರೆಯೋಣ ಅಂತ." ಎನ್ನುತ್ತ ಬಡ ಬಡ ಮಾತನಾಡುತ್ತಿದ್ದ. ಅವನ ಚಡಪಡಿಕೆಯನ್ನು ನಿಜವಾಗಿಯೂ ನನ್ನಿಂದ ತಡೆದುಕೊಳ್ಳಲಾಗಲಿಲ್ಲ. 'ಕ್ಯಾಪಿಟಲ್' ಪುಸ್ತಕದ ಪುಟ ತಿರುಗಿಸಿ ನೋಡಿ, ಏನೋ ಬರೆಯುತ್ತಾನಂತೆ. ಎಂತಹ ಹಠ ಅವನದು!

ಗೋಪಾಲ: ಸರಿ ರವಿ, ಅವನೇನೋ ಕೇಳಿದ. ನೀನು ಏನಂದೆ? ಕೊಟ್ಟಿದ್ದೀಯೋ, ಕೊಡಲಿಲ್ಲವೋ,?

ರವಿ: ನಾನು ಕೊಡ್ತೀನಾ! ಕೊಟ್ಟರೆ, ನಿನ್ನ ಎದುರು ಕುಳಿತುಕೊಳ್ಳಲು ಸಾಧ್ಯವಿತ್ತಾ? "

ಗೋಪಾಲ: ನಂಗೇನು ಗೊತ್ತಾಗುತ್ತೆ? ನಿನ್ನನ್ನು ಕುಳಿತುಕೊಬೇಡ ಅಂತೀನಾ? "

ರವಿ: ನೀನು ಅಂತೀಯ ಅಂತ ಅಲ್ಲ. ಕ್ಯಾಪಿಟಲ್ ಅನ್ನು ಅವನು ಇಟ್ಟುಕೊಂಡರೆ, ನಿನ್ನ ಎದುರು ಕುಳಿತುಕೊಳ್ಳುವುದು ನಾನೇ ತಾನೆ, ಅವನಲ್ಲವಲ್ಲ!

ಗೋಪಾಲ: ಅದು ತಪ್ಪು ರವಿ. ಆ ಸಮಯದಲ್ಲಿ ಕೊಡಲು ಮನಸ್ಸಿಲ್ಲದಿದ್ದರೂ 'ನಾನು ಓದಿ ಮುಗಿಸಿದ ನಂತರ ಕೊಡುತ್ತೇನೆ' ಅಂತ ಹೇಳಿದ್ರೆ ಒಳ್ಳೆಯದೆ. ಏನೋ ಸ್ವಲ್ಪ ಓದಿ, ಪುಟಗಳನ್ನು ತಿರುಗಿಸಿ ಓದಿದರೆ ಏನಾದರೂ ಬದಲಾಗುತ್ತಿತ್ತೆ? ಆತ ಓದಿದ ನಂತರ, ಆ ಪುಸ್ತಕದ ವಿಷಯ ಕುರಿತೇ ಮಾತನಾಡುತ್ತಿದ್ದನೇನೊ. 'ನಂತರ ಕೊಡ್ತೇನೆ ಬಿಡು' ಎಂದು ಹೇಳಿದ್ದೀಯಾ? ಒಂದು ಸಾರಿ ನೋಡಲಿ ಬಿಡು. ನಾನು ಕ್ಯಾಪಿಟಲ್ ಓದದೇ ಇದ್ದರೆ ಈ ರೀತಿ ಮಾತನಾಡಲು ಸಾಧ್ಯವಿತ್ತೇ?

ರವಿ: ಹೌದು ಗೋಪಾಲ್. ನಿನ್ನ ಮಾತುಗಳಿಂದ ನನಗೂ ಹೊಸದಾಗಿ ತಿಳಿಯಿತು.

ಗೋಪಾಲ: ಮತ್ತೇನು! ಒಂದು ಸಾರಿ ಕೊಟ್ಟರೆ ಓದುತ್ತಾನೇನೊ.

ರವಿ: ನನಗೆ ಆ ಸಮಯದಲ್ಲಿ ಆ ರೀತಿ ಅನಿಸಲಿಲ್ಲ ಗೋಪಾಲ್.

ಗೋಪಾಲ: ಆ ಸಮಯದಲ್ಲಿ ಅನಿಸಲಿಲ್ಲ ಸರಿ! ಈಗ ಏನನಿಸುತ್ತೆ?

ರವಿ: ಏನೋ! ಅವನು ಮತ್ತೆ ಕೇಳಿದರೂ, ಕೇಳದೇ ಇದ್ದರೂ, ನಿಜವಾಗಿ ಯಾವ ಪುಸ್ತಕಗಳನ್ನು ಓದುತ್ತಾನೆ ಎಂದು ಕೇಳಿ, ಓದುವುದಾದರೆ ಕೊಂಡುಕೊಳ್ಳಲಿಲ್ಲವೇ ಎಂದು ಕೇಳುತ್ತೇನೆ. ಅದಿರಲಿ ಗೋಪಾಲ್, ನಾನು ನಿನ್ನ ಬಳಿ ಇನ್ನೇನೋ ಕೇಳಬೇಕು ಎನಿಸಿತು. ಸಮಾಜ, ಮೊದಲಿಗೆ ಗುಲಾಮರ ಮಾಲೀಕರ ನಿಯಂತ್ರಣದಲ್ಲಿ ಪ್ರಾರಂಭವಾಯಿತು ಎಂದು ಹೇಳಿ, ನಂತರ ಅದು ಬೆಳೆಯಿತು, ಮತ್ತಷ್ಟು ಬೆಳೆಯಿತು, ಮತ್ತೆ ಸ್ವಲ್ಪ ಬೆಳೆಯಿತು ಎಂದು ಹೇಳಿದೆ. ಮಾಲೀಕರ ಬೇಡಿಕೆಗಳಲ್ಲಿ ಬದಲಾವಣೆಗಳಿದ್ದರೆ ಮಾತ್ರ ಅವುಗಳನ್ನು ಸಮಾಜದ ಬೆಳವಣಿಗೆ ಎನ್ನುತ್ತೇವೆಯೇ?

ಗೋಪಾಲ: ಚೆನ್ನಾಗಿ ಕೇಳಿದೆ ರವಿ! ಸಮಾಜ ಬೆಳೆಯುವುದಕ್ಕೆ ಮಾಲೀಕರು ಕಾರಣರಲ್ಲ. ಶ್ರಮಿಕ ವರ್ಗದಲ್ಲಿನ ಬೆಳವಣಿಗೆಗಳಲ್ಲಿನ ಏರಿಳಿತವೇ ಇದಕ್ಕೆ ನಿಜವಾದ ಕಾರಣ! ಒಂದು ಕಾಲದಲ್ಲಿ ಗುಲಾಮರಂತೆ ಬದುಕಿದವರು, ಈಗಿನ ಹಂತಕ್ಕೆ ಗೇಣಿದಾರರಾಗಿ, ಕೂಲಿ ಕಾರ್ಮಿಕರಾಗಲಿಲ್ಲವೇ? ಅವರ ಹೋರಾಟದಿಂದಲೇ ಎಲ್ಲಾ ಬದಲಾವಣೆಗಳಾಗಿವೆ. ನಮಗೆ ಗೊತ್ತಿಲ್ಲದ ಅನೇಕ ವಿಷಯಗಳಿವೆ. ಮತ್ತು ಅದೆಲ್ಲಾ ಬೆಳವಣಿಗೆಯು ಶ್ರಮಿಕವರ್ಗದ ಆಶಯಗಳಲ್ಲಿದೆ.

ರವಿ: ಆದರೆ, ಇಂದು ನಾವೀಗ ಹೇಗೆ ಬೆಳೆಯಬೇಕು? ನಮ್ಮ ಭಾವನೆಗಳಲ್ಲಿ ಯಾವ ಬದಲಾವಣೆಗಳು ಬರಬೇಕು?

ಗೋಪಾಲ: ಸ್ವಲ್ಪ ಯೋಚಿಸಿ ನೋಡು ರವಿ!

ರವಿ: ನಾವು ಉದ್ಯೋಗಗಳು ಬೇಕು ಅನ್ನುತ್ತೇವೆ. ಉದ್ಯೋಗ ಬಂದರೆ, ಆಗ ಸಂಬಳವೂ ಬರುತ್ತೆ. ಅಷ್ಟೇನಾ ನಡೆಯಬೇಕಿರುವುದು? ಅದರಿಂದ ನಮಗೆ ತೃಪ್ತಿಇದೆಯೇ? ಪಕ್ಕದಲ್ಲಿ ಭಿಕ್ಷುಕರು ಇದ್ದಾರಲ್ಲವೇ. ಪಕ್ಕದಲ್ಲೇ ಕಡುಬಡವರು ಇದ್ದಾರಲ್ಲವೇ. ಅವರು ಬೆಳೆಯೊದೇಗೆ?

ಗೋಪಾಲ: ಶ್ರಮದ ಶೋಷಣೆಯನ್ನು ಅಂತರ್ಗತ ವ್ಯವಸ್ಥಿತ ವಿದ್ಯಮಾನವಾಗಿ ಮಾರ್ಕ್ಸ್ ನೋಡುತ್ತಾರೆ. ಬೂರ್ಜ್ವಾ, ಬಂಡವಾಳದ ಮಾಲೀಕರು ಮತ್ತು ಭೂರಹಿತ ಅಥವಾ ಕಡಿಮೆ ಭೂಮಿಯನ್ನು ಹೊಂದಿರುವ ಶ್ರಮಜೀವಿಗಳ ನಡುವೆ ವಿಭಜಿಸಲ್ಪಟ್ಟ ಅಸಹನೀಯ ಅಸಮಾನ ಸಮಾಜ ಇದಾಗಿದೆ. ಇದು ಹೋಗಬೇಕು ಎಂಬುದು ನಮ್ಮ ಆಲೋಚನೆ. ಈ ರೀತಿಯಾದಾಗ ಬಿಕಾರಿಗಳು, ಬಿಕ್ಷುಕರು ಇರುತ್ತಾರೆ ಎಂದರೇನು?

ರವಿ: ಹೌದೌದು! ಅಷ್ಟೇ! ಇನ್ನೂ ಎಷ್ಟು ಕಾಲ ಶೋಷಣೆಯನ್ನು ಸಹಿಸಿಕೊಳ್ಳೊದು? ಅಷ್ಟೇ ಅಲ್ಲ, ಆ –ಬಾಡಿಗೆ, ಬಡ್ಡಿ, ಲಾಭ – ಎಲ್ಲಾ ಶೋಷಣೆಗಳೂ ಹೋಗಬೇಕಿದೆಯಲ್ಲವೆ. ಆದರೆ, ಗೋಪಾಲ್! 'ಲಾಭ' ಎನ್ನುವುದು ಕೂಡ ಪೂರ್ತಿಯಾಗಿ ಹೋಗಬೇಕಲ್ಲವೇ?

ಗೋಪಾಲ: 'ಲಾಭ' ಮಾತ್ರವೇನಾ? 'ಬಾಡಿಗೆ', 'ಬಡ್ಡಿ' ಇವುಗಳನ್ನು ಸೇರಿಸಿದರೆ ಲಾಭ ಅಲ್ಲವೇ? ಇದನ್ನು ನಾನು ಮೊದಲೇ ಹೇಳಲಿಲ್ಲವೇ? ಸರಕುಗಳ ಮಾರಾಟದಿಂದ ಬರುವ ಲಾಭದಿಂದ ಭೂಮಿ ಖರೀದಿಸುತ್ತಾರೆ, ಅದೇ ಭೂಮಿಯಲ್ಲಿ ಉದ್ಯಮ ಸ್ಥಾಪಿಸಿ, ಆ ಭೂಮಿಗೆ 'ಬಾಡಿಗೆ' ಲೆಕ್ಕ ಹಾಕುತ್ತಾರೆ, ತಾವು ಮಾಡುವ ವೆಚ್ಚಗಳಿಗೆ 'ಹೂಡಿಕೆ' ಎಂದು ಹೆಸರಿಟ್ಟು, ಆ ಹೂಡಿಕೆಗೆ 'ಬಡ್ಡಿ' ಸೇರಿಸುತ್ತಾರೆ, ಅದರ ಜೊತೆಗೆ ಮೂರನೆಯದಾಗಿ 'ಲಾಭ' ಸೇರಿಸಿ, ತಮ್ಮ ಸರಕುಗಳಿಗೆ 'ದರ' ನಿಗದಿ ಮಾಡುತ್ತಾರೆ. ಒಟ್ಟು ಈ ಮೂರೂ ಶೋಷಣೆಯನ್ನು ತಪ್ಪಿಸಬೇಕು. ಇವು ತಪ್ಪಿಸಬಹುದಾದ ಒಟ್ಟು ಶೋಷಣೆ! ಆ 'ಕ್ಯಾಪಿಟಲ್' ಪುಸ್ತಕವನ್ನು ಇನ್ನೂ ಯಾವಾಗ ಓದಿ ಮುಗಿಸುವೆ ರವಿ ಬಾಬು?

ರವಿ: ಓದುತ್ತೇನೆ! ಓದುತ್ತೇನೆ! ಓದಿಯೇಬಿಡುತ್ತೇನೆ ಗೋಪಾಲ್! ಅಲ್ಲಾ, ಲಾಭ ಹೋದ್ರೆ, ಅದನ್ನೇ ಇಟ್ಟುಕೊಂಡು ಬದುಕುವ ಬಂಡವಾಳಶಾಹಿಗಳು ಹೇಗೆ ಬದುಕುತ್ತಾರೆ?

ಗೋಪಾಲ: ನಿನಗೆ ಲಾಭ ಇಲ್ಲ ಅಲ್ವಾ, ನೀನೀಗ ಕೆಲಸಕ್ಕೆ ಬರೋದಿಲ್ಲವೇ! ನಿನ್ನ ಆಲೋಚನಾ ಶಕ್ತಿ ಈ ಬೂರ್ಜ್ವಾ ಪಾಠ ಮತ್ತು ಪರೀಕ್ಷೆಗಳಲ್ಲಿ ತುಂಬಿಹೋಗಿದೆ. 'ಲಾಭವನ್ನು ತೆಗೆದುಕೊಳ್ಳುವವರು', ಅದು ಇಲ್ಲದಿದ್ದರೆ ಹೇಗೆ ಬುದುಕುತ್ತಾರೆ ಅಂತೀಯಲ್ಲಾ, ಅಷ್ಟು ಮಾತ್ರ ಆಲೋಚಿಸಲಿಲ್ಲವೇ? ಲಾಭ ಇಲ್ಲದೆ ಶ್ರಮ ಜೀವಿ ವರ್ಗದ ಜನರೆಲ್ಲ ಹೇಗೆ ಬದುಕುತ್ತಿದ್ದಾರೆ ಹೇಳು? ನಿಜವಾಗಿ 'ಲಾಭ' ಎಂಬ ಮಾತನ್ನು ನಾವು ಹೇಳಬಾರದು. ಸಂಪೂರ್ಣ ತಪ್ಪು ಪದ ಅದು! ಯಾವ ವಿಷಯದಲ್ಲೇ ಆಗಲಿ, 'ಲಾಭವಿಲ್ಲ' ಎಂದರೆ, ಬದುಕುವುದು ಕಷ್ಟ ಅಂತಿದ್ದೀಯಾ? ಯಾವ ಕಡೆಯಿಂದಲೋ ಯಾವುದೋ ಲಾಭ ಬರಬಹುದು ಎಂದು ಆಸೆಯಿಂದ ಎದುರು ನೋಡ್ತಿದ್ದೀಯ? ಲಾಭವೇ ಬರದಿದ್ದರೆ ಶೋಷಣೆ ಮಾಡುವವರು ಹೇಗೆ ಬದುಕುತ್ತಾರೆ ಎಂಬ ಚಿಂತೆನಾ ನಿನಗೆ?

ರವಿ: ಸರಿ, ಬೈದರೆ ಬಯ್ಯಿ! ಇದನ್ನೆಲ್ಲಾ ನನಗೆ ಇದಕ್ಕೂ ಮೊದಲೇ ಯಾಕೆ ಹೇಳಲಿಲ್ಲ? ನೀನು ನನ್ನನ್ನು ಕರೆದು ಹತ್ತು ದಿನಗಳು ಕಳೆದು ಹೋದವು.

ಗೋಪಾಲ: ನೀನಾದರೂ, ಹತ್ತು ದಿನಗಳು ಕಳೆದ ನಂತರ ಬಂದಿದ್ದೀಯ. ಬೂರ್ಜ್ವಾ ಪರೀಕ್ಷೆಗಳ ಅಮಲಿನಲ್ಲಿ, ಫಸ್ಟ್ ಕ್ಲಾಸ್ ಅಂಕಗಳ ಹುಚ್ಚು ಹೆಮ್ಮೆಯಲ್ಲಿ ಮುಳುಗಿದ್ದೀಯೆ. ಅಷ್ಟೆತಾನೆ?

ರವಿ: ಅಂದರೆ! ಅದಕ್ಕೇ ಹೇಳಿದ್ದು. ಈ ಬಾರಿ ಕೊನೆಯದಾಗಿ ಬೈದೇ ಹೇಳು! ಶ್ರಮದ ಶೋಷಣೆ ಹೋದ ನಂತರ ಈ ಸಮಾಜ ಹೇಗಿರುತ್ತೆ ಹೇಳು.

ಗೋಪಾಲ: ಶೋಷಣೆ ಹೋದರೆ, ಶೋಷಣೆ ನಡೆಯದ ಸಮಾಜ ಇರುತ್ತೆ. ಎಲ್ಲರಿಗೂ ಹೊಟ್ಟೆ ತುಂಬುತ್ತೆ, ಎಲ್ಲರಿಗೂ ಶಿಕ್ಷಣ ಸಿಗುತ್ತೆ, ಎಲ್ಲರಿಗೂ ಉದ್ಯೋಗ ಮತ್ತು ವಿಶ್ರಾಂತಿ ಇರುತ್ತೆ, ಎಲ್ಲರಿಗೂ ಸಂತೃಪ್ತಿ ಮತ್ತು ಸಂತೋಷ ಇರುತ್ತೆ. ಹಸಿವು, ಸಂಕಟಗಳು, ಅಸೂಯೆ, ಕಲಹ ಇರುವ ಪರಿಸ್ಥಿತಿಗಳೇ ಇಲ್ಲದಿದ್ದರೆ, ಕೊಲೆಗಳಾಗುತ್ತವೆಯೇ? ಆತ್ಮಹತ್ಯೆಗಳು ಇರುತ್ತವೆಯೇ? ಮೂಢನಂಬಿಕೆಗಳು ಇರುತ್ತವೆಯೇ?

ರವಿ: ಮತ್ತೆ ದೇವರುಗಳು?

ಗೋಪಾಲ: ನಿನಗೆ ಅದನ್ನೂ ಹೇಳಬೇಕಾ? ಮೂಢನಂಬಿಕೆಗಳು ಇರೋದಿಲ್ಲ ಎಂದೆ ತಾನೆ? ಅಂತಹ ಸಮಾಜವನ್ನು ಆ ರೀತಿಯಲ್ಲಿ ಉತ್ತಮವೆಂಬುದನ್ನು ಊಹಿಸಿಕೊ.

ರವಿ: ನಾವು ಕೂಡಾ, ನಾನು ಕೂಡಾ, ಉತ್ತಮವಾಗಿರಬೇಕು. ಈಗಲೇ ಆಗಿದ್ದೇನೆ. ಕಮ್ಯೂನಿಸ್ಟ್ ಆಗ್ಬಿಟ್ಟೆ.

ಗೋಪಾಲ: ಆಗ ಮಾತ್ರವಲ್ಲ, ನಿನ್ನ ಪರೀಕ್ಷೆ? ಬರೆದೆಯಾ?

ರವಿ: ಅಲ್ಲ, ಇನ್ನು ಬೇಡ! ಉತ್ತಮ



ಸಮಾಜದಲ್ಲಿ, ಉತ್ತಮ ಪರೀಕ್ಷೆಗಳಿಗಾಗಿ ಓದುತ್ತೇನೆ. ಮತ್ತೆ ನೀನು? ನಿನ್ನ ಪಿಎಚ್‌ಡಿ ಓದುವುದನ್ನು ನಿಲ್ಲಿಸುತ್ತೀಯಾ?

ಗೋಪಾಲ: ಆರು ತಿಂಗಳ ಹಿಂದೆ ಕ್ಯಾಪಿಟಲ್ ಓದಲು ಶುರು ಮಾಡಿ ಎರಡು ಸಲ ಓದಿದ ಮೇಲೆ, ನನ್ನ ಪಿ.ಎಚ್.ಡಿ. ಮುಗಿದ ನಂತರ, ಈ ವಿಷಯವನ್ನೇ ಆಲೋಚಿಸುತ್ತಿದ್ದೇನೆ ನಿನ್ನೆ ಮೊನ್ನೆಯಿಂದ.

ರವಿ: ಏನು ಆಲೋಚಿಸುತ್ತಿದ್ದೀಯ ಹೇಳು. ಬೇಗ ಹೇಳು!

ಗೋಪಾಲ: ನಾವು ಉತ್ತಮ ಸಮಾಜಕ್ಕಾಗಿ ಯೋಚಿಸಬೇಕು.

ರವಿ: ಅಂದರೆ, ಕಮ್ಯುನಿಸ್ಟರಾಗಲು ಬಯಸುತ್ತೀರಿ. ಅಷ್ಟೆತಾನೆ?

ಗೋಪಾಲ: 'ಅಷ್ಟೇತಾನೆ' ಅನ್ನೋದಲ್ಲ ರವಿ! ಅದೇನು ಚಿಕ್ಕ ಪುಟ್ಟ ಸುಲಭವಾದ ಕೆಲಸ ಅಂದ್ಕೊಂಡಿದ್ದೀಯಾ? 'ಪ್ರಾಣ ಹೋದರೂ ಹೋಗಬಹುದು' ಎಂದುಕೊಳ್ಳುವ ಕೆಲಸ ಅದು.

ರವಿ: ಆದರೆ, ಅದೆಲ್ಲಾ ಹೇಗೆ ನಡೆಯಬೇಕು? ಶ್ರಮದ ಶೋಷಣೆಗೆ ಒಳಗಾದ ಜನರೆಲ್ಲರೂ, ಈ ಸಮಸ್ಯೆಯನ್ನು ಅರಿತಿರುವ ಒಂದಷ್ಟು ಶೋಷಕರು ಕೂಡಾ ಬದಲಾಗಬೇಕು. ನನಗೆ ಅದೇ ಅನಿಸುತ್ತಿದೆ.

ಗೋಪಾಲ: ಬದಲಾವಣೆ ಎಂಬುದು ಇಂದು, ನಾಳೆಯದಲ್ಲ! ಚರಿತ್ರೆಯಲ್ಲಿ ಅದು ನಡೆದುಹೋಗುತ್ತದೆ. ಬದಲಾಗುತ್ತಿದ್ದಾರೆ, ಬದಲಾಗಿ ಹೋಗುತ್ತಾರೆ. ಮೊದಲು ಕಾರ್ಲ್ ಮಾರ್ಕ್ಸ್ ಆ ರೀತಿ ಬದಲಾದವರು! ಅವರ ತಂದೆ ವಕೀಲರಾಗಿದ್ದರೂ, ಅವರೇನು ಹೆಚ್ಚು ಶ್ರೀಮಂತರಾಗಿರಲಿಲ್ಲ. ಅವರು ದೇವರೆಂಬ ಮೂಢ ನಂಬಿಕೆಗಳಿಲ್ಲದೆ, ತಮ್ಮ ಪದವಿ ಪಡೆಯುವಾಗಲೇ ಕಲಿತು, ಕ್ರಮೇಣ ಸಮಾಜದಲ್ಲಿನ ಬದಲಾವಣೆಗಳತ್ತ ತಮ್ಮ ಗಮನವನ್ನು ತಿರುಗಿಸಿದರು. ಅವರಿಗಿಂತ ಎರಡು ವರ್ಷ ಕಿರಿಯವರಾದ ಎಂಗೆಲ್ಸ್ ಒಬ್ಬ ದೊಡ್ಡ ಶ್ರೀಮಂತರ ಮಗ. ಆದರೇನು, ಸಮಾಜದಲ್ಲಿನ ಶೋಷಣೆಯ ವಿಷಯಗಳನ್ನು ತಿಳಿದು ಮಾರ್ಕ್ಸ್ ಜೊತೆ ಎಂಗೆಲ್ಸ್ ಕೂಡಾ ಸೇರಿಕೊಂಡರು. ಶ್ರೀಮಂತ ಮಕ್ಕಳು ಕೂಡಾ ಕಮ್ಯುನಿಸ್ಟರಾಗುತ್ತಾರೆ ಎಂಬುದಕ್ಕೆ ಇದು ಒಂದು ಉದಾಹರಣೆ!

ರವಿ: ಸಾಕು! ಆ ಉದಾಹರಣೆ ಸಾಕು! ಆದರೆ ಸುಲಿಗೆಕೋರರ ವರ್ಗ ಬದಲಾಗುತ್ತದೆ ಎಂದು ನಾವು ಊಹಿಸಬಹುದೇ ಗೋಪಾಲ್?

ಗೋಪಾಲ: ಆ ವರ್ಗದಲ್ಲಿ ಕೂಡಾ ಕೆಲವರು ತಿಳಿದುಕೊಂಡು ಬದಲಾಗುತ್ತಾರೆ. ಆ ವರ್ಗದ ಸಂಪೂರ್ಣ ಪರಿವರ್ತನೆಯು ಕಾರ್ಮಿಕ ವರ್ಗದ ಕೈಯಲ್ಲಿದೆ!

(ಮುಂದುವರಿಯುತ್ತದೆ)

ಜನಾದೇಶವನ್ನು ಮರೆತು ನಡೆದಿರುವ ರಾಜ್ಯ ಸರಕಾರ

ರಾಜ್ಯದಲ್ಲಿ 2019 ರಿಂದ 2023 ರವರೆಗೆ ಅಧಿಕಾರ ನಡೆಸಿದ ಬಿಜೆಪಿ ಸರಕಾರದ ಜನದ್ರೋಹ, ದುರಾಡಳಿತ, ಕೋಮುವಾದ ಮುಂ.ಗಳಿಂದ ರೋಸಿ ಹೋದ ಜನರು ಬದಲಾವಣೆಯನ್ನು ಬಯಸಿ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತಂದರು. ಸ್ಪಷ್ಟ ಬಹುಮತವನ್ನೂ ನೀಡಿದರು.

ಬಿಜೆಪಿ ಪಕ್ಷದ ದುಷ್ಟ ಆಡಳಿತಕ್ಕೆ ಬದಲಿಯಾಗಿ ಜನಪರವಾದ ಪರ್ಯಾಯವನ್ನು ಬಯಸಿದ ಜನರಿಗೆ ರಾಜ್ಯದ ಕಾಂಗ್ರೆಸ್ ಸರಕಾರ ಹೇಗೆ ಸ್ಪಂದಿಸಿದೆ ಎಂದು ನೋಡಿಕೊಳ್ಳಲೇಬೇಕಾದ ಸಮಯ ಇದೀಗ ಬಂದಿದೆ.

ಕಳೆದ ಸುಮಾರು ಹದಿನಾಲ್ಕು ತಿಂಗಳ ಕಾಂಗ್ರೆಸ್ ಸರಕಾರದ ಆಡಳಿತ ಬಹಳ ನಿರಾಶಾದಾಯಕವಾಗಿದೆ. ಮತ್ತು ಜನವಿರೋಧಿ ಹಾದಿಯಲ್ಲಿವೆ. ಸರಕಾರ ಈಗಲಾದರೂ ಎಚ್ಚರ ವಹಿಸಬೇಕಿದೆ.

'ಗ್ಯಾರಂಟಿ' ಜಾರಿಯಷ್ಟೆ ಸಾಲದು

ಸಂಪಾದಕೀಯ

ಕೆಲವು ಕೊರತೆಗಳಿದ್ದರೂ ರಾಜ್ಯ ಸರಕಾರ ತನ್ನ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವುದು ಸ್ವಾಗತಾರ್ಹವಾದ ವಿಷಯ. ಬರ, ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಸಮಸ್ಯೆಗಳಿಂದ ಉಸಿರುಗಟ್ಟಿರುವ ದುಡಿಯುವ ಜನರಿಗೆ ಕೊಂಚ ಉಸಿರಾಡುವ ಅವಕಾಶವನ್ನು ಈ ಗ್ಯಾರಂಟಿ ಯೋಜನೆಗಳು ನೀಡಿವೆ ಎಂಬುದು ಸ್ಪಷ್ಟ. ಆದರೆ ಕೇವಲ ಗ್ಯಾರಂಟಿ ಯೋಜನೆಗಳಷ್ಟೇ ಸಮಾಜದ ಎಲ್ಲ ಸಮಸ್ಯೆಗಳನ್ನು ನೀಗಿಸಲಾರದು ಮತ್ತು ಸಮಾಜವನ್ನು ಸಮಗ್ರ ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯಲಾರದು.

ರೈತರ ಸರಣಿ ಆತ್ಮಹತ್ಯೆ

ಕರ್ನಾಟಕ ರಾಜ್ಯದಲ್ಲಿ ಕಳೆದ 15 ತಿಂಗಳಿನಲ್ಲಿ 1,182 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆಂದು ಕಂದಾಯ ಇಲಾಖೆಯ ವರದಿ ಹೇಳಿದೆ. ಸರಕಾರದ ದಾಖಲೆಗೆ ನಿಲುಕದ ರೈತರ ಆತ್ಮಹತ್ಯೆಗಳೂ ಸಾಕಷ್ಟು ಇರುವ ಸಾಧ್ಯತೆ ಇದ್ದೇ ಇದೆ. ಕಳೆದ ವರ್ಷ ರಾಜ್ಯವನ್ನು ಕಾಡಿದ ಗಂಭೀರ ಬರ, ದುಬಾರಿ ಬಡ್ಡಿ, ಮೀಟರ್ ಬಡ್ಡಿ ದಂಧೆ, ಸಾಲ ಬಾಧೆ, ಕೃಷಿ ಬಿಕ್ಕಟ್ಟು ಈ ಆತ್ಮಹತ್ಯೆಗಳ ಹಿಂದಿನ ಪ್ರಧಾನ ಕಾರಣಗಳಾಗಿವೆ. ಕೇಂದ್ರ ಸರಕಾರದ ಅಸಹಕಾರ ಏನೇ ಇದ್ದರೂ, ರಾಜ್ಯ ಸರಕಾರ ರೈತರ ಆತ್ಮಹತ್ಯೆಗಳನ್ನು ತಡೆಯುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಕೃಷಿ ಬಿಕ್ಕಟ್ಟಿಗೆ ಕನಿಷ್ಟ ಕೇರಳ ಎಲ್.ಡಿ.ಎಫ್. ಸರಕಾರದ ಮಾದರಿಯ ಪರಿಹಾರದ ದಾರಿಯನ್ನು ಕಂಡುಕೊಳ್ಳಬೇಕಿತ್ತು. ಬಗರ್ ಹುಕುಂ ಸಾಗುವಳಿದಾರರಿಗೆ, ಕಾಯ್ದೆಯಂತೆ ಅರಣ್ಯ ಭೂಮಿ ಸಾಗುವಳಿ ಮಾಡಿದ ರೈತರಿಗೆ ಭೂಮಿ ಹಕ್ಕು ನೀಡಲು ಸರಕಾರದ ಬೊಕ್ಕಸಕ್ಕೆ ಯಾವುದೇ ವೆಚ್ಚವಾಗುವುದಿಲ್ಲ. ಆದಾಯ ಗಳಿಕೆಗಾಗಿ ಖಾಸಗಿ–ಸರಕಾರಿ ಸಹಭಾಗಿತ್ವದ ಹೆಸರಿನಲ್ಲಿ ಸರಕಾರದ ಭೂ ಸಂಪತ್ತನ್ನು ಆಸ್ತಿಗಳನ್ನು ಖಾಸಗಿಯವರಿಗೆ ಒಪ್ಪಿಸುವ ಯೋಜನೆಗಳಿಗೆ ತಡೆಹಾಕಿ ಇಂತಹ ಜನರ ಬದುಕನ್ನು ಉತ್ತಮ ಪಡಿಸುವ ಕಡೆಗೆ ಸರಕಾರ ಹೆಜ್ಜೆ ಇಡಬೇಕಿದೆ.

ಬೆಲೆ ಏರಿಕೆಗೆ ಕಾಣಿಕೆ

ರಾಜ್ಯದಲ್ಲಿಯೂ ದೇಶದಲ್ಲಿಯೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ತತ್ತರಿಸುವಂತಹ ಪರಿಸ್ಥಿತಿ ಇದೆ. ಹೀಗಿರುವಾಗ ರಾಜ್ಯ ಸರಕಾರವು ಪೆಟ್ರೋಲ್ ಮತ್ತು ಡಿಸೇಲ್‌ಗಳ ಮೇಲಿನ ಮಾರಾಟ ತೆರಿಗೆಯನ್ನು ಹೆಚ್ಚಿಸಿ ಪೆಟ್ರೋಲ್ ಡೀಸೆಲ್ ಎರಡೂ ಸಹ ತಲಾ ಸುಮಾರು 3 ರೂಪಾಯಿಗಳಷ್ಟು ಏರಲು ಕಾರಣವಾದದ್ದು ಒಂದು ಜನವಿರೋಧಿ ಕ್ರಮ. ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಎಂಬುದು ಕೇವಲ ಇಂಧನ ಬೆಲೆ ಏರಿಕೆಯಾಗಿ ಉಳಿಯುವುದಿಲ್ಲ. ಎಲ್ಲ ಅವಶ್ಯಕ ಸಾಮಾಗ್ರಿಗಳ ಸಾಗಾಣಿಕೆ ವೆಚ್ಚವನ್ನು ಮತ್ತು ಜನರ ಪ್ರಯಾಣ ವೆಚ್ಚವನ್ನು ಏರಿಸುವುದರಿಂದ ಇದು ಬಹುಮುಖಿ ಪರಿಣಾಮಗಳನ್ನು ಬೀರುತ್ತದೆ. ಅವಶ್ಯಕ ವಸ್ತುಗಳು ಮತ್ತು ಸೇವೆಗಳ ಬೆಲೆ–ದರಗಳು ಮತ್ತಷ್ಟು ಹೆಚ್ಚಲು ಕಾರಣವಾಗುತ್ತವೆ. ಈ ಬೆಲೆಏರಿಕೆ ಎಂಬುದೊಂದು ನಿರಂತರ ಸುತ್ತುವ ಚಕ್ರದಂತಾಗುತ್ತದೆ. ಜನರ ಬದುಕನ್ನು ಹೈರಾಣಾಗಿಸುತ್ತದೆ.

ಭ್ರಷ್ಟಾಚಾರದ ಕಪ್ಪು ಚುಕ್ಕೆ

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಯೊಬ್ಬರ ಆತ್ಮಹತ್ಯೆಯ ಕಾರಣದಿಂದ ಸ್ಫೋಟಗೊಂಡ, 94.97 ಕೋಟಿ ರೂ.ಗಳ ಹಣ ದುರುಪಯೋಗದ ಈ ಹಗರಣದ ಬಗೆಗಿನ ತನಿಖೆಯಲ್ಲಿ ಅಕ್ರಮವಾಗಿ ವರ್ಗಾಯಿಸಲಾದ ಕೋಟ್ಯಂತರ ರೂಪಾಯಿಗಳನ್ನು ವಶಪಡಿಸಿಕೊಂಡಿರುವುದು ಭ್ರಷ್ಟಾಚಾರ ನಡೆದಿರುವುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಸಚಿವರಾಗಿದ್ದ ಬಿ. ನಾಗೇಂದ್ರ ಅವರು ರಾಜಿನಾಮೆ ನೀಡಬೇಕಾಗಿ ಬಂದ ಈ ಹಗರಣ ಸರಕಾರದ ಪಾಲಿಗೆ ಒಂದು ಕಪ್ಪು ಚುಕ್ಕೆಯಾಗಿದೆ.

ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆಯಲ್ಲಿ ಬದಲಿ ನಿವೇಶನ ನೀಡಿಕೆ ಹೆಸರಿನಲ್ಲಿ ಭ್ರಷ್ಟಾಚಾರ ಹಾಗೂ ನಕಲಿ ದಾಖಲೆಗಳ ಆಧಾರದಲ್ಲಿ ಪರಿಹಾರ ನೀಡಿಕೆ ಸೇರಿದಂತೆ ಹಲವು ರೀತಿಯ ಅಕ್ರಮಗಳು ನಡೆದಿರುವುದಾಗಿ ಗಂಭೀರವಾದ ಆರೋಪಗಳು ಕೇಳಿಬಂದಿವೆ. ರಾಜ್ಯದಲ್ಲಿ ನೌಕರರು ಅಧಿಕಾರಿಗಳ ಬಡ್ತಿ ಮತ್ತು ವರ್ಗಾವಣೆಗಳಲ್ಲಿಯೂ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿವೆ. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳೇ ಇದನ್ನು ದೃಢೀಕರಿಸಿ ಹೇಳಿಕೆ ನೀಡಿರುವುದು ಗಮನಾರ್ಹ. ನಿಷ್ಪಕ್ಷಪಾತವಾದ ತನಿಖೆಯ ಮೂಲಕ ಭ್ರಷ್ಟಾಚಾರಿಗಳಿಗೆ ತಕ್ಕ ಶಿಕ್ಷೆ ಕೊಡಿಸಬೇಕಾದ, ಅಕ್ರಮ, ಅನ್ಯಾಯಗಳನ್ನು ಸರಿಪಡಿಸಬೇಕಾದ ಹೊಣೆ ಸರಕಾರದ ಮೇಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚುನಾವಣೆಯ ಸಂದರ್ಭದಲ್ಲಿ ತಮ್ಮ ಆಸ್ತಿ ವಿವರ ಸಲ್ಲಿಕೆಯಲ್ಲಿ ಕೆಲವು ವಿವರ ಮರೆಮಾಚಿದ್ದಾರೆಂಬ ಆರೋಪವೂ ಕೇಳಿಬಂದಿದೆ. ಈ ವಿಷಯಗಳಲ್ಲಿ ಸತ್ಯ ಏನೆಂಬುದನ್ನು ತಿಳಿಯುವ ಜನರ ಹಕ್ಕನ್ನು ಸರಕಾರ ಗೌರವಿಸಬೇಕಿದೆ. ಭ್ರಷ್ಟಾಚಾರ–ಹಗರಣಗಳಿಲ್ಲದ

ಪುಟ 4 ಕ್ಕೆ



ಕಾರ್ಮಿಕರಿಂದ ಜುಲೈ 10 ರಂದು ರಾಜ್ಯಾದ್ಯಂತ 'ಬೇಡಿಕೆಗಳ ದಿನಾಚರಣೆ'

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆ ವಿರುದ್ದ ಹಾಗೂ ಇನ್ನಿತರ ಹಲವು ಬೇಡಿಕೆಗಳನ್ನು ಮುಂದಿಟ್ಟು, ಜುಲೈ 10ರಂದು ದೇಶಾದ್ಯಂತ ಕಾರ್ಮಿಕ ವರ್ಗದ ನೇತೃತ್ವದಲ್ಲಿ 'ಬೇಡಿಕೆ ದಿನಾಚರಣೆ' ನಡೆಸಬೇಕೆಂಬ ಸಿಐಟಿಯು ಕೇಂದ್ರ ಸಮಿತಿಯ ಕರೆಯ ಮೇರೆಗೆ ದೇಶಾದ್ಯಂತ ಬೇಡಿಕೆ ದಿನಾಚರಣೆ ನಡೆಯಿತು. ಇದರ ಅಂಗವಾಗಿ ಜುಲೈ 10ರಂದು ಸಿಐಟಿಯು ರಾಜ್ಯದ ಹಲವೆಡೆ ಪ್ರತಿಭಟನೆಗಳನ್ನು ಹಮ್ಮಿಕೊಳ್ಳುವ ಮೂಲಕ ಬೇಡಿಕೆಗಳ ದಿನಾಚರಣೆ ನಡೆಸಿ, ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಕಾರ್ಮಿಕ ಕಾನೂನುಗಳನ್ನು ಸಂಹಿತೆಯನ್ನಾಗಿ ರೂಪಿಸಿ ಜಾರಿ ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಕಾರ್ಮಿಕರು ಸಂಘ ರಚಿಸಿಕೊಳ್ಳಲು ಮತ್ತು ತಮ್ಮ ಬೇಡಿಕೆಗಳಿಗಾಗಿ ಮುಷ್ಕರಗಳನ್ನು ಸಂಘಟಿಸದಂತೆ ಮಾಡಿ, ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡಲು ಅದು ಕಾರ್ಮಿಕ ಸಂಹಿತೆಗಳನ್ನು ತಂದಿದೆ. ಕಾರ್ಮಿಕ ಕಾನೂನುಗಳನ್ನು ಸಂಹಿತೆಯನ್ನಾಗಿ ರೂಪಿಸಿ ನಾಲ್ಕೈದು ವರ್ಷ ಕಳೆದರೂ, ಕಾರ್ಮಿಕ ವರ್ಗದ ಸಮರಧೀರ ಹೋರಾಟದಿಂದಾಗಿ ಇಲ್ಲಿಯವರೆಗೆ ಅದರ ಅನುಷ್ಠಾನಕ್ಕೆ ಆದೇಶ ನೀಡಲು ಹೆದರುತ್ತಿದ್ದ ಕೇಂದ್ರದ ಬಿಜೆಪಿ ಸರ್ಕಾರ, ಈಗ ಮಿತ್ರ ಪಕ್ಷಗಳೊಂದಿಗೆ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ಆದೇಶ ನೀಡಲು ಸಿದ್ಧವಾಗಿದೆ.

ಕಾರ್ಮಿಕ ಸಂಹಿತೆಗಳನ್ನು ಕೈಬಿಡಬೇಕು. ರಾಷ್ಟ್ರೀಯ ಹಣಗಳಿಕೆ ಪೈಪ್‌ಲೈನ್ (NMP) ಅನ್ನು ಕೈಬಿಡಬೇಕು ಮತ್ತು ಖಾಸಗೀಕರಣದ ಇತರ ರೂಪಗಳನ್ನು ನಿಲ್ಲಿಸಬೇಕು. ಎಲ್ಲಾ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ವೇತನ 26,000 ರೂ. ನಿಗದಿಯಾಗಬೇಕು. ಗುತ್ತಿಗೆದಾರರನ್ನು ಬದಲಾಯಿಸಿದಾಗಲೂ ಗುತ್ತಿಗೆ ಕಾರ್ಮಿಕರನ್ನು ಮುಂದುವರೆಸುವ ಮೂಲಕ, ಗುತ್ತಿಗೆ ಕಾರ್ಮಿಕರಿಗೆ ಕೆಲಸದ ಭದ್ರತೆಯನ್ನು ಖಾತ್ರಿಪಡಿಸಬೇಕು. ಖಾಯಂ ಕಾರ್ಮಿಕರಂತೆ ಅದೇ ಕೆಲಸವನ್ನು ಮಾಡುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ಸಮಾನ ವೇತನ ಮತ್ತು ಪ್ರಯೋಜನಗಳು ಸಿಗುವಂತಾಗಬೇಕು. ಅಗ್ನಿವೀರ್, ಯುದ್ಧವೀರ್ ಮತ್ತು ಕೊಯ್ಲುವೀರ್ ಮತ್ತು ಇತರ ನಿಗದಿತ ಅವಧಿಯ ಉದ್ಯೋಗಗಳ ನೇಮಕಾತಿ ನಿಯಮವನ್ನು ಕೈಬಿಡಬೇಕು ಮತ್ತು ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕು. ಕಾರ್ಮಿಕರ EPF, EPS ಮತ್ತು EDLI ಬಾಕಿಗಳನ್ನು ಪಾವತಿಸಲು ಡೀಫಾಲ್ಟ್ ಮಾಡುವ ಉದ್ಯೋಗದಾತರ ಮೇಲಿನ ದಂಡ ಶುಲ್ಕವನ್ನು ಕಡಿಮೆ ಮಾಡುವ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು. ಹೊಸ ಪಿಂಚಣಿ ಯೋಜನೆ ಕೈಬಿಟ್ಟು ಹಳೆಯ ಪಿಂಚಣಿ ಯೋಜನೆ ಪುನಃಸ್ಥಾಪನೆ ಮಾಡಬೇಕು. ಇಪಿಎಸ್ ಪಿಂಚಣಿದಾರರಿಗೆ ಕನಿಷ್ಟ 9000 ರೂ. ಅಥವಾ ಅದಕ್ಕಿಂತ ಹೆಚ್ಚಿನ ಪಿಂಚಣಿಯನ್ನು ಖಚಿತಪಡಿಸಬೇಕು. ಸ್ಕೀಂ ವರ್ಕರ್ ಗಳನ್ನು–ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು, ಆಶಾಗಳು ಮತ್ತು ಮಧ್ಯಾಹ್ನದ ಊಟದ ಕಾರ್ಯಕರ್ತರು ಮತ್ತು ಇತರರು–ಕಾರ್ಮಿಕರೆಂದು ಗುರುತಿಸಿ ಮತ್ತು ಅವರೆಲ್ಲರಿಗೂ ಪಿಂಚಣಿ ಸೇರಿದಂತೆ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆ ಪ್ರಯೋಜನಗಳನ್ನು ಖಾತರಿಪಡಿಸಬೇಕು. ಎಂಬಿತ್ಯಾದಿ ಬೇಡಿಕೆಗಳಿಗೆ ಒತ್ತಾಯಿಸಿ ದೇಶಾದ್ಯಂತ ರ್‍ಯಾಲಿ ಹಾಗೂ ಸಭೆಗಳನ್ನು ನಡೆಸಲಾಯಿತು. ಕೇಂದ್ರದಲ್ಲಿ ಹೊಸದಾಗಿ ಸರ್ಕಾರ ರಚನೆಯಾದ ನಂತರ ಕಾರ್ಮಿಕ ವರ್ಗ ಮೊದಲ ಬಾರಿಗೆ ಧ್ವನಿ ಎತ್ತಿದೆ.

ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಬಜೆಟ್‌ಗೂ ಮುನ್ನ ಕಾರ್ಮಿಕ ಸಂಘಟನೆಗಳು ನೀಡಿದ ಸಲಹೆಗಳಿಗೆ ಕಿವಿಗೊಡಲಿಲ್ಲ. ಆದರೆ, ಮೂರನೆಯ ಬಾರಿ ಅಧಿಕಾರಕ್ಕೆ ಬಂದ ಒಂದು ವಾರದಲ್ಲಿ, 'ಹಿಂದಿನ ತಿಂಗಳುಗಳ' ಭವಿಷ್ಯ ನಿಧಿಯನ್ನು ಪಾವತಿಸದ ಉದ್ಯೋಗದಾತರಿಗೆ ಭಾರಿ ಸಹಾಯಧನವನ್ನು ಘೋಷಿಸಿತು. ಭವಿಷ್ಯ ನಿಧಿ ಪಾವತಿಯಲ್ಲಿ 6 ತಿಂಗಳ ವಿಳಂಬಕ್ಕೆ ಉದ್ಯೋಗದಾತರಿಗೆ ವಿಧಿಸಲಾಗಿದ್ದ ಶೇ. 25 ದಂಡವನ್ನು ಶೇ. 5ಕ್ಕೆ ಇಳಿಸಲಾಗಿದೆ. ಈಗ ಸಮಯಕ್ಕೆ ಸರಿಯಾಗಿ ಪಾವತಿಸುವ ಉದ್ಯೋಗದಾತರು ಸಹ ಭವಿಷ್ಯದಲ್ಲಿ ಪಿಎಫ್ ಪಾವತಿಸುವುದಿಲ್ಲ. ಪಿಂಚಣಿ ಕಳೆದುಕೊಂಡಿರುವ ನಿವೃತ್ತ ಕಾರ್ಮಿಕರು

ಪುಟ 4 ಕ್ಕೆ



ಕನಸಿನ ಹುಡುಗ ಮದು ಇನ್ನಿಲ್ಲ





ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (AIAWU) ದ ರಾಜ್ಯ ಸಮಿತಿ ಸದಸ್ಯ, ಮಂಡ್ಯ ಜಿಲ್ಲಾ ಸಮಿತಿ ಸಹ ಕಾರ್ಯದರ್ಶಿ ಹಾಗೂ ಪತ್ರಕರ್ತರಾದ ಬಿ.ಎ.ಮಧು ಕುಮಾರ್ ಜುಲೈ 6ರಂದು ರಸ್ತೆ ಅಪಘಾತವೊಂದರಲ್ಲಿ ಸಾವನ್ನಪ್ಪಿದ್ದಾರೆ. ಅಂದು ರಾತ್ರಿ 10 ಗಂಟೆ ಸುಮಾರಿಗೆ ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದ ಟಿ.ಬಿ.ಸರ್ಕಲ್ ಬಳಿ ಟೆಂಪೋ-ಬೈಕ್ ನಡುವೆ ಡಿಕ್ಕಿ ನಡೆದು ಮರಣ ಹೊಂದಿದರು. ಇವರಿಗೆ 32 ವರ್ಷ ವಯಸ್ಸಾಗಿತ್ತು.

ಸಮಾನತೆಯ ಕನಸಿನ ನನಸಿಗಾಗಿ ಅತೊರೆಯುತ್ತಿದ್ದ ಮದುಕುಮಾರ್‌ಗೆ ಅಕಾಲಿಕವಾಗಿ, ಅದೂ ಕೂಡ ಅತಿ ಚಿಕ್ಕ ವಯಸ್ಸಿನಲ್ಲಿ ಸಾವಾಯಿತಲ್ಲ ಎನ್ನುವುದೇ ನೋವಿನ ವಿಚಾರ. ಅಮ್ಮ ತೆಲುಗು ಹಾಗೂ ಅಪ್ಪ ತಮಿಳು ಭಾಷೆಯವರು. ಮಗ ಓದಬಾರದೆಂದು ಹೊಡೆದು ಹಲ್ಲು ಮುರಿದಿದ್ದ ಅಪ್ಪ, ನಂತರ ಮದುಕುಮಾರ್ ಅತಂತ್ರ ಸ್ಥಿತಿಯಲ್ಲಿ ಅಲೆದಾಡಿ, ಕೊನೆಗೆ ಮದ್ದೂರು ತಾಲ್ಲೂಕು ಬೆಸಗರಳ್ಳಿ ಗ್ರಾಮದಲ್ಲಿ ವಾಸಿಸುತ್ತಿದ್ದರು. ಭಾರತಿನಗರದಲ್ಲಿ ಕಾಲೇಜು ವ್ಯಾಸಂಗ ಮಾಡುತ್ತಿದ್ದಾಗಲೆ ವಿದ್ಯಾರ್ಥಿ ಸಂಘಟನೆ Sfi ಸಂಘಟನೆಯ ಸಂಪರ್ಕಕ್ಕೆ ಬಂದು, ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಪಾಸ್ ಹೋರಾಟ ಯಶಸ್ವಿಗೊಳಿಸಿದರು. ನಂತರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಕ್ಕಾಗಿ ಹೋರಾಟ ನಡೆಸಿದ್ದಾರೆ. BEd ಓದಿರುವ ಮದು, ಅವರ ವಾಸ ಮಾಡುವ ಪ್ರದೇಶದಲ್ಲಿ ಸುಮಾರು 21 ಕುಟುಂಬಕ್ಕೆ ಮನೆಗಳಿಗೆ ಖಾತೆ ಮಾಡಿಸಲು, ಬೆಸಗರಹಳ್ಳಿಯಿಂದ ಮಂಡ್ಯ ಜಿಲ್ಲಾಡಳಿತ ಕಛೇರಿಗೆ ಪಾದಯಾತ್ರೆ ಮೂಲಕ ಯಶಸ್ವಿ ಹೋರಾಟ ನಡೆಸಿದ ಸಂಗಾತಿ ಮಧುಕುಮಾರ್. ಇದೂ ಅಲ್ಲದೆ, ಮನೆ ನಿವೇಶನ ಹಕ್ಕುಪತ್ರ, ರೇಷನ್ ಗಾಗಿ ಮುಂಚೂಣಿ ಹೋರಾಟ ನಡೆಸಿದ್ದಾರೆ. ಪಿಂಚಣಿ ಹೋರಾಟ ನಡೆಸುವ ಮೂಲಕ ಹಲವು ವೃದ್ದರಿಗೆ ಅನುಕೂಲ ಪಡೆಯಲು ಸಾಧ್ಯವಾಗಿದೆ. ವಿದ್ಯಾರ್ಥಿ ಸಂಘಟನೆ Sfi ನಲ್ಲಿದ್ದಾಗಲೇ sfi ನ ಸಂಪರ್ಕದಲ್ಲಿದ್ದ ದೀಪಾ ಎಂಬ ಯುವತಿಯನ್ನು, ಕರ್ನಾಟಕ ಪ್ರಾಂತ ಕೃಷಿಕೂಲಿಕಾರ ಸಂಘಟನೆಯ ಮುಖಂಡರಾದ ಜಿ.ಎನ್.ನಾಗರಾಜುರವರು ಮದುವೆ ಮಾಡಿಸುವ ಮೂಲಕ, ಅವರಿಬ್ಬರೂ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಜಿ.ಎನ್. ಅವರೆ ನನ್ನ ಮಗನಿಗೆ ಹೆಸರಿಡಬೇಕೆಂದು ಕೇಳಿದಾಗ, ಮಗುವಿಗೆ ಪ್ರಬುದ್ಧ ಎಂದು ಹೆಸರಿಟ್ಟರು ಎಂದು ಅತ್ಯಂತ ಖುಷಿಯಾಗಿ ಎಲ್ಲರೊಟ್ಟಿಗೆ ಹೇಳುತ್ತಿದ್ದ ಮಧುಕುಮಾರ್, ನಾಲ್ಕು ವರ್ಷದ ಪುಟ್ಟ ಪ್ರಬುದ್ಧ ಹಾಗು ಅವರ ಪತ್ನಿ ಮೂರು ತಿಂಗಳ ಗರ್ಭಿಣಿ ದೀಪಾರವರನ್ನು ಅಕಾಲಿಕವಾಗಿ ಅಗಲಿರುವುದು ಅತ್ಯಂತ ನೋವಿನ ಸಂಗತಿ. ಅವರ ಕುಟುಂಬ ಹಾಗೂ ಚಳುವಳಿಗೆ ತುಂಬಲಾರದ ನಷ್ಟ. ಯಾವುದೆ ಆಸ್ತಿ ಇಲ್ಲದ ಅಪ್ಪ ಅಮ್ಮನಿಲ್ಲದ ಮದುಕುಮಾರ್, ಕ್ರಿಯಾಶೀಲವಾಗಿ ಕಮ್ಯೂನಿಸ್ಟ್ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದವರು. ಹೆಂಡತಿ ದೀಪಾಳಿಗೂ ಅಪ್ಪ ಅಮ್ಮ ಇಲ್ಲ. ಬಾಳ ಸಂಗಾತಿ ಮದುಕುಮಾರ್‌ನನ್ನು ಕಳೆದುಕೊಂಡು ಕುಟುಂಬ ಅಕ್ಷರ ಸಹ ಬೀದಿಗೆ ಬಿದ್ದಿದೆ. ಸಂಘಟನೆಯ ಸಹಾಯದಿಂದ ಕುಟುಂಬಕ್ಕೆ ಹೆಚ್ಚಿನ ಸಹಕಾರದ ಅಗತ್ಯವಿದೆ. ಮಂಡ್ಯ ಜಿಲ್ಲೆಯ ಪ್ರಗತಿಪರ ಸಂಘಟನೆಗಳು, ಸಹಾಯಕ್ಕೆ ನಿಲ್ಲಬೇಕಿದೆ. "ಬಂಗೈಯಲ್ಲಿ ಬದುಕನ್ನು ಉತ್ತಮವಾಗಿ ಕಟ್ಟಿಕೊಂಡ ಮದುಕುಮಾರ್ ಬದುಕೆ ಒಂದು ಆದರ್ಶ".

–ಸಿ.ಕುಮಾರಿ

ಜನಾದೇಶವನ್ನು ಮರೆತು ನಡೆದಿರುವ... ಪುಟ 3 ರಿಂದ

ದಾರಿಯಲ್ಲಿ ತಮ್ಮ ಸರಕಾರ ಸಾಗಬೇಕು ಎಂಬ ಎಚ್ಚರ ಆಡಳಿತ ನಡೆಸುವವರಿಗೆ ಇಲ್ಲವಾದರೆ ಜನರು ಅಂತಹವರನ್ನು ಖಂಡಿತ ಕ್ಷಮಿಸುವುದಿಲ್ಲ.

ಅಕಾಡೆಮಿಗಳ ಸ್ವಾಯುತ್ತತೆಗೆ ಧಕ್ಕೆ

ಇಲ್ಲಿಯವರೆಗೂ ಸಾಹಿತಿಗಳು, ಸಾಂಸ್ಕೃತಿಕ ಕ್ಷೇತ್ರದ ಗಣ್ಯರ ಬಗೆಗೆ ವಿಶೇಷ ಗೌರವ ಹೊಂದಿರುವಂತೆ ಕಾಣಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತದಲ್ಲಿ ರಾಜ್ಯದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಅಕಾಡೆಮಿಗಳ ಸ್ವಾಯುತ್ತತೆಗೆ ಧಕ್ಕೆ ತರುವಂತಹ ಬೆಳವಣಿಗೆ ಆಗಿದ್ದು ತುಂಬಾ ಖೇದಕರವಾದ ವಿಷಯ.

ಕಾಂಗ್ರೆಸ್ ಪಕ್ಷದ ರಾಜ್ಯ ಅದ್ಯಕ್ಷರೂ ಹಾಗೂ ರಾಜ್ಯದ ಉಪ ಮುಖ್ಯಮಂತ್ರಿಗಳೂ ಆಗಿರುವ ಡಿ.ಕೆ.ಶಿವಕುಮಾರ್ ಅವರ ನಿರ್ದೇಶನದಂತೆ ರಾಜ್ಯ ವಿವಿಧ ನಿಗಮ, ಮಂಡಳಿಗಳ ಅದ್ಯಕ್ಷರು ಮತ್ತು ಸದಸ್ಯರ ಸಭೆಯನ್ನು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಕರೆದಿದ್ದು, ಆ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಬಲವರ್ಧನೆಯ ಕುರಿತು ಚರ್ಚಿಸಿ ಗುರಿ ನಿಗದಿ ಪಡಿಸಿದ್ದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇಂತಹ ಒಂದು ಸಭೆಗೆ ಅಕಾಡೆಮಿಗಳ ಅದ್ಯಕ್ಷರು ಮತ್ತು ಸದಸ್ಯರನ್ನೂ ಸಹ ಆಹ್ವಾನಿಸಿದ್ದರೆಂಬ ವರದಿಗಳಿದ್ದು, ಈ ಬಗೆಗೆ ಟೀಕೆಗಳು ವ್ಯಕ್ತವಾದಾಗ ಉಪಮುಖ್ಯಮಂತ್ರಿಗಳು ಹಾಗೂ ಪಕ್ಷದ ವಕ್ತಾರರು ಅದನ್ನು ತೀರಾ ಒರಟಾಗಿ ಸಮರ್ಥಿಸಿದ್ದು, ತುಂಬಾ ಅಸೂಕ್ಷ್ಮವಾದ, ಫೂಡಲ್ ನಡೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಯಾರಿಗೇ ಆದರೂ ತಾನು ಇಚ್ಚೆ ಪಡುವ ರಾಜಕೀಯ ಪಕ್ಷದ ಸದಸ್ಯರಾಗುವ ಮತ್ತು ರಾಜಕೀಯ ಸಭೆಗಳಲ್ಲಿ ಭಾಗಿಯಾಗುವ ಹಕ್ಕು ಇದೆಯಾದರೂ ಅದು ಅವರ ವೈಯುಕ್ತಿಕ ಹಕ್ಕಾಗಿರುತ್ತದೆಯೇ ಹೊರತು, ಸ್ವಾಯುತ್ತ ಸಂಸ್ಥೆಗಳಾದ ಅಕಾಡೆಮಿಗಳ ಮುಖ್ಯಸ್ಥರಾಗಿ, ಸದಸ್ಯರಾಗಿ ಒಂದು ರಾಜಕೀಯ ಪಕ್ಷದ ಸಭೆಯಲ್ಲಿ ಪಾಲ್ಗೊಳ್ಳುವ ಹಕ್ಕು ಇರುವುದಿಲ್ಲ. ಅದು ಸರಿಯಾದುದಲ್ಲ. ಅಕಾಡೆಮಿಗಳು ಸರಕಾರದ ಇಲಾಖೆಯ ಅಥವಾ ರಾಜಕೀಯ ಪಕ್ಷದ ಕಚೇರಿಗಳ ವಿಸ್ತರಣೆಯೂ ಅಲ್ಲ. ಈ ಸೂಕ್ಷ್ಮತೆಯನ್ನು ತೋರದೇ ಹೋದರೆ ಮುಂದೆ ರಾಜ್ಯದ ಸಾಂಸ್ಕೃತಿಕ ಸಾಹಿತ್ಯಿಕ ಕ್ಷೇತ್ರಕ್ಕೆ ಗಂಭೀರ ಅಪಾಯ ಕಾದಿದೆ ಎಂದೇ ಅರ್ಥ.

ಕೋಮುವಾದಿಗಳ ಆರ್ಭಟಕ್ಕೆ ತಡೆಯಿಲ್ಲ

ರಾಜ್ಯದ ಕರಾವಳಿಯಲ್ಲಿ ಇಂದಿಗೂ ಸಂಘಪರಿವಾರದ ಪುಂಡಾಟಿಕೆ, ದಾಂಧಲೆಗಳು ನಿರಂತರವಾಗಿ ನಡೆದಿವೆ. ಕಾಂಗ್ರೆಸ್ ಸರಕಾರವು ಕೋಮುವಾದಿ ಪುಂಡಾಟಿಕೆಗಳ ವಿರುದ್ಧ ಕಠಿಣ ಸಂದೇಶ ನೀಡುವಲ್ಲಿ ವಿಫಲವಾಗಿರುವುದು ಎದ್ದು ಕಾಣುತ್ತದೆ. ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣದಲ್ಲಿ ರೌಡಿಶೀಟರ್ ಆದ ಬಿಜೆಪಿ ಯುವಮೋರ್ಚಾ ಮುಖಂಡನನ್ನು ಬಂಧಿಸಿದ್ದೇ ಕಾರಣವಾಗಿ, ಬೆಳ್ತಂಗಡಿಯ ಬಿಜೆಪಿ ಶಾಸಕ ಹರೀಶ್ ಪೂಂಜಾ ಪೊಲೀಸ್ ಠಾಣೆಗೆ ತನ್ನ ಬೆಂಬಲಿಗರೊಂದಿಗೆ ಧಾಳಿ ಇಟ್ಟು ಪೋಲಿಸರಿಗೆ ತೀವ್ರವಾದ ಬೆದರಿಕೆ ಹಾಕಿದರೂ ಸರಕಾರ ಬಹಳ ಮೃದುವಾಗಿ ನಡೆದುಕೊಂಡಿದೆ. ಭಜರಂಗದಳದ ಪುನಿತ್ ಅತ್ತಾವರ, ಮುಸ್ಲಿಮರನ್ನು ಹದ್ದುಬಸ್ತಿನಲ್ಲಿಡಲು ದಂಡವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ದ್ವೇಷ ಭಾಷಣ ಮಾಡಿದರೂ, ಇಂತಹ ಹಲವು ಪ್ರಕರಣಗಳು ನಡೆಯುತ್ತಿದ್ದರೂ ರಾಜ್ಯ ಸರಕಾರ ಮಾತ್ರ ಕೋಮುವಾದಿ ಬೆದರಿಕೆಗಳ ವಿರುದ್ಧ ಸೌಮ್ಯ ಧೋರಣೆ ತಳೆದಿರುವುದು ಒಪ್ಪತಕ್ಕದ್ದಲ್ಲ. ಸರಕಾರ ಯಾವುದೇ ಮತಾಂಧ ಶಕ್ತಿಗಳ ದುಷ್ಕೃತ್ಯಗಳ ವಿರುದ್ಧ ತನ್ನ ದೃಢ ಕ್ರಮದ ಮೂಲಕ ಕಠಿಣ ಸಂದೇಶ ನೀಡಬೇಕು. ಗೃಹ ಇಲಾಖೆಯ ದಕ್ಷತೆ ಹೆಚ್ಚಬೇಕಿದೆ.

ಹಸನಾಗಬೇಕು

ದಲಿತರು-ದುಡಿಯುವ ಜನರ ಬದುಕು

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ ಯೋಜನೆಗಳಿಗೆ ಸಂಬಂಧಿಸಿದ ಸುಮಾರು 14 ಸಾವಿರ ಕೋಟಿ ರೂಪಾಯಿಗಳನ್ನು ಗ್ಯಾರಂಟಿ ಯೋಜನೆಗಳಿಗಾಗಿ ಬಳಸಿಕೊಳ್ಳುವುದು ದಲಿತ ಸಬಲೀಕರಣದ ಆಶಯಗಳಿಗೆ ಧಕ್ಕೆ ತರುವ ನೀತಿಯಾಗಿದೆ. ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣದ ಉದ್ದೇಶಕ್ಕಾಗಿ ಸಂಗ್ರಹವಾಗಿರುವ ಸಾವಿರಾರು ಕೋಟಿ ರೂಪಾಯಿಗಳ ಮೊತ್ತವನ್ನು ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ಬಳಸದೇ, ಅಭದ್ರತೆ, ಅಪಾಯಗಳ ನಡುವೆಯೇ ಬದುಕುವ ಕಟ್ಟಡ ಕಾರ್ಮಿಕರ ಹಿತಕ್ಕಾಗಿ ಬಳಸದೇ ಅಧಿಕಾರಿಗಳ ದುಂದು ವೆಚ್ಚಕ್ಕಾಗಿ, ಹಣವನ್ನೂ ಲೂಟಿ ಹೊಡೆಯುವ ಭ್ರಷ್ಟ ಯೋಜನೆಗಳಿಗಾಗಿ ದುರ್ಬಳಕೆ ಮಾಡುತ್ತಿರುವುದು ಅಕ್ಷಮ್ಯವಾದ ಧೋರಣೆಯಾಗಿದೆ. ಅಂಗನವಾಡಿ ನೌಕರರು ಸೇರಿದಂತೆ ಹಲವು ಸ್ಕೀಂ ನೌಕರರ ಮತ್ತು ಅಸಂಘಟಿತ ಕಾರ್ಮಿಕರ ಸಮಸ್ಯೆಗಳು ಎಷ್ಟೋ ಬಗೆಹರಿಯದೇ ಉಳಿದಿವೆ.

ರಾಜ್ಯದಲ್ಲಿ ಎಷ್ಟೋ ಕಡೆಗಳಲ್ಲಿ ಸರಕಾರಿ ಶಾಲಾ ಕಾಲೇಜುಗಳು, ಆಸ್ಪತ್ರೆಗಳು ಮೂಲಭೂತ ಸೌಕರ್ಯಗಳಿಲ್ಲದೇ ಸೊರಗಿ ಹೋಗಿರುವ, ಮುಚ್ಚುವ ಹಂತಕ್ಕೆ ಬಂದಿರುವ ವರದಿಗಳು ಪುಂಕಾನುಪುಂಕವಾಗಿ ಬರುತ್ತಿವೆ. ರಾಜ್ಯದಲ್ಲಿನ ಗಂಭೀರವಾಗಿರುವ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕಾಗಿ ಸರಕಾರ ಖಾಲಿ ಹುದ್ದೆಗಳ ನೇಮಕಾತಿ ಮೂಲಕ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮೂಲಕ ಉದ್ಯೋಗ ಸೃಷ್ಟಿಗೆ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕಿದೆ. ಮೇಲೆ ಪ್ರಸ್ತಾಪಿಸಿರುವುವೆಲ್ಲವೂ ಉದಾಹರಣೆಗಳಷ್ಟೆ. ಕಾರ್ಮಿಕ ವಿರೋಧಿಯಾದ, ಬಂಡವಾಳಿಗರ ಪರವಾದ ಕಾರ್ಮಿಕ ಕಾನೂನುಗಳು ಸೇರಿದಂತೆ ಇನ್ನು ಎಷ್ಟೋ ಪ್ರಶ್ನೆಗಳು ಇತ್ಯರ್ಥವಾಗಬೇಕಿವೆ. ಕಳೆದ ಲೋಕಸಭಾ ಚುನಾವಣೆಗಳಲ್ಲಿ 28 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಕೇವಲ 9 ಕ್ಷೇತ್ರಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಗಿದೆ ಎಂಬುದು ರಾಜ್ಯ ಸರಕಾರದ ನೀತಿಗಳ ವಿಚಾರದಲ್ಲಿ ರಾಜ್ಯದ ಜನತೆ ಕೊಟ್ಟಿರುವ ಎಚ್ಚರಿಕೆಯಾಗಿದೆ. ಹಾಗೆಯೇ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮೈತ್ರಿ ತರುವ ರಾಜಕೀಯ ಮತ್ತು ಆಡಳಿತಾತ್ಮಕ ಸವಾಲುಗಳ ಅರಿವಿರಬೇಕು ಕೂಡ. ಸರಕಾರ ಸಂಪನ್ಮೂಲ ಸಂಗ್ರಹದ ಸರಿಯಾದ ದಾರಿಯನ್ನು ಹುಡುಕಿ, ಅದನ್ನು ಸಮಾಜದ ಪ್ರಗತಿಗೆ ಸಮರ್ಥವಾಗಿ ಉಪಯೋಗಿಸುವ ಮಾರ್ಗವನ್ನು ಕಂಡುಕೊಳ್ಳಬೇಕಿದೆ.

ಕಾರ್ಮಿಕರಿಂದ ಜುಲೈ 10 ರಂದು ರಾಜ್ಯಾದ್ಯಂತ 'ಬೇಡಿಕೆಗಳ ದಿನಾಚರಣೆ'.... ಪುಟ 3 ರಿಂದ

ದೇಶಾದ್ಯಂತ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಕೃಷಿ ಉತ್ಪನ್ನಗಳ ಮೇಲಿನ ಬೆಂಬಲ ಬೆಲೆಯ ಬಗ್ಗೆಯೂ ರೈತರಲ್ಲಿ ಆತಂಕವಿದೆ.

ಕೃಷಿ ಬೆಳೆಗಳಿಗೆ ಲಾಭದಾಯಕ ಬೆಂಬಲ ಬೆಲೆ ಕಾತರಿಪಡಿಸಬೇಕು, ಎಪಿಎಂಸಿ ವ್ಯವಸ್ಥೆಯನ್ನು ಬಲಪಡಿಸಬೇಕು, ರಸಗೊಬ್ಬರ ಸೇರಿದಂತೆ ಕೃಷಿಗೆ ಬಳಕೆ ಮಾಡುವ ಪರಿಕರಗಳ ಮೇಲಿನ ಸಬ್ಸಿಡಿ ಕಡಿತದ ನೀತಿಗಳನ್ನು ಕೈಬಿಡಬೇಕು, ಅಗತ್ಯ ವಸ್ತುಗಳ ಬಲೆ ಏರಿಕೆಗೆ ಕಡಿವಾಣ ಹಾಕಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಕಾರ್ಮಿಕರು ಸರ್ಕಾರದ ಮುಂದಿಟ್ಟಿದ್ದಾರೆ.

ಮಂಗಳೂರು, ಮಂಡ್ಯ, ಹಾಸನ, ರಾಯಚೂರು, ಕಲಬುರುಗಿ, ಹಗರಿಬೊಮ್ಮನಹಳ್ಳಿ, ಮೊಣಕಾಲ್ಮೂರು, ಸಿಂದನೂರು ಮತ್ತಿತರೆ ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಪ್ರತಿಭಟನೆಯ ನಂತರ ಜಿಲ್ಲಾ ಮಟ್ಟದಲ್ಲಿ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ, ತಾಲ್ಲೂಕು ಮಟ್ಟದಲ್ಲಿ ನಡೆದ ಪ್ರತಿಭಟನೆ ಸಂದರ್ಭದಲ್ಲಿ ತಹಸಿಲ್ದಾರ್ ಅವರಿಗೆ ಮನವಿ ಸಲ್ಲಿಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಹೋರಾಟಗಳ ಮೂಲಕ ಮೋದಿ ಸರ್ಕಾರವನ್ನು ಮಣಿಸೋಣ–ತಪನ್ ಸೇನ್

ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳು ದೇಶದ ಕಾರ್ಮಿಕ ವರ್ಗ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸ್ವಲ್ಪ ತಾತ್ಕಾಲಿಕ ಸಮಾಧಾನ ತಂದಿದೆ. ಲೋಕಸಭೆಯಲ್ಲಿ ಬಿಜೆಪಿಗೆ ಸ್ವಂತ ಬಲದಿಂದ ಬಹುಮತ ಬಂದಿಲ್ಲ. ಮಿತ್ರ ಪಕ್ಷಗಳನ್ನು ಸೇರಿಸಿಕೊಂಡು ಎನ್.ಡಿ.ಎ. ಸರ್ಕಾರ ರಚಿಸಿದೆ. ಮೋದಿಯವರ ದುಷ್ಕೃತ್ಯಗಳನ್ನು ಸಂಪೂರ್ಣವಾಗಿ ಸೋಲಿಸಲು ಸಾಧ್ಯವಾಗದಿದ್ದರೂ, ಅವುಗಳನ್ನು ಈ ಮಟ್ಟಕ್ಕೆ ನಿಯಂತ್ರಿಸಬಹುದು ಎಂಬುದನ್ನು ಈ ಫಲಿತಾಂಶಗಳು ಸ್ಪಷ್ಟಪಡಿಸಿವೆ. ಹಿಂದಿ ಭಾಷಿಕ ಪ್ರದೇಶಗಳಲ್ಲಿನ ಚುನಾವಣೆಯ ಫಲಿತಾಂಶಗಳು ಐತಿಹಾಸಿಕ ರೈತ ಹೋರಾಟಗಳನ್ನು ನಡೆಸಿದ ರೈತರು ಮತ್ತು ಅವರ ಬೆಂಬಲಕ್ಕೆ ನಿಂತ ಕಾರ್ಮಿಕ ವರ್ಗವು ನಡೆಸಿದ ಚಳವಳಿಗಳು ಮತ್ತು ಅವರ ಬಲವಾದ ಪ್ರತಿಭಟನೆಯ ಪರಿಣಾಮವನ್ನು ಪ್ರತಿಬಿಂಬಿಸುತ್ತವೆ. ವರ್ಗ ಐಕ್ಯತೆ ಮತ್ತು ವರ್ಗ ಹೋರಾಟದ ಶಕ್ತಿಯು ನಿರಂಕುಶ ಸರಕಾರಗಳನ್ನೂ ವಿರೋಧಿಸಬಲ್ಲದು ಎಂಬುದನ್ನು ಈ ಫಲಿತಾಂಶಗಳು ಸಾಬೀತುಪಡಿಸಿವೆ. ಮೂಲಭೂತ ಅಗತ್ಯಗಳಂತಹ ವಿಷಯಗಳ ಮೇಲೆ ನಾವು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಗಮನಹರಿಸಿದರೆ, ನಾವು ಕಾರ್ಪೊರೇಟ್–ಮತಾಂಧರ ಜೋಡಿಯನ್ನು ನಿಲ್ಲಿಸಬಹುದು ಮತ್ತು ಪರಿಸ್ಥಿತಿಯನ್ನು ಬದಲಾಯಿಸಬಹುದು ಎಂಬ ಸತ್ಯವನ್ನು ಅವರು ಸಾಬೀತುಪಡಿಸಿದ್ದಾರೆ.

ಹತಾಶೆಗೊಂಡ ಬಿಜೆಪಿ ದ್ವೇಷಪೂರಿತ ಭಾಷಣಗಳು, ಕ್ರೂರ ಮತ್ತು ಅನಾಗರಿಕ ವರ್ತನೆಗಳಿಂದ ರಾಜಕೀಯ ವಾತಾವರಣವನ್ನು ಕಲುಷಿತಗೊಳಿಸಿದೆ. ಇಂತಹ ಶಕ್ತಿಗಳ ಬಲ ಕುಸಿದಿರುವುದು ದೇಶದ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕೊಂಚ ನೆಮ್ಮದಿ ನೀಡಿದೆ. ಆದರೆ ಯಾವುದೇ ಗೊಂದಲ ಇರಬಾರದು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಒಡಕು ಮೂಡಿಸಿ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ತನ್ನ ನಿರಂಕುಶ ನೀತಿಗಳನ್ನು ಜಾರಿಗೆ ತರಲು ಯತ್ನಿಸುತ್ತಿದೆ. ಕಾರ್ಪೊರೇಟ್ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಈ ಸರ್ಕಾರ ನಡೆಸುತ್ತಿರುವ ಕಾರಣ, ಅದು ಶೋಷಣೆಗೆ ಅಗತ್ಯವಿರುವ ಎಲ್ಲಾ ಸಾಧನಗಳನ್ನು ಬಳಸುತ್ತಿದೆ.

ಹಿಂದಿನ ನೀತಿಗಳ ಮುಂದುವರಿಕೆ

ಬಿಜೆಪಿ ಸರ್ಕಾರ ಎಲ್ಲೆಲ್ಲಿ ತನ್ನ ಪ್ರಭಾವವಿದೆಯೋ ಅಲ್ಲೆಲ್ಲ ವ್ಯಾಪಕವಾಗಿ ನುಸುಳಲು ಪ್ರಯತ್ನಿಸುತ್ತದೆ. ಮೋದಿಯವರ ಮೂರನೇ ಸರ್ಕಾರದ ಸಚಿವರ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ಮತ್ತು ಸಂಪುಟ ಸಭೆಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತಿದೆ. ದೇಶೀಯ ಮತ್ತು ಬಹುರಾಷ್ಟ್ರೀಯ ಕಾರ್ಪೊರೇಟ್ ಗಳಿಗೆ ಜನರ ಆಸ್ತಿಯನ್ನು ಮತ್ತಷ್ಟು ಲೂಟಿ ಮಾಡಲು ಅವಕಾಶ ನೀಡುವುದು, ಅವರ ಹಿತಾಸಕ್ತಿಗಳಿಗಾಗಿ ಜನರ ಮೇಲೆ ದಾಳಿ ಮಾಡಲು ತಯಾರಿ, ಆ ಮೂಲಕ ಹಿಂದಿನ ನೀತಿಗಳ ಮುಂದುವರಿಕೆಯಾಗಿ ಸುಧಾರಣೆಗಳನ್ನು ಹೆಚ್ಚು ಉದಾರವಾಗಿ ಜಾರಿಗೆ ತರುತ್ತಾರೆ.

ವಿರೋಧ ಪಕ್ಷಗಳು ಮಾತನಾಡುವಂತಾಯಿತು

ಮೋದಿಯನ್ನು ಸೋಲಿಸಲು ಸಂಯುಕ್ತ

ಬಿಜೆಪಿ ಸರ್ಕಾರ ಎಲ್ಲೆಲ್ಲಿ ತನ್ನ ಪ್ರಭಾವವಿದೆಯೋ ಅಲ್ಲೆಲ್ಲ ವ್ಯಾಪಕವಾಗಿ ನುಸುಳಲು ಪ್ರಯತ್ನಿಸುತ್ತದೆ. ಮೋದಿಯವರ ಮೂರನೇ ಸರ್ಕಾರದ ಸಚಿವರ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ಮತ್ತು ಸಂಪುಟ ಸಭೆಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತಿದೆ. ದೇಶೀಯ ಮತ್ತು ಬಹುರಾಷ್ಟ್ರೀಯ ಕಾರ್ಪೊರೇಟ್ ಗಳಿಗೆ ಜನರ ಆಸ್ತಿಯನ್ನು ಮತ್ತಷ್ಟು ಲೂಟಿ ಮಾಡಲು ಅವಕಾಶ ನೀಡುವುದು, ಅವರ ಹಿತಾಸಕ್ತಿಗಳಿಗಾಗಿ ಜನರ ಮೇಲೆ ದಾಳಿ ಮಾಡಲು ತಯಾರಿ, ಆ ಮೂಲಕ ಹಿಂದಿನ ನೀತಿಗಳ ಮುಂದುವರಿಕೆಯಾಗಿ ಸುಧಾರಣೆಗಳನ್ನು ಹೆಚ್ಚು ಉದಾರವಾಗಿ ಜಾರಿಗೆ ತರುತ್ತಾರೆ. ಕಳೆದ ಎರಡು ಸರ್ಕಾರಗಳಲ್ಲಿ ಜಾರಿಗೆ ತಂದ ನೀತಿಗಳನ್ನು ವೇಗವಾಗಿ ತರುತ್ತಿರುವುದನ್ನು ಗಮನಿಸಿದ ತಕ್ಷಣ ನಾವು ಹೋರಾಟಗಳಿಗೆ ಸಿದ್ಧರಾಗಬೇಕು.



ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ಮತ್ತು ಕಾರ್ಮಿಕ ಸಂಘಟನೆಗಳ ಐಕ್ಯ ವೇದಿಕೆ ನೀಡಿದ ಕರೆ ಈಡೇರದಿದ್ದರೂ, ಸಾರ್ವಜನಿಕರು ಆ ಕರೆಗೆ ಓಗೊಟ್ಟಿರುವುದು ಸಕಾರಾತ್ಮಕ ಸಂಗತಿ. ಕಾರ್ಪೊರೇಟ್ ಗೋಡಿ ಮೀಡಿಯಾ ಇದನ್ನು ಧಾರ್ಮಿಕ ಆಧಾರದ ಮೇಲೆ ವಿಭಜಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಿದೆ. ಚುನಾವಣಾ ಸಮಯದಲ್ಲಿ ಮೋದಿ ಗ್ಯಾಂಗ್ ದ್ವೇಷಪೂರಿತ ಭಾಷಣಗಳು ಮತ್ತು ಸುಳ್ಳುಗಳನ್ನು ಹರಡಿತು. ಆದಾಗ್ಯೂ, ಅವರು ನಿರೀಕ್ಷಿತ ಫಲಿತಾಂಶಗಳನ್ನು ಸಾಧಿಸಲು ಸಾಧ್ಯವಾಗಲಿಲ್ಲ. ನಿರಂತರ ಕಾರ್ಮಿಕ–ರೈತ ಹೋರಾಟಗಳಲ್ಲಿ, ನಿರುದ್ಯೋಗ, ಹೆಚ್ಚಿನ ಬೆಲೆಗಳು, ಕೆಲಸದ ಸ್ಥಳದಲ್ಲಿ ಹದಗೆಟ್ಟ ಪರಿಸ್ಥಿತಿಗಳು, ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಗಳು, ಖಾಸಗೀಕರಣ ಮತ್ತು ಕೃಷಿ ಬಿಕ್ಕಟ್ಟು ಇನ್ನಿತರೆ ಜೀವನದ ಅಗತ್ಯಗಳನ್ನು ಚರ್ಚಿಸಲಾಗಿದೆ. ಈ ಹೋರಾಟಗಳೇ ವಿರೋಧ ಪಕ್ಷಗಳು ತಮ್ಮ ಪ್ರಚಾರದ ಸಮಯದಲ್ಲಿ ಮೇಲಿನ ವಿಷಯಗಳ ಬಗ್ಗೆ ಮಾತನಾಡುವಂತೆ ಮಾಡಿತು.

ಇವುಗಳೊಂದಿಗೆ ಪ್ರಜಾಪ್ರಭುತ್ವ, ಸಂವಿಧಾನ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವ ರಾಜಕೀಯ ಘೋಷಣೆಗಳನ್ನು ಸೇರಿಸಲಾಗಿದೆ. ಇದೆಲ್ಲವೂ ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಧ್ವನಿಸಿತು. ಇದರ ಪರಿಣಾಮವಾಗಿ ಉತ್ತರ ಪ್ರದೇಶದಲ್ಲಿ ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಬಿಜೆಪಿ ಸೋತಿದೆ.

ವಿರೋಧ ಪಕ್ಷವಾದ 'ಇಂಡಿಯಾ' ವೇದಿಕೆಯು ಮೇಲಿನ ಅಜೆಂಡಾಗಳ ಮೇಲೆ ಪ್ರಚಾರ ಮಾಡುವ ಮೂಲಕ, ಸ್ವಲ್ಪ ಯಶಸ್ಸಿನೊಂದಿಗೆ ಚುನಾವಣೆಯ ಲಾಭವನ್ನು ಪಡೆಯಲು ಸಾಧ್ಯವಾಯಿತು. ಇದು ಮುಂದಿನ ದಿನಗಳಲ್ಲಿ ಕಾರ್ಮಿಕ ವರ್ಗದ ಹೋರಾಟಗಳಿಗೆ ಮಾರ್ಗದರ್ಶನ ನೀಡುವ ಮಾರ್ಗವಾಗಿದೆ. ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರದ ನವ ಉದಾರೀಕರಣ ನೀತಿಗಳ ದಾಳಿಗೆ ಪ್ರತಿಯಾಗಿ ಕಾರ್ಮಿಕ ವರ್ಗದಲ್ಲಿ ವ್ಯಾಪಕ ಪ್ರಚಾರ ಮತ್ತು ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ರೈತರೊಂದಿಗೆ ಒಗ್ಗಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

ಷೇರುಪೇಟೆಯಲ್ಲಿ ಜೂಜಾಡುತ್ತಾರೆಯೇ?

ಎಕ್ಸಿಟ್ ಪೋಲ್ ಸಮಯದಲ್ಲಿ ಷೇರು ಮಾರುಕಟ್ಟೆ ಹಗರಣದಲ್ಲಿ ಸರ್ಕಾರ, ಹಣಕಾಸು ಹೂಡಿಕೆ ಮತ್ತು ಕಾರ್ಪೊರೇಟ್ ಮಾಧ್ಯಮಗಳ ಅವಿನಾಭಾವ ಸಂಬಂಧವನ್ನು ಬಹಿರಂಗಪಡಿಸಲಾಯಿತು. ಇಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆಯೆಂದರೆ, ಈ ದೇಶ ಯಾರಿಗೆ ಸೇರಿದ್ದು? ಶೇಕಡ 10ರಷ್ಟು ಜನರು ತಮ್ಮ ಸ್ವಂತ ಲಾಭಕ್ಕಾಗಿ ಷೇರುಪೇಟೆಯಲ್ಲಿ ಜೂಜಾಡುತ್ತಾರೆಯೇ? ಅಥವಾ ಈ ದೇಶಕ್ಕೆ ಸಂಪತ್ತು ಸೃಷ್ಟಿಸುತ್ತಿರುವ ಕೋಟಿಗಟ್ಟಲೆ ಕಾರ್ಮಿಕರೇ?

ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ರಚನೆಯಾದಾಗ ಕಾರ್ಪೊರೇಟ್ ಸಮುದಾಯದ ಮುಖಂಡರು ಉತ್ಪ್ರೇಕ್ಷಿತ ನಿರೀಕ್ಷೆಗಳೊಂದಿಗೆ ಸಂತಸ ವ್ಯಕ್ತಪಡಿಸಿದರು. ಕೆಲವು ಕಾರ್ಪೊರೇಟ್ ಖಾಸಗಿ ಶಕ್ತಿಗಳಿಗೆ ಅನುಕೂಲವಾಗುವಂತೆ ಮೋದಿಯವರ ಮೂರನೇ ಸರ್ಕಾರದ ಸುಧಾರಣೆಗಳು ಸರಳ ಮತ್ತು ವೇಗವಾಗಿರುತ್ತವೆ ಎಂದು ಅವರು ಭಾವಿಸುತ್ತಾರೆ. ಇದು ಬಹುಪಾಲು ಕೋಟಿ ಜನರ ಜೀವನಮಟ್ಟವನ್ನು ಹದಗೆಡಿಸುವುದಲ್ಲದೆ, ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತದೆ. ಇಂತಹ ನೀತಿಗಳಿಂದಾಗಿ ಕೆಲವರ ಅಭಿವೃದ್ಧಿಯ ವಿರುದ್ಧ ದೇಶದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ ಎಂಬುದನ್ನು ಗಮನಿಸಬೇಕು.

IMF ಪ್ರತಿಪಾದಿಸಲ್ಪಟ್ಟ ಬೆಳವಣಿಗೆ

ಇದು ವಿಶ್ವಬ್ಯಾಂಕ್, IMF ಮತ್ತು ಅಂತರರಾಷ್ಟ್ರೀಯ ಹಣಕಾಸು ಹೂಡಿಕೆಯ ಸಾಧನಗಳಾಗಿರುವ ಇತರ ಸಾಮ್ರಾಜ್ಯಶಾಹಿ ಸಂಸ್ಥೆಗಳಿಂದ ಪ್ರತಿಪಾದಿಸಲ್ಪಟ್ಟ ಬೆಳವಣಿಗೆಯಾಗಿದೆ. ಅಂತಾರಾಷ್ಟ್ರೀಯ ವಿತ್ತೀಯ ಹೂಡಿಕೆ ಮತ್ತು ಅದರ ಬೆಂಬಲಿಗರು ಈ ಹಿಂದೆ ಎರಡು ಬಾರಿ ಗೆದ್ದಿರುವ ಈ ರೀತಿಯ ಆಡಳಿತದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ.

ಈ ರೀತಿಯ ಅಭಿವೃದ್ಧಿಗಾಗಿ, ದೇಶದ ಕಾರ್ಪೊರೇಟ್ ವಲಯಗಳ ಪ್ರತಿನಿಧಿಗಳಾದ ಸಿಐಐ ಮತ್ತು ಅಸೋಚಾಮ್, ಭೂಮಿ, ಕಾರ್ಮಿಕ ಮತ್ತು ಕೃಷಿಯಲ್ಲಿ ಹೆಚ್ಚಿನ ಸುಧಾರಣೆಗಳಿಗೆ ಕರೆ ನೀಡುತ್ತಿವೆ. ಹಾಗಾಗಿ ಅವರು ಈ ದೇಶದ ಕಾರ್ಮಿಕರ ಶ್ರಮ ಶಕ್ತಿಯನ್ನು ಮತ್ತಷ್ಟು ಬಳಸಿಕೊಳ್ಳಲು ನೋಡುತ್ತಿದ್ದಾರೆ.

ಹಣಕಾಸು ಸಚಿವರಾಗಿ ಅಧಿಕಾರ ವಹಿಸಿಕೊಂಡ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಸೇರಿಕೊಂಡರು ಮತ್ತು 2014ರ ನಂತರ ಕೈಗೊಂಡ ಸುಧಾರಣೆಗಳನ್ನು ಸ್ಥೂಲ ಆರ್ಥಿಕ ಸ್ಥಿರತೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಮತ್ತಷ್ಟು ತೆಗೆದುಕೊಳ್ಳಲಾಗುವುದು ಎಂದು ಘೋಷಿಸಿದರು. ನಿರ್ಮಲಾ ಸೀತಾರಾಮನ್ ಅವರು ಜೀವನಕ್ಕೆ ದಾರಿ ಮಾಡಿಕೊಡುವ ಮುಖ್ಯ ಗುರಿಯೊಂದಿಗೆ ವ್ಯಾಪಾರವನ್ನು ಸುಲಭಗೊಳಿಸಲು ರಾಷ್ಟ್ರೀಯ ಖಜಾನೆಯಿಂದ ಕಾರ್ಪೊರೇಟ್‌ಗಳಿಗೆ ಹೆಚ್ಚಿನ ರಿಯಾಯಿತಿಗಳು ಮತ್ತು ಪ್ರೋತ್ಸಾಹಗಳನ್ನು ನೀಡಲಾಗುವುದು ಎಂದು ಉಲ್ಲೇಖಿಸಿದ್ದಾರೆ. ವಿದ್ಯುತ್, ಮೂಲಸೌಕರ್ಯಕ್ಕೆ ಸಂಬಂಧಿಸಿದ ಹಲವು ಕ್ಷೇತ್ರಗಳನ್ನು ಗುತ್ತಿಗೆ ಹೆಸರಲ್ಲಿ ಕಾರ್ಪೊರೇಟ್ ಸಂಸ್ಥೆಗಳಿಗೆ ಹಸ್ತಾಂತರಿಸಲು ಆಕೆ ಸಿದ್ಧತೆ ನಡೆಸುತ್ತಿರುವಂತಿದೆ.

ಖಾಸಗಿ ಏಕಸ್ವಾಮ್ಯವನ್ನು ತೀವ್ರವಾಗಿ ಹೆಚ್ಚಿಸಲು

ಹಿಂದಿನ ನೀತಿಗಳ ಮುಂದುವರಿಕೆಯ ಹೆಸರಿನಲ್ಲಿ ಎನ್‌ಡಿಎ ಸರ್ಕಾರವು ಎಲ್ಲಾ ಸಚಿವಾಲಯಗಳಲ್ಲಿ 100 ದಿನಗಳ ಯೋಜನೆಯನ್ನು ತರಲಿದೆ. ಇದರ ಉದ್ದೇಶ ದೇಶದಲ್ಲಿ ದುಡಿಯುವ ವರ್ಗದ ಮೇಲೆ ದಾಳಿ ಮಾಡುವುದು ಹೊರತು ಬೇರೇನೂ ಅಲ್ಲ. ಸುಧಾರಣೆಗಳನ್ನು ಸರಳೀಕರಿಸುವಲ್ಲಿನ ಮೊದಲ ಬದಲಾವಣೆಗಳ ಬಗ್ಗೆ ಈಗಾಗಲೇ ಮಾಧ್ಯಮಗಳಲ್ಲಿ ಕಥೆಗಳಿವೆ.

ಖಾಸಗಿ ಏಕಸ್ವಾಮ್ಯವನ್ನು ತೀವ್ರವಾಗಿ ಹೆಚ್ಚಿಸಲು ಆರ್ಥಿಕ ನೀತಿಗಳು ರೂಪುಗೊಳ್ಳುತ್ತಿವೆ. ಉದ್ಯೋಗದಾತರಿಗೆ ಅನುಕೂಲವಾಗುವ ರೀತಿಯಲ್ಲಿ ಉದ್ಯೋಗ ಸಂಬಂಧಗಳೂ ಬದಲಾಗಲಿವೆ ಎಂಬ ಅನಧಿಕೃತ ವರದಿಗಳು ಬರುತ್ತಿವೆ. ಕೌಶಲ್ಯ ಇಲಾಖೆಯು ಐದು ಲಕ್ಷಕ್ಕೂ ಹೆಚ್ಚು ಹೊಸ ಅಪ್ರೆಂಟಿಸ್‌ಗಳನ್ನು ಸೇರಿಸುವ ಮೂಲಕ ಶಿಷ್ಯವೃತ್ತಿ ವ್ಯವಸ್ಥೆಯನ್ನು ಉತ್ತೇಜಿಸುತ್ತಿದೆ. ಶಿಷ್ಯವೇತನ ವ್ಯವಸ್ಥೆಯನ್ನು ಪರಿಚಯಿಸುವ ಮೂಲಕ ಉತ್ಪಾದನಾ ಕಾರ್ಮಿಕರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ತೆಗೆದುಹಾಕಲಾಯಿತು ಮತ್ತು ಅವರ ಹಕ್ಕುಗಳನ್ನು ಗುಲಾಮರನ್ನಾಗಿ ಮಾಡಲಾಯಿತು. ಇದು ದುರ್ಬಲತೆ ಮತ್ತು ಅನಿಶ್ಚಿತತೆಯನ್ನು ಹೆಚ್ಚಿಸುತ್ತದೆ.

ಕಾರ್ಮಿಕ ಸಂಹಿತೆಗಳ ಅಧಿಸೂಚನೆಯು ತಮ್ಮ ತಕ್ಷಣದ ಆದ್ಯತೆಯಾಗಿದೆ ಎಂದು ಕಾರ್ಮಿಕ ಇಲಾಖೆ ಈಗಾಗಲೇ ಘೋಷಿಸಿದೆ. ಅಡ್ಡ ದಾರಿಯಲ್ಲಿ ಇವುಗಳನ್ನು ಅಳವಡಿಸುವ ಪ್ರಯತ್ನ ಈಗಾಗಲೇ ಆರಂಭವಾಗಿದೆ. ದೊಡ್ಡ

ಪುಟ 7 ಕ್ಕೆ

ನಮ್ಮ ಚಟುವಟಿಕೆ ಕೇವಲ ಕಲ್ಯಾಣ ಮತ್ತು ಪರಿಹಾರಕ್ಕಾಗಿ ಅಲ್ಲ. ನಮ್ಮ ಚಟುವಟಿಕೆಯು ವರ್ಗ ಚಳುವಳಿ ಮತ್ತು ವರ್ಗ ಸಮುದಾಯವನ್ನು ವರ್ಗ ಹೋರಾಟದ ಕೇಂದ್ರಬಿಂದುವಾಗಿ ನಿರ್ಮಿಸುವ ಸಿದ್ಧಾಂತವನ್ನು ಆಧರಿಸಿದೆ. ಕಾರ್ಮಿಕರ ಸಾಮಾಜಿಕ ಮತ್ತು ರಾಜಕೀಯ ಅಂಶಗಳಲ್ಲಿ ನಮ್ಮ ಹಸ್ತಕ್ಷೇಪವು ವರ್ಗ ಆಧಾರಿತವಾಗಿರಬೇಕು. ಇದು ಆಗಬೇಕಾದರೆ ವರ್ಗ ಹೋರಾಟದ ಸ್ಪಷ್ಟ ತಿಳುವಳಿಕೆ ಇರಬೇಕು. ಕಾರ್ಮಿಕರ ಪ್ರಜ್ಞೆಯನ್ನು ಆರ್ಥಿಕ ಮಟ್ಟದಿಂದ ಸಾಮಾಜಿಕ ಮಟ್ಟಕ್ಕೆ ಮತ್ತು ಅಲ್ಲಿಂದ ರಾಜಕೀಯ ಪ್ರಜ್ಞೆಗೆ ಏರಿಸುವ ಪ್ರಜ್ಞಾಪೂರ್ವಕ ಪ್ರಯತ್ನ ನಡೆಯಬೇಕು.

ಮೋದಿ-3 ಸರಕಾರದ ಪೂರ್ಣ ಬಜೆಟ್ 2024-25 ಹೇಗಿರಬೇಕು?

ಭಾರತದ ಮತದಾರರು 18ನೆಯ ಲೋಕಸಭೆಯ ಚುನಾವಣೆಯಲ್ಲಿ ಸ್ಪಷ್ಟವಾಗಿ ಸರ್ಕಾರದ ಆರ್ಥಿಕ ನೀತಿ ಏನಾಗಿರಬೇಕು ಎಂಬುದನ್ನು ತೋರಿಸಿದ್ದಾರೆ. ಈ ಜನಾದೇಶವು 2024-25ರ ಪೂರ್ಣ ಬಜೆಟ್ಟಿನಲ್ಲಿ ಅಭಿವ್ಯಕ್ತವಾಗಬೇಕು. ಉದ್ಯೋಗ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ ದೊರೆಯಬೇಕು. ಬೆಲೆ ಏರಿಕೆಯನ್ನು, ಮುಖ್ಯವಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಇದನ್ನು ನಿಯಂತ್ರಿಸಲು ಬಜೆಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಘೋಷಿಸಬೇಕು. 'ಪೂರೈಕೆ-ಪಣೀತ ಆರ್ಥಿಕ ನೀತಿ'ಯನ್ನು ಅನುಸರಿಸುತ್ತಾ ಬಂದಿದೆ. ಇದಕ್ಕೆ 2024-25ರ ಪೂರ್ಣ ಬಜೆಟ್ ಕೊನೆ ಹಾಡಬೇಕು. ಸಮಗ್ರ ಬೇಡಿಕೆಯನ್ನು ಬಲಪಡಿಸುವುದು ಪ್ರಸ್ತುತ ಬಜೆಟ್ಟಿನ ಮೂಲ ನೆಲೆಯಾಗಬೇಕು. ಮೋದಿ ಸರ್ಕಾರದ ಆರ್ಥಿಕ-ಸಾಮಾಜಿಕ ನೀತಿ ಬದಲಾಗುತ್ತದೆ ಎಂದು ನಂಬುವುದು ಕಷ್ಟ. ಜನಾದೇಶವನ್ನು, ಸಂಸತ್ತಿನಲ್ಲಿ ಹೆಚ್ಚಿರುವ ವಿರೋಧಪಕ್ಷಗಳ ಬಲವನ್ನು, ಸಾಮಾಜಿಕ ಮಾಧ್ಯಮವನ್ನು, ಸ್ವಂತ ಸರ್ಕಾರ ರಚನೆಗೆ ಅವಶ್ಯಕವಾದ ಸಂಸತ್ ಸ್ಥಾನಗಳನ್ನು ಪಡೆಯದಿರುವ ಸ್ಥಿತಿಯನ್ನು, ಬೆಂಬಲ ನೀಡುತ್ತಿರುವ ಪಕ್ಷಗಳ ಮೇಲಿನ ಅವಲಂಬನೆ ಮುಂತಾದ ಸೂಕ್ಷ್ಮ ಸಂಗತಿಗಳನ್ನು, ಸಮ್ಮಿಶ್ರ ಸರ್ಕಾರದ ವಾಸ್ತವವನ್ನು ಮೋದಿ ನಿರ್ಲಕ್ಷಿಸುವುದು ಅಷ್ಟೊಂದು ಸುಲಭವಲ್ಲ.

ಪ್ರೊ.ಟಿ.ಆರ್. ಚಂದ್ರಶೇಖರ

ಪ್ರಸಿದ್ಧ ಪತ್ರಕರ್ತ-ಅಂಕಣಗಾರ ಪ್ರಸಿ.ರಾಮಮನೋಹರ ರೆಡ್ಡಿ ಅವರು 18ನೆಯ ಲೋಕಸಭಾ ಚುನಾವಣೆ ಫಲಿತಾಂಶದ ಬಗ್ಗೆ ಬರೆಯುತ್ತಾ ('ಆನ್ ಅರ್ಥಕ್ವೇಕ್ ಇನ್ 2024, ಆಸ್ ಇಟ್ ವಾಸ್ ಇನ್ 1977', ದಿ ಹಿಂದು, ಜೂನ್ 13, 2024) ನಗರವಾಸಿ ಮತದಾರರು, ಸುಶಿಕ್ಷಿತ ಅಥವಾ ಮಧ್ಯಮವರ್ಗಕ್ಕೆ ಸೇರಿದವರಿಗೆ ಬದಲಾಗಿ ಗ್ರಾಮೀಣವಾಸಿ, ಸಮಾಜದ ಅಂಚಿನಲ್ಲಿರುವ, ನಿರುದ್ಯೋಗಿ ಮತದಾರರು ಕಳೆದ 10 ವರ್ಷಗಳಿಂದ ಒಂದು ರೀತಿಯ ಭ್ರಮಾತ್ಮಕ ಸುಳ್ಳುಗಳನ್ನೇ ಮುಗ್ಧ ಜನರ ತಲೆಯಲ್ಲಿ ತುಂಬಿದ್ದ ಮೋದಿ ಪ್ರಭುತ್ವವನ್ನು 'ಇನ್ನು ಸಾಕು' ಎಂದು ಹೇಳಿ ಸರ್ವಾಧಿಕಾರಿ ಆಳ್ವಿಕೆಯನ್ನು ಕೆಳಗುರುಳಿಸಿದ್ದಾರೆ ಎಂಬ ಅರ್ಥದ ಮಾತುಗಳನ್ನಾಡಿದ್ದಾರೆ. ಮೋದಿಯನ್ನು ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಾಗದಿದ್ದರೂ ಭಾರತದ ಪ್ರೌಢ ಮತದಾರರು ಪ್ರಜಾಪ್ರಭುತ್ವವನ್ನು-ಸಂವಿಧಾನವನ್ನು ಚುನಾವಣೆಯ ಮುನ್ನೆಲೆಗೆ ತಂದು ಬಿಜೆಪಿಯನ್ನು ಮಣಿಸಿದ್ದಾರೆ. ಇದರ ಬಗ್ಗೆ ನಿಜಕ್ಕೂ ಮೋದಿ ಮತ್ತು ಬಿಜೆಪಿಗೆ ತಮ್ಮನ್ನು ಮಕಾಡೆ ಮಲಗಿಸಿದವರು ಯಾರು ಎಂಬುದರ ಬಗ್ಗೆ ಜ್ಞಾನೋದಯವಾಗಿದ್ದರೆ, 2024-25ರ ಪೂರ್ಣ ಬಜೆಟ್ಟಿನಲ್ಲಿ ಆರ್ಥಿಕ ಆದ್ಯತೆಗಳು ಯಾರನ್ನು ಗುರಿಯಾಗಿಟ್ಟುಕೊಳ್ಳಬೇಕು ಎಂಬುದು ಸ್ಪಷ್ಟವಾಗಿ ಗೋಚರಿಸಬೇಕು.

ಈ ಹಿನ್ನೆಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ 'ಜಿಡಿಪಿ-ವರಮಾನ-ವ್ಯಸನ'ದಿಂದ ರೋಗಿಷ್ಟವಾಗಿದ್ದ ಮೋದಿ ಸರ್ಕಾರ ಹೊರಬಂದು ಜನರ, ಅಂದರೆ ದಿನಗೂಲಿಗಳ, ಕಾರ್ಮಿಕರ, ರೈತರ, ಮಹಿಳೆಯರ, ಯುವಜನತೆಯ ಬದುಕನ್ನು ಸಮೃದ್ಧಗೊಳಿಸುವ ಕಾರ್ಯಯೋಜನೆಗಳು ಜುಲೈ 23 ರಂದು ಮಂಡನೆಯಾಗಲಿರುವ 2024-25ರ ಪೂರ್ಣ ಬಜೆಟ್ಟಿನಲ್ಲಿ ಮೂಲದ್ರವ್ಯವಾಗಬೇಕು. ಅಮರ್ತ್ಯಸೇನ್ ಬಹಳ ಹಿಂದಿನಿಂದಲೂ ಹೇಳಿಕೊಂಡು ಬರುತ್ತಿರುವ 'ಅಭಿವೃದ್ಧಿ ಎಂಬುದು ಜನರ ಬದುಕಿನ ಸಮೃದ್ಧತೆ ಪ್ರಣಾಳಿಕೆಯೇ ವಿನಾ ಅದು ಆರ್ಥಿಕ ಸಮೃದ್ಧತೆಯ ಸಂಗತಿಯಲ್ಲ' ಎಂಬುದನ್ನು ಮೋದಿ ಅವರು ಈಗಲಾದರೂ ಅರ್ಥ ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಮೋದಿ ಸರ್ಕಾರವು ಆರ್ಥಿಕ ಅಭಿವೃದ್ಧಿಯನ್ನು 'ಜಿಡಿಪಿ' ಅಥವಾ 'ವರಮಾನ' ಬೆಳವಣಿಗೆಗೆ ಸೀಮಿತಗೊಳಿಸಿಬಿಟ್ಟಿರುವುದನ್ನು ಗಮನಿಸಬೇಕು.

ಕಳೆದ 10 ವರ್ಷಗಳಲ್ಲಿನ ಮೋದಿ ಆರ್ಥಿಕ ನೀತಿಗಳಲ್ಲಿ ಜನರು, ಜನರ ಜೀವನೋಪಾಯ, ಯುವಜನತೆಯ ಉದ್ಯೋಗ, ಆಹಾರ ಭದ್ರತೆ, ಹಸಿವು-ಅಪೌಷ್ಟಿಕತೆ ನಿವಾರಣೆ ಮುಂತಾದವು ಸ್ಥಾನವನ್ನೇ ಪಡೆದಿರಲಿಲ್ಲ. "ಐದು ಟ್ರಿಲಿಯನ್ ಡಾಲರ್ ಜಿಡಿಪಿ" ಎಂಬುದು ಅವರ ಮಂತ್ರವಾಗಿಬಿಟ್ಟಿತ್ತು. ಕಳೆದ 50 ವರ್ಷಗಳಲ್ಲಿಯೇ ನಿರುದ್ಯೋಗ ಅತ್ಯಧಿಕ ಮಟ್ಟವನ್ನು ಮೋದಿ ಆಳ್ವಿಕೆಯಲ್ಲಿ ಮುಟ್ಟಿದೆ ಎಂಬ ಅಧ್ಯಯನ ವರದಿಗಳ, ಸಾಂಖ್ಯಿಕ ಸಂಸ್ಥೆಗಳ ಅಂಕಿಸಂಖ್ಯೆಗಳನ್ನು ಮೋದಿ ಮತ್ತು ಅವರ ಸರ್ಕಾರ ಮನದಟ್ಟುಮಾಡಿಕೊಳ್ಳಲಿಲ್ಲ. ಯುವಜನತೆಗೆ ಮೋದಿ ಅವರು 'ಉದ್ಯೋಗಿಗಳಾಗಬೇಡಿ, ಉದ್ಯೋಗಧಾತರಾಗಿ' ಎಂಬ ಹುಸಿ ಸಂದೇಶವನ್ನು-ಜುಟ್ಟಿಗೆ ಮಲ್ಲಿಗೆ ಹೂವು ಮುಡಿಸುವ ಕೆಲಸ ಮಾಡುತ್ತಾ ಬಂದರು. ಕಳೆದ 10 ವರ್ಷಗಳಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಹಮ್ಮಿಕೊಂಡ ಹತ್ತಾರು ಕಾರ್ಯಕ್ರಮಗಳಲ್ಲಿ ಯುವಜನತೆಗೆ ನೇರವಾಗಿ ಉದ್ಯೋಗ ನೀಡುವ ಒಂದೂ ಕೂಡ ಇರಲಿಲ್ಲ ಎಂಬುದು ಅವರ ಆರ್ಥಿಕ ನೀತಿಯ ಬಗೆಗಿನ ಅತ್ಯಂತ ಸೌಮ್ಯ ಟೀಕೆಯಾದೀತು. ಪಿಎಂ ಸ್ವನಿಧಿ, ಪಿಎಂ ಮುದ್ರಾ ಯೋಜನೆ, ದನಜನ ಯೋಜನೆ, ಸ್ಟಾರ್ಟ್‌ಆಪ್ ಇಂಡಿಯಾ, ಸ್ಟಾಡ್‌ಅಪ್ ಇಂಡಿಯಾ, ಪಿಎಂ ವಿಶ್ವಕರ್ಮ, ಮೇಕ್-ಇನ್ ಇಂಡಿಯಾ, ಸ್ಟ್ರೀಟ್ ವೆಂಡರ್ ಆತ್ಮನಿರ್ಭರ ನಿಧಿ, ಮಿಷನ್ ಕರ್ಮಯೋಗಿ, ಸಹಕಾರ ಮಿತ್ರೋ ಯೋಜನೆ ಇತ್ಯಾದಿ ಯಾವುವೂ ನೇರವಾಗಿ ಯುವಜನತೆಗೆ ಉದ್ಯೋಗ ನೋಡುವ ಕಾರ್ಯಕ್ರಮಗಳಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಮೋದಿ ಸರ್ಕಾರವು ಕೈಗಾರಿಕೋದ್ಯಮಿಗಳನ್ನು, ಬಂಡವಳಿಗರನ್ನು, ಹೂಡಿಕೆದಾರರನ್ನು ಓಲೈಸುತ್ತಾ ಬಂದಿದೆ. ಉದಾ: ಮೋದಿ ಮತ್ತು ವಿತ್ತ ಮಂತ್ರಿ ಅವರು ಉದ್ಯಮಿಗಳನ್ನು 'ವೆಲ್ತ್ ಕ್ರಿಯೆಟರ್ಸ್' ಎಂದು ವೈಭವೀಕರಿಸುತ್ತಾ ಅವರನ್ನು ಅನುಮಾನದಿಂದ ನೋಡಬಾರದು ಎಂಬ ಬೋಧನೆಯನ್ನು ಮಾಡುತ್ತಾ ಬಂದಿದ್ದರು. ಗೌತಮ್ ಆದಾನಿ ಎಂಬ ಉದ್ಯಮಿಯನ್ನು ಆರಾಧಿಸುತ್ತಾ ಬಂದಿದ್ದರಿಂದ ಅನೇಕರು ಮೋದಿ ಅವರಿಗೆ 'ಮೋದಾನಿ' (ಮೋದಿ+ಆದಾನಿ) ಎಂದು ನಾಮಕರಣ ಮಾಡಿದ್ದರು. ಕಾರ್ಮಿಕ ವರ್ಗವನ್ನು ಉದ್ಯಮಿಗಳಿಗೆ ವಿರೋಧಿಗಳು ಎಂಬಂತೆ, 'ಅಭಿವೃದ್ಧಿಗೆ ಅಡ್ಡಿ' ಎಂದು ಭಾವಿಸಿ ಕಾರ್ಮಿಕ ಸಂಘಟನೆಗಳನ್ನು, ಕಾರ್ಮಿಕ ವರ್ಗವನ್ನು ಹೈರಾಣಗೊಳಿಸುವ ನಾಲ್ಕು ಲೇಬರ್ ಕೋಡುಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದ್ದು ನಮ್ಮ ಮುಂದಿದೆ.

ಕಳೆದ ಹತ್ತು ವರ್ಷಗಳ ಮೋದಿ ಆಳ್ವಿಕೆಯಲ್ಲಿ ಹೆಚ್ಚು ತಿರಸ್ಕಾರಕ್ಕೆ ಒಳಗಾದ ಸಾಂವಿಧಾನಿಕ ಸಂಗತಿಯೆಂದರೆ 'ಒಕ್ಕೂಟ ತತ್ವ' ಮತ್ತು 'ಒಕ್ಕೂಟ ತೆರಿಗೆ ಹಣ ವರ್ಗಾವಣೆ' ನಿಯಮ. ಈ ಬಗ್ಗೆ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಮೋದಿಯ ಭಾರತ ಒಕ್ಕೂಟ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದು, ಈ ವಿಷಯದ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಕದ ತಟ್ಟಿದ್ದು ಇಂದು ಮೋದಿ (ಕು)ಚರಿತ್ರೆಯಲ್ಲಿ ಒಂದು ಪ್ರಮುಖ ವಿದ್ಯಮಾನವಾಗಿ ಉಳಿಯುತ್ತದೆ. ನೆಹರೂ ಯುಗದಲ್ಲಿ ಉದ್ದಿಮೆಗಳು, ನೀರಾವರಿ ಯೋಜನೆಗಳು 'ಆಧುನಿಕ ದೇವಾಲಯಗಳು' ಎಂಬ ಅಭಿದಾನಕ್ಕೆ ಒಳಗಾಗಿದ್ದರೆ ಮೋದಿ ಆಳ್ವಿಕೆಯಲ್ಲಿ ದೇವಾಲಯ ನಿರ್ಮಾಣವೇ ಒಂದು ಆದ್ಯತೆಯ ಕಾರ್ಯಕ್ರವಾಗಿ ಬಿಟ್ಟಿದ್ದು ಒಂದು ರಾಜಕೀಯ ದುರಂತ. ಮತಾಂದತೆ, ಕೋಮುವಾದ, ಮುಸ್ಲಿಮ್ ತೆಗಳಿಕೆ-ಹೀಯಾಳಿಕೆ-ಲಿಂಚಿಂಗ್(ಹೇಟ್), ಸಿಎಎ ಮುಂತಾದ ಕ್ಷುದ್ರ ಸಂಗತಿಗಳನ್ನು ಭಾರತದ ಮತದಾರರು ತಿರಸ್ಕರಿಸಿದ್ದಾರೆ. ಇದು 18ನೆಯ ಲೋಕಸಭೆಯ ಚುನಾವಣೆಯ ದೊಡ್ಡ ಪಾಠವಾಗಿದೆ.



ಸಂಪತ್ತಿನ ತೆರಿಗೆ ಮತ್ತೆ ವಿಧಿಸಬೇಕು

ಇಂದು ನಮ್ಮ ಆರ್ಥಿಕತೆಯು ಎದುರಿಸುತ್ತಿರುವ ಯಮಸದೃಶ ಸಮಸ್ಯೆಯೆಂದರೆ ಹಿಮಾಲಯದೆತ್ತರಕ್ಕೆ ಏರಿಕೆಯಾಗಿರುವ 'ವರಮಾನ ಮತ್ತು ಸಂಪತ್ತಿನ ಅಸಮಾನತೆ'. ವರ್ಲ್ಡ್ ಇನೀಕ್ವಾಲಿಟಿ ಲ್ಯಾಬ್ 2024ರಲ್ಲಿ ಪ್ರಕಟಿಸಿರುವ ಥಾಮಸ್ ಪಿಕೆಟ್ಟಿ ಹಾಗೂ ಇತರರ ಪ್ರಬಂಧದಲ್ಲಿ ಭಾರತದ ಮೇಲ್ವರ್ಗದ ಶೇ. 10 ರಷ್ಟು ಜನರು ಒಟ್ಟು ವರಮಾನದಲ್ಲಿ ಶೇ. 57.7 ರಷ್ಟನ್ನು ನುಂಗಿ ನೊಣೆಯುತ್ತಿದ್ದರೆ ಉಳಿದ ಶೇ. 90 ರಷ್ಟು ಜನರು ಪಡೆದಿರುವ ಪಾಲು ಶೇ. 42.3. ಇದೇ ರೀತಿಯಲ್ಲಿ ಮೇಲ್ವರ್ಗದ ಶೇ. 10 ರಷ್ಟು ಶ್ರೀಮಂತರು ಒಟ್ಟು ಸಂಪತ್ತಿನಲ್ಲಿ ಪಡೆದಿರುವ ಪಾಲು ಶೇ. 65 ರಷ್ಟಾಗಿದ್ದರೆ ಉಳಿದ ಶೇ. 90ರಷ್ಟು ಕಡುಬಡವರ ಪಾಲು ಕೇವಲ ಶೇ. 35. ಈ ಅಸಮಾನತೆಯ ಪ್ರಮಾಣವು 1991ರಿಂದ ವೇಗವಾಗಿ ಏರಿಕೆಯಾಗುತ್ತಿದ್ದರೆ, ಮೋದಿ ಅವಧಿಯಲ್ಲಿ ಇದು ಅತ್ಯಂತ ತೀವ್ರಮಟ್ಟದಲ್ಲಿ ಏರಿಕೆಯಾಗಿರುವ ಸಾಧ್ಯತೆಯನ್ನು ಪಿಕೆಟ್ಟಿ ತಮ್ಮ ಅಧ್ಯಯನದಲ್ಲಿ ತೋರಿಸಿದ್ದಾರೆ. ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ವರಮಾನದ ವಿತರಣೆಯ ಬಗ್ಗೆ ಇಲ್ಲಸಲ್ಲದ ವಿಕೃತಿಯ ದೂಳನ್ನು ಮೋದಿ ಎಬ್ಬಿಸಿದ್ದರು. ಏಕೆಂದರೆ ಬಿಜೆಪಿಗೆ ಮತ್ತು ಅದರ ಮಾತೃ ಸಂಸ್ಥೆಯಾದ ಆರ್‌ಎಸ್‌ಎಸ್‌ಗೆ 'ಮರುವಿತರಣಾ ನ್ಯಾಯ'ದ ಬಗ್ಗೆ ನಂಬಿಕೆಯಿಲ್ಲ.

ಥಾಮಸ್ ಪಿಕೆಟ್ಟಿ ಅವರು ಜಾಗತಿಕವಾಗಿ ಅಸಮಾನತೆಯ ನಿವಾರಣೆಗೆ ಸಂಪತ್ತಿನ ತೆರಿಗೆಯನ್ನು ಶಿಫಾರಸ್ಸು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಅತಿಶ್ರೀಮಂತರು ತೆರುತ್ತಿರುವ ತೆರಿಗೆ ಪ್ರಮಾಣವು ಕಡುಬಡವರು ತೆರುತ್ತಿರುವ ತೆರಿಗೆ ಪ್ರಮಾಣಕ್ಕಿಂತ ಕಡಿಮೆ. ಏಕೆಂದರೆ ಅತಿಶ್ರೀಮಂತರಲ್ಲಿ ಸಂಪತ್ತು ಮತ್ತು ವರಮಾನಗಳ ನಡುವಿನ ಅನುಪಾತ 90:10 ರಷ್ಟಿದ್ದರೆ ಕಡುಬಡವರಲ್ಲಿ, ಕೂಲಿಕಾರರಲ್ಲಿ, ರೈತರಲ್ಲಿ ಇದು 10:90 ರಷ್ಟಿದೆ. ನಮ್ಮಲ್ಲಿ ವರಮಾನದ ಮೇಲೆ ಮಾತ್ರ ತೆರಿಗೆಯಿದೆ. ಸಂಪತ್ತಿನ ತೆರಿಗೆಯಿಲ್ಲ. ಇದನ್ನು 2016ರಲ್ಲಿ ಮೋದಿ ಸರ್ಕಾರ ರದ್ದು ಮಾಡಿತ್ತು. ಈ ಕಾರಣದಿಂದ ವರಮಾನಕ್ಕೆ ಸಂಬಂಧಿಸಿದಂತೆ ಬಡವರು ತೆರುವ ತೆರಿಗೆ ಅಧಿಕ; ಅತಿಶ್ರೀಮಂತರು ತೆರುವ ತೆರಿಗೆ ಕಡಿಮೆ. ಮೋದಿ ಸರ್ಕಾರವು ಬಂಡವಳಿಗರಿಗೆ ನೆರವು ನೀಡುವುದಕ್ಕಾಗಿ ಪ್ರತ್ಯಕ್ಷ ತೆರಿಗೆಯನ್ನು ಕಡಿಮೆ ಮಾಡುತ್ತಾ ಬಂದಿದೆ. ಉದಾ, 2019ರಲ್ಲಿ ಕಾರ್ಪೊರೇಟ್ ಇನ್‌ಕಮ್ ಟ್ಯಾಕ್ಸ್ ಅನ್ನು ಶೇ. 30 ರಿಂದ ಶೇ. 22ಕ್ಕೆ ಇಳಿಸಿದೆ ಮತ್ತು 2019ರ ನಂತರ ನೋಂದಣಿಯಾಗುವ ಉದ್ದಿಮೆಗಳಿಗೆ ಇದನ್ನು ಶೇ. 15 ರಷ್ಟು ಮಾಡಿತ್ತು. ಬಡವರು, ಕೂಲಿಕಾರರು, ಕಾರ್ಮಿಕರು, ರೈತರು ಮುಂತಾದ ದುಡಿಯುವ ವರ್ಗದ ಮೇಲೆ ಅಪ್ರತ್ಯಕ್ಷ ತೆರಿಗೆಗಳನ್ನು ದೊಡ್ಡಮಟ್ಟದಲ್ಲಿ ವಿಧಿಸಲಾಗುತ್ತಿದೆ. ಜಿಎಸ್‌ಟಿ ಸಂಗ್ರಹವು ದಾಖಲೆಯ ಮಟ್ಟದಲ್ಲಿ ಏರಿಕೆಯಾಗುತ್ತಿರುವುದನ್ನು ವಿತ್ತ ಮಂತ್ರಿ ಅವರು ದೊಡ್ಡ ಸಾಧನೆ ಎನ್ನುವಂತೆ ಬಣ್ಣಿಸುತ್ತಾರೆ. ಸರಕು-ಸೇವಾ ತೆರಿಗೆಯು ಬಡವರ ರಕ್ತ ಹೀರುವ ಅಪ್ರತ್ಯಕ್ಷ-ಪ್ರತಿಗಾಮಿ ತೆರಿಗೆಯಾಗಿದೆ.

ಈ ಬಗೆಯ ಸಮಸ್ಯೆಗಳಿಗೆ 2024-25ರ ಪೂರ್ಣ ಬಜೆಟ್ಟಿನಲ್ಲಿ ಕ್ರಮಗಳನ್ನು ಮೋದಿ ಸರ್ಕಾರ ಪ್ರಕಟಿಸಬೇಕು. ಈ ಬಜೆಟ್ಟಿನ ಮೂಲದಲ್ಲಿ ಬಡವರ-ಹಸಿದವರ ಹಿತಾಸಕ್ತಿಗಳು ಮುಖ್ಯವಾಗಬೇಕೇ ವಿನಾ ಇದು 'ಬಿಲಿಯನೇರ್ಸ್ ರಾಜ್' ಅಥವಾ "ಆದಾನಿ-ಅಂಬಾನಿ" ಸಮೂಹದ ಬಜೆಟ್ ಆಗಬಾರದು.

ಎಂ.ಎಸ್.ಪಿ.ಗೆ ಕಾನೂನು ಘೋಷಿಸಬೇಕು

ಭಾರತದ ಕೃಷಿ ಆರ್ಥಿಕತೆಯ ದುರಂತವೆಂದರೆ, ಅಲ್ಲಿ ಸಮೃದ್ಧತೆಯಾದರೂ ರೈತರು ಲಾಭಾರ್ಥಿಗಳಾಗುವುದಿಲ್ಲ ಮತ್ತು ಕೃಷಿ ಕುಸಿತದಲ್ಲಿ ಅವರು ಸಹಜವಾಗಿ ಸಂತ್ರಸ್ಥರಾಗುತ್ತಾರೆ. ಕಳೆದ ಹತ್ತಾರು ವರ್ಷಗಳಿಂದ ಭಾರತೀಯ ರೈತರು ತಾವು ಬೆಳೆದ ಬೆಳೆಗಳಿಗೆ 'ಕನಿಷ್ಟ ಬೆಂಬಲ ಬೆಲೆ' ನೀಡಬೇಕು ಎಂದು ಹೋರಾಡುತ್ತಿದ್ದಾರೆ, ಈ ಕನಿಷ್ಟ ಬೆಂಬಲ ಬೆಲೆ ಎನ್ನುವುದು ಕಾನೂನಾಗಬೇಕು ಹಾಗೂ ಇದನ್ನು ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ 'ಸಮಗ್ರ ಬೆಳೆ ವೆಚ್ಚ ಸಿ2+ಶೇ.50 ಲಾಭ'ದ ಆಧಾರದಲ್ಲಿ ನಿಗದಿಪಡಿಸಬೇಕು. ಇವೆರಡೂ ಆಗುತ್ತಿಲ್ಲ. ರೈತರ ಬಗ್ಗೆ ಮೋದಿ ಸರ್ಕಾರಕ್ಕೆ ಅಭಿಮಾನವಿಲ್ಲ. ರೈತ ಹೋರಟಗಾರರನ್ನು 'ಆಂದೋಲನ ಜೀವಿಗಳು', 'ಖಲಿಸ್ಥಾನೀಯರು', 'ಕಮ್ಯುನಿಷ್ಟರು' ಎಂದೆಲ್ಲ ಹೀಯಾಳಿಸಲಾಗುತ್ತಿದೆ. ಚುನಾವಣೆಯಲ್ಲಿನ ನೈತಿಕ ಸೋಲಿನ ಪಾಠದಿಂದಾಗಿಯಾದರೂ ಮೋದಿ ಸರ್ಕಾರವು 'ಎಂಎಸ್‌ಪಿ'ಗೆ ಕಾನೂನಾತ್ಮಕ ರೂಪ ನೀಡುವುದರ ಬಗ್ಗೆ 2024-25ರ ಪೂರ್ಣ ಬಜೆಟ್ಟಿನಲ್ಲಿ ಘೋಷಿಸಬೇಕು.

ಉದ್ದಿಮೆಗಾರರನ್ನು ಬೆಂಬಲಿಸಲಿಕ್ಕಾಗಿ ಮೋದಿ ಸರ್ಕಾರವು ಪ್ರೊಡಕ್ಷನ್ ಲಿಂಕ್ಡ್ ಇನ್‌ಸೆಂಟಿವ್(ಪಿಎಲ್‌ಐ) ಯೋಜನೆಯನ್ನು

ಪುಟ 10 ಕ್ಕೆ

ಹೈಟೆಕ್ ಗುರುಗಳ 'ಆಧ್ಯಾತ್ಮ ತರಬೇತಿ'ಯ ಅನುಭವಗಳು...



ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ದೇವಮಾನವನೆಂದು ಹೇಳಿಕೊಳ್ಳುವ ಬಾಬಾನಿಂದ ಆದ ಅನಾಹುತ, 121 ಜನರ ಸಾವುಗಳ ಬಗೆಗೆ ನಮಗೆಲ್ಲಾ ಗೊತ್ತೇ ಇದೆ. ಬೆಂಗಳೂರಿನಲ್ಲಿ ''ನಾನು ರೋಡಿಗೆ ಕಾರಿನಲ್ಲಿ ಹೋದರೆ ಸಾಕು ಟ್ರಾಫಿಕ್ ಮಾಯವಾಗುತ್ತದೆ. ನಾನಿದ್ದ ಕಡೆ ಕಾಯಿಲೆ ಇರುವುದಿಲ್ಲ'' ಎಂದೆಲ್ಲಾ ಹೇಳಿಕೊಳ್ಳುತ್ತಿದ್ದ ಹೈಟೆಕ್ ಆಧ್ಯಾತ್ಮ ಗುರುವೊಬ್ಬರ ಆಶ್ರಮದಲ್ಲಿ ಸುಮಾರು ಒಂಭತ್ತು ವರ್ಷಗಳ ಹಿಂದೆ 'ಆಧ್ಯಾತ್ಮ ತರಬೇತಿ' ಪಡೆದುಕೊಂಡಾಗಿನ ಸ್ವಾರಸ್ಯಕರ ಅನುಭವವನ್ನು ಬರೆದಿದ್ದಾರೆ ರೂಪ ರಾವ್ ಅವರು.

ರೂಪ ರಾವ್
ಮನಶಾಸ್ತ್ರಜ್ಞೆ, ಬೆಂಗಳೂರು.

"ಈ.. ನಿಯಮ ಮುರಿಯುವ ಜನರು ಯಾರು ಗೊತ್ತಾ, ಇವರೇ.. ಲಾಸ್ಟ್ ಬೆಂಚರ್ಸ್, ಪರೀಕ್ಷೆಯಲ್ಲಿ ಫೇಲ್ ಆಗಿ ಹಿಂದೆಯೇ ಉಳಿಯುತ್ತಾರೆ."

ಆ 'ಪಾಪ್ಯುಲರ್' ಎಂದು ಕರೆದುಕೊಳ್ಳುವ ಹೈಟೆಕ್ ಆಧ್ಯಾತ್ಮಿಕ ಗುರು ಹೇಳುತ್ತಲೇ ಇದ್ದರು. ಕೈ ನನ್ನತ್ತ ತೋರದಿದ್ದರೂ ಸುತ್ತಿ ಬಳಸಿ ಆ ಮಾತು ನನ್ನನ್ನೇ ಉದ್ದೇಶಿಸಿದಂತಿತ್ತು. ನಾನಲ್ಲದೆ ಇನ್ನೊಂದಿಬ್ಬರು ಮೂರು ಜನರೂ ಆ ವ್ಯಕ್ತಿಯ ನಿಯಮ ಮುರಿದವರುಗಳು.

ನನಗೋ ಎದುರಿಗೆ ಕರೆದು ಹೇಳಿದರೇ ಓಕೆ...ಎತ್ತಲೋ ಕಲ್ಲು ಬೀಸುವಂತೆ ಮಾತನಾಡಿದ್ದು ಕೋಪ ತರಿಸುತ್ತಲೇ ಇತ್ತು.

ಆ ಗುರು 'ಸೀಕ್ರೆಟ್ ಆಫ್ ಯುವರ್ ಲೈಫ್' ಎಂಬ ಪ್ರೋಗ್ರಾಮ್ ಮಾಡಿದ್ದರು. ಅವರ ಶಿಷ್ಯಂದಿರು ಒಳ್ಳೆಯ ಭರವಸೆ ಕೊಟ್ಟಿದ್ದಕ್ಕೆ ಮೂರು ದಿನದ ತರಬೇತಿಗೆ ದೊಡ್ಡ ಮೊತ್ತವನ್ನೇ ಕೊಟ್ಟು ನಾವೂ ಅದರಲ್ಲಿ ಭಾಗವಹಿಸಿದ್ದೆವು.

ನನ್ನ ಪ್ರಕಾರ ಟ್ರೈನಿಂಗ್ ಎಂದರೆ ಟು ವೇ ಕಮ್ಯೂನಿಕೇಶನ್. (ಪರಸ್ಪರ ಮಾತುಕತೆ ಸಂವಹನ ಇಲ್ಲದಿದ್ದರೆ ಅದೆಂತಹ ತರಬೇತಿ?) ಆ ಗುರುವೋ ನುಡಿಮುತ್ತುಗಳನ್ನ ಉದುರಿಸುವಂತೆ ಒಂದೇ ಸಮ ಮಾತನಾಡುತ್ತಿದ್ದರು. ನಮ್ಮಲ್ಲಿ ಯಾರೂ ಮಧ್ಯ ಬಾಯಿ ತೆರೆಯುವಂತಿರಲಿಲ್ಲ. ನನಗೋ ನೂರ ಎಂಟು ಪ್ರಶ್ನೆಗಳು. ಪ್ರಶ್ನೆ ಕೇಳಲು ಕೈ ಎತ್ತಿದ ಕೂಡಲೇ ಅವರ ಶಿಷ್ಯಂದಿರು ಶ್..ಶ್..!! ಎಂದು ಬಾಯಿಯ ಮೇಲೆ ಕೈ ತೋರಿಸುತ್ತಿದ್ದರು... ಥೇಟ್ ಎಲ್‌ಕೆಜಿ ಮಕ್ಕಳ ಹಾಗೆ.

ಆತ ಜೋಕ್ ಹೇಳುವುದು, ಅವರದ್ದೇ ಶಿಷ್ಯಗಣ ಮುಂದೆ ಕೂತು ಚಪ್ಪಾಳೆ ಹಾಕಿ ಜೋರಾಗಿ ನಗುವುದು. ಆ ಗುರುವಿನ ಪ್ರಶ್ನೆಗೆ ಅವರದ್ದೇ ಶಿಷ್ಯರು ಮಾತ್ರ ಉತ್ತರಿಸತಕ್ಕದ್ದು. ಚಟುವಟಿಕೆ ಇಲ್ಲದ ತರಬೇತಿ. ಪ್ರವಚನಕ್ಕಿಂತ ಅಸಹನೀಯ ... ನನ್ನಿಂದ ಊಹಿಸಲೂ ಸಾಧ್ಯವಿಲ್ಲದ್ದು. ಹಾಗಾಗಿ ನಾನು ಮತ್ತು ನನ್ನವರು ಮತ್ತೊಂದಿಬ್ಬರು ಸ್ವಲ್ಪ ಅಸಮಾಧಾನ ವ್ಯಕ್ತ ಪಡಿಸಿದ್ದೆವು.

ಆ ಗುರುಗಳು "ನಾನು ರೋಡಿಗೆ ಕಾರಿನಲ್ಲಿ ಹೋದರೆ ಸಾಕು ಟ್ರಾಫಿಕ್ ಮಾಯವಾಗುತ್ತದೆ. ನಾನಿದ್ದೆಡೆ ಕಾಯಿಲೆ ಇರುವುದಿಲ್ಲ." ಎಂದೆಲ್ಲಾ ಹೇಳುತ್ತಿದ್ದರು. ನಾವು ಅದನ್ನ ಕಾಮಿಡಿಯಾಗಿ ಹೇಳುತ್ತಿದ್ದಾರೆ ಅಂದುಕೊಂಡರೆ.. ಊಹುಂ, ಆ ಗುರು ಅದನ್ನು ಸೀರಿಯಸ್ ಆಗಿಯೇ ಹೇಳುತ್ತಿದ್ದರು. ನಾವಿಬ್ಬರು ಅದನ್ನೂ ಪ್ರಶ್ನೆ ಮಾಡಿದ್ದೆವು, ಅದು ಹೇಗೆ ಸಾಧ್ಯ ಅಂತ.

"ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗೆ ಇಷ್ಟು ಈಸಿ ಪರಿಹಾರ ಇದೆ, ಇವರನ್ನು ಕರೆದುಕೊಂಡು ಕೂರಿಸಿಕೊಳ್ಳಬಾರದೇಕೆ" ಎಂದು ನಾವು ಆಡಿಕೊಂಡಿದ್ದು ಅವರ ಕಿವಿಗೆ ಬಿದ್ದು ಆ ಗುರು ನಮ್ಮನ್ನು ಸುಟ್ಟು ಬಿಡುವಂತೆ ನೋಡಿದ್ದರು. ಆದರೆ ಸುಡಲಿಲ್ಲ.

ಆ ಗುರುವಿನ ಕಣ್ಣಿಗೆ ನಾವು ವಿಚಿತ್ರ ಪ್ರಾಣಿಗಳಂತೆ, ಅವಿವೇಕಿ ಅವಿಧೇಯ ಶಿಷ್ಯರಂತೆ ಕಂಡಿದ್ದೆವೇನೋ. ಆಗಾಗ ಪರೋಕ್ಷವಾಗಿ ನಮಗೆ ಟಾಂಗ್ ಕೊಡ್ತಿದ್ದರು.

"ಪುಸ್ತಕದ ಹುಳುಗಳಷ್ಟೇ"

"ಜೀವನದ ಅನುಭವವಿಲ್ಲ, ಸೊನ್ನೇ ಎಂಪ್ಟೀ ಮೈಂಡ್" ಅಂತ..

ನಾನು ಸುಮ್ಮನಿದ್ದೆ. ಇದು ಸುಮಾರು ಒಂಭತ್ತು ವರ್ಷದ ಹಿಂದಿನ ಮಾತು. ಈಗಿನಂತೆ ತಾಳ್ಮೆಯೂ ಇದ್ದಿರಲಿಲ್ಲ. ಕೋಪ ನಿಯಂತ್ರಣ ಅಷ್ಟು ಒಲಿದಿರಲಿಲ್ಲ. ಹಿಡಿದು ಬೀಳಲು ಅವಕಾಶಕ್ಕಾಗಿ ಕಾಯುತ್ತಿದ್ದೆ. (ಆ ಕಾಲಕ್ಕೆ ಮೂವತ್ತು ಸಾವಿರ ವ್ಯರ್ಥವಾಗಿ ಸುರಿದಿದ್ದ ಕೋಪವೂ ಇತ್ತು.) ಮಾರನೆಯ ದಿನದ ತರಗತಿಗೆ ಬೆಳಿಗ್ಗೆ ಬೇಗ ಬರಬೇಕಿತ್ತು. ಮಗಳಿಗೆ ಜ್ವರ ಬೇರೆ, ಮನೆಯಲ್ಲಿ ಕೇವಲ ಗೃಹ ಸಹಾಯಕಿಗೆ ನೋಡಿಕೊಳ್ಳಲು ಹೇಳಿ ಬಂದೆವು.

ಯಥಾಪ್ರಕಾರ ತರಬೇತಿ ಶುರುವಾಯ್ತು. ಈ ಬಾರಿ ಮೈದಾನದಲ್ಲಿ. ಆ ಗುರು ನೆರಳಲ್ಲಿ. ನಾವುಗಳು ಬಿಸಿಲಲ್ಲಿ!!. ಮೊಬೈಲ್ ಬಳಕೆ ನಿಷಿದ್ಧ. ನನಗೋ ಮಗು ಬಗ್ಗೆ ಆತಂಕ. ಹಾಗೂ ಹೀಗೂ ಲಂಚ್ ಟೈಮ್‌ವರೆಗೆ ಕಾಯುತ್ತಿದ್ದ ನಾನು ಬೇಗ ಬೇಗ ಊಟ ಮುಗಿಸಿ ಮನೆಗೆ ಕಾಲ್ ಮಾಡಿ ಮಗಳ ಬಳಿ ಮಾತನಾಡುತ್ತಿದ್ದೆ. ಇನ್ನೂ ಕೆಲವರು ಬಚ್ಚಿಟ್ಟುಕೊಂಡು ಫೋನ್ ಬಳಸುತಿದ್ದರು. ನಾನು ಆರಾಮವಾಗಿ ಉಯ್ಯಾಲೆಯಲ್ಲಿ ಕೂತುಕೊಂಡು ಮಗಳ ಬಳಿ ಮಾತಾಡುತ್ತಿದ್ದಂತೆ ಆ ಗುರುವಿನ ಕಣ್ಣಿಗೆ ಬಿದ್ದೆ. ಆತ ಶಾಪ ಕೊಡುವವರಂತೆ ಕೈಎತ್ತಿದರು, ಆದರೆ ಅದು ಅವರ ಶಿಷ್ಯರನ್ನು ಕರೆದದ್ದು.

ಕೂಡಲೇ ಅವರ ಶಿಷ್ಯರು ನಾನು ನೂರಾರು ಜನ್ಮದ ಪಾಪ ಮಾಡುತ್ತಿರುವೆನೇನೋ ಎಂಬಂತೆ ನನ್ನ ಬಳಿ ಬಂದು ಮೆದು ಧ್ವನಿಯಲ್ಲಿ ಗದರಿ ಮೊಬೈಲ್ ತೆಗೆದಿಡುವಂತೆ ಹೇಳಿದರು. ಇನ್ನೂ ಲಂಚ್ ಟೈಮ್ ಮುಗಿದಿರಲಿಲ್ಲ, ನಾನು ಕೇಳಲಿಲ್ಲ. ನನ್ನ ಮಾತನ್ನ ಮುಗಿಸಿಯೇ ಮೊಬೈಲ್ ಆಫ್ ಮಾಡಿದೆ.

ಇದೇ ಸಮಯಕ್ಕೆ ನಮ್ಮ ಮನೆಯವರು ಸಹ ಬಿಸಿಲಿದ್ದ ಜಾಗದಿಂದ ನೆರಳಿದ್ದ ಮರದಡಿಯಲ್ಲಿ ಬಂದು ಕೂತರು. ಅವರನ್ನ ನೋಡಿ ಇನ್ನೊಂದಷ್ಟು ಜನ ನೆರಳಿಗೆ ಬಂದರು. ಅದೂ ಸಹ ಆ ಗುರುವಿಗೆ ಕೋಪ ತರಿಸಿತ್ತು. ಹಾಗಾಗಿ ನಮ್ಮನ್ನ ಉದ್ದೇಶಿಸಿ ಮೇಲಿನಂತೆ ಪರೋಕ್ಷವಾಗಿ ಬೈಯ್ಯುತ್ತಿದ್ದರು. ನಾನೂ ಅವಕಾಶಕ್ಕಾಗಿ ಕಾಯುತ್ತಿದ್ದೆ ಎಂದೆನಲ್ಲ.

ಎಕ್ಸ್‌ಕ್ಯೂಸ್ ಮಿ..... ಎಂದು ಎದ್ದು ನಿಂತೆ..

ಅವರ ಶಿಷ್ಯಂದಿರು ಭೂಕಂಪವಾಯ್ತೇನೋ ಎಂಬಂತೆ.. ಪ್ಲೀಸ್ ಸಿಟ್ ಸಿಟ್ ಎಂದು ಪಿಸುಗುಟ್ಟಿದರು.

ನಾನು ಕೇರ್ ಮಾಡಲಿಲ್ಲ. ಹೇಳಬೇಕಿದ್ದದ್ದನ್ನ ಹೇಳಲೇಬೇಕಿತ್ತು.

"ನೀವು ಯಾರಿಗೆ ಹೇಳುತ್ತಿದ್ದೀರೋ ಗೊತ್ತಿಲ್ಲ, ಆದರೆ ಇದು ನನಗೇ ಅನ್ವಯಿಸುವಂತಿರುವುದರಿಂದ ಕೆಲವು ಮಾತನ್ನು ಹೇಳಬೇಕು.

ಮೊದಲನೆಯದಾಗಿ ನೀವು ಲಂಚ್ ಟೈಮಿನಲ್ಲಿ ಮೊಬೈಲ್ ಬಳಸಬಾರದೆಂಬ ನಿಯಮ ಎಲ್ಲಿಯೂ ಹೇಳಲಿಲ್ಲ. ಹೇಳಿದಿದ್ದರೂ ನಾನು ಮೊಬೈಲ್ ಬಳಸಲೇಬೇಕಾದ ಅನಿವಾರ್ಯತೆ ಇದ್ದಾಗ ಬಳಸುತ್ತಿದ್ದೆ. ಯಾಕೆಂದರೆ ಅದು ನನಗೆ ಮುಖ್ಯವಾದುದು."

"ನೀನು ಒಂದು ಸಲ ಇಲ್ಲಿನ ವಿದ್ಯಾರ್ಥಿ ಆದ ಮೇಲೆ ನೀನು ಇಲ್ಲಿನ ನಿಯಮಗಳನ್ನು ಪಾಲಿಸಲೇಬೇಕು."

"ನಾನು ನಿಮ್ಮ ವಿದ್ಯಾರ್ಥಿ ಕೇವಲ ನೆನ್ನೆ ಇಂದ, ಹಾಗು ನಾಳೆಗೆ ಈ ಸ್ಟೂಡೆಂಟ್ ಶಿಪ್ ಮುಗಿಯುತ್ತದೆ. ಆದರೆ ನನ್ನ ಮಗಳಿಗೆ ನಾನು ತಾಯಿ. ಅದೂ ಹತ್ತು ವರ್ಷಗಳಿಂದ. ಆ ಕರ್ತವ್ಯ ನನಗೆ ಎಲ್ಲಕ್ಕಿಂತ ಮುಖ್ಯ. ಅವಳ ಅನಾರೋಗ್ಯ ಇದ್ದುದರಿಂದ ಅವಳಿಗೆ ಕರೆಮಾಡಿ ಮಾತಾಡುವುದು ಮುಖ್ಯವಾಗಿತ್ತು." ಎಂದೆ.

ಒಂದಷ್ಟು ಜನ ಚಪ್ಪಾಳೆ ತಟ್ಟಿದರು.

ಅವರ ಮುಖ ಕಪ್ಪಿಟ್ಟಿತು.

"ಒಂದು ವಿಷಯ, ಇಲ್ಲಿನ ನನ್ನ ಎಲ್ಲಾ ವಿದ್ಯಾರ್ಥಿಗಳಿಗೆ ಗೊತ್ತು, ಅವರು ನನ್ನನ್ನು ನಂಬಿ ಇಲ್ಲಿರುವುದರಿಂದ ಅವರಿಗಾಗಲಿ ಅವರು ಕುಟುಂಬಕ್ಕಾಗಲಿ ಯಾವುದೇ ತೊಂದರೆ ಬರುವುದಿದ್ದರೂ ಅದು ಮರಳಿ ಹೋಗುತ್ತದೆ."

ಇದ್ಯಾಕೋ ಅತಿರೇಕ ಅನಿಸಿತು.

"ಹೌದು ಗುರುಗಳೇ, ಅದು ನಿಮಗೆ ಹಾಗು ನಿಮ್ಮ ವಿದ್ಯಾರ್ಥಿಗಳಿಗೆ ಗೊತ್ತು. ಆದರೆ, ನನ್ನ ಮಗಳಿಗೆ ಬಂದಿರುವ ಜ್ವರಕ್ಕೆ ಅದು ಗೊತ್ತಿಲ್ಲವಲ್ಲ" ಎಂದೆ.

ಅವರು ಮುಖ ಹುಳಿ ಮಾಡಿಕೊಂಡು ಜಿಗುಪ್ಸೆಗೊಂಡವರಂತೆ

"You will understand it as time Passes" ಎಂದರು..

ಅದೇನೋ ಗೊತ್ತಾಗಬೇಕಿತ್ತೋ, ನಮಗೆ ಸಮಯ ಕಳೆದಂತೆ ಏನೂ ಗೊತ್ತಾಗಲಿಲ್ಲ.

ಕೊನೆಯ ದಿನ ಎಲ್ಲವೂ ಬದಲಾಗಿತ್ತು. ನಮಗೆ ಮೊದಲಿನ ಅನುಭವವಾಗಲಿಲ್ಲ. ನಮಗೂ ಪ್ರಶ್ನೆ ಕೇಳಲು ಅವಕಾಶ ಸಿಕ್ಕಿತು. ಒಳ್ಳೆಯ ಫೀಡ್ ಬ್ಯಾಕ್ ಕೊಡುವಂತೆ ಕೇಳಿದರು. ಆಯ್ತು ಎಂದೆ.

ಅವರ ಕಾನ್ಸೆಪ್ಟ್, ವಸ್ತು ವಿಷಯ ಎಲ್ಲವೂ ಚೆನ್ನಾಗಿತ್ತು. ಆದರೆ ನಾನೇ ಮೇಲೆಂಬ ಗರಿಮೆ ...ಅವರನ್ನ ಹಾಗೆ ಆಡಿಸುತ್ತಿತ್ತು.

ಅವರ ಮುಂದಿನ ಕ್ಲಾಸ್‌ಗೆ ಕರೆ ಬಂದರೂ ಅಟೆಂಡ್ ಮಾಡಲಿಲ್ಲ.

2015 ರ ಕಥೆ ಇದು.

ಈಗ ಆ ವ್ಯಕ್ತಿ ಏನಾದರೋ ಯಾರಿಗೆ ಗೊತ್ತು.

ಆ ಗುರುಗಳಿಗೆ ಒಂದು ಗೀಳಿತ್ತು.

ಗಂಡಾಗಲಿ ಹೆಣ್ಣಾಗಲಿ ಬಲವಾಗಿ ಉಸಿರು ಕಟ್ಟುವಷ್ಟು ಜೋರಾಗಿ ತಬ್ಬಿಕೊಂಡು 'ಐ ಲವ್ ಯು, ಐ ಲವ್ ಯು' ಎಂದು ಕಿವಿಯಲ್ಲಿ ಉಸಿರುತ್ತಿದ್ದರು!!

ಹೋರಾಟಗಳ ಮೂಲಕ ಮೋದಿ ಸರ್ಕಾರವನ್ನು ಮಣಿಸೋಣ........

ಪುಟ 5 ರಿಂದ

ಕಾರ್ಪೊರೇಟ್‌ಗಳನ್ನು ಖಾಸಗೀಕರಣಗೊಳಿಸುವ ಪ್ರಯತ್ನಗಳು ರಾಷ್ಟ್ರೀಯ ಖಜಾನೆ ಮತ್ತು ರಾಷ್ಟ್ರೀಯ ನೋಟು ಅಮಾನ್ಯೀಕರಣದ ಪ್ರೋತ್ಸಾಹದೊಂದಿಗೆ ಪ್ರಾರಂಭವಾಯಿತು. ಮೂಲಸೌಕರ್ಯ ಕ್ಷೇತ್ರಗಳಲ್ಲಿ, ಟೆಲಿಕಾಂ, ಗಣಿ, ರೈಲ್ವೆ, ರಾಷ್ಟ್ರೀಯ ಹೆದ್ದಾರಿಗಳು ಮತ್ತು ಬಂದರುಗಳಂತಹ ಕ್ಷೇತ್ರಗಳು ಈಗಾಗಲೇ ಇದರಿಂದ ಪ್ರಭಾವಿತವಾಗಿವೆ. ಸರ್ಕಾರದ ಹೂಡಿಕೆಯಿಂದ ಬಲಗೊಂಡ ಈ ವಲಯಗಳು ಕಾರ್ಪೊರೇಟ್‌ಗಳಿಗೆ ವರ್ಗಾವಣೆಯಾಗುತ್ತಿವೆ.

ರಾಷ್ಟ್ರಮಟ್ಟದ ಚಟುವಟಿಕೆಗಳಿಗೆ ಸಿದ್ಧರಾಗಬೇಕು

ಮೋದಿಯವರ ಮೂರನೇ ಸರ್ಕಾರ ಕಳೆದ ಎರಡು ಸರ್ಕಾರಗಳಲ್ಲಿ ಜಾರಿಗೆ ತಂದ ನೀತಿಗಳನ್ನು ವೇಗವಾಗಿ ತರುತ್ತಿರುವುದನ್ನು ಗಮನಿಸಿದ ತಕ್ಷಣ ನಾವು ಹೋರಾಟಗಳಿಗೆ ಸಿದ್ಧರಾಗಬೇಕು. ಆದಷ್ಟು ಬೇಗ ಸ್ವತಂತ್ರ ಮತ್ತು ಒಗ್ಗಟ್ಟಿನ ಕ್ರಮ, ಕ್ಷೇತ್ರವಾರು ಮತ್ತು ರಾಷ್ಟ್ರಮಟ್ಟದ ಚಟುವಟಿಕೆಗಳಿಗೆ ಸಿದ್ಧರಾಗಬೇಕು. ಮೊದಲನೆಯದಾಗಿ, ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವ ಪ್ರಮುಖ ಬೇಡಿಕೆಯೊಂದಿಗೆ ಮೋದಿ ಸರ್ಕಾರದ ವಿರುದ್ಧದ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕು.

ಐಕ್ಯ ಕಾರ್ಮಿಕ ಚಳುವಳಿಗಳು ಮತ್ತು ಚಟುವಟಿಕೆಗಳಿಗೆ ಪ್ರಯತ್ನಗಳನ್ನು ಮಾಡಬೇಕು. ಸ್ವತಂತ್ರ ಪ್ರಯತ್ನವನ್ನು ಹೆಚ್ಚಿಸಲು ಶ್ರಮಿಸುವ ಮಹತ್ವವನ್ನು ಗುರುತಿಸಬೇಕು. ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕರನ್ನು ದೊಡ್ಡ ಪ್ರಮಾಣದಲ್ಲಿ ಸಜ್ಜುಗೊಳಿಸಬೇಕು. ವಲಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿರೋಧವನ್ನು ನಿರ್ಮಿಸಬೇಕು. ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ನವ ಉದಾರವಾದಿ ನಿರಂಕುಶಾಧಿಕಾರದ ವಿರುದ್ಧ ಪ್ರತಿಭಟನೆ ನಡೆಯಬೇಕು. ಸಂಸತ್ತಿನಲ್ಲಿ ಪ್ರತಿಪಕ್ಷಗಳು ಈ ಬೇಡಿಕೆಗಳನ್ನು ಎತ್ತಿ ರಾಜಕೀಯವಾಗಿ ಹೋರಾಡಲು ಈ ಕಾರ್ಯಕ್ರಮಗಳು ಇರಬೇಕು.

ನಮ್ಮ ಚಟುವಟಿಕೆ ಕೇವಲ ಕಲ್ಯಾಣ ಮತ್ತು ಪರಿಹಾರಕ್ಕಾಗಿ ಅಲ್ಲ. ನಮ್ಮ ಚಟುವಟಿಕೆಯು ವರ್ಗ ಚಳುವಳಿ ಮತ್ತು ವರ್ಗ ಸಮುದಾಯವನ್ನು ವರ್ಗ ಹೋರಾಟದ ಕೇಂದ್ರಬಿಂದುವಾಗಿ ನಿರ್ಮಿಸುವ ಸಿದ್ಧಾಂತವನ್ನು ಆಧರಿಸಿದೆ. ಕಾರ್ಮಿಕರ ಸಾಮಾಜಿಕ ಮತ್ತು ರಾಜಕೀಯ ಅಂಶಗಳಲ್ಲಿ ನಮ್ಮ ಹಸ್ತಕ್ಷೇಪವು ವರ್ಗ ಆಧಾರಿತವಾಗಿರಬೇಕು. ಇದು ಆಗಬೇಕಾದರೆ ವರ್ಗ ಹೋರಾಟದ ಸ್ಪಷ್ಟ ತಿಳುವಳಿಕೆ ಇರಬೇಕು. ಕಾರ್ಮಿಕರ ಪ್ರಜ್ಞೆಯನ್ನು ಆರ್ಥಿಕ ಮಟ್ಟದಿಂದ ಸಾಮಾಜಿಕ ಮಟ್ಟಕ್ಕೆ ಮತ್ತು ಅಲ್ಲಿಂದ ರಾಜಕೀಯ ಪ್ರಜ್ಞೆಗೆ ಏರಿಸುವ ಪ್ರಜ್ಞಾಪೂರ್ವಕ ಪ್ರಯತ್ನ ನಡೆಯಬೇಕು. ಫ್ಯಾಸಿಸ್ಟ್ ಶಕ್ತಿಗಳು ಮತ್ತು ಕಾರ್ಪೊರೇಟ್ ವರ್ಗವನ್ನು ಎದುರಿಸಲು, ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ಏಕೀಕೃತ ಕಾರ್ಮಿಕ ವರ್ಗದಿಂದ ಮಾತ್ರ ಶಕ್ತಿಯು ಯಾವುದೇ ದಾಳಿಯನ್ನು ತಡೆದುಕೊಳ್ಳುತ್ತದೆ. ನೆಟ್ಟಗೆ ನಿಂತು ಮುನ್ನಡೆಯುವ ಆತ್ಮವಿಶ್ವಾಸವನ್ನು ಹೊಂದಿರಬೇಕು.

ಪ್ರಬಂಧಕಾರ: ತಪನ್ ಸೇನ್, ಸಿಐಟಿಯು ಪ್ರಧಾನ ಕಾರ್ಯದರ್ಶಿ (ಕನ್ನಡಕ್ಕೆ:ಸಿಜಿ)



ಅತಿ-ಬಲಪಂಥೀಯರಿಗೆ ತಡೆ ಹಾಕುವಲ್ಲಿ ಯಶಸ್ವಿಯಾದ ಎಡಪಂಥೀಯರು

ಫ್ರೆಂಚ್ ಚುನಾವಣೆ ಫಲಿತಾಂಶ

ಪ್ರಕಾಶ್ ಕಾರತ್

ಫ್ರಾನ್ಸ್‌ನ ಸಂಸದೀಯ ಚುನಾವಣೆಗಳಲ್ಲಿ ಕಟ್ಟಾ-ಬಲಪಂಥೀಯರ ವಿರುದ್ಧ ಅಲ್ಲಿನ ಜನರು ಮತ ಚಲಾಯಿಸಿದ್ದಾರೆ. ಬಹಳಷ್ಟು ಸಮೀಕ್ಷೆಗಳ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ಲೆ ಪೆನ್ ನೇತೃತ್ವದ ನ್ಯಾಷನಲ್ ರ‍್ಯಾಲಿ ಪಕ್ಷ 143 ಸ್ಥಾನಗಳನ್ನು ಗಳಿಸಲಷ್ಟೇ ಶಕ್ತವಾಗಿದ್ದು ಅದು ಮೂರನೇ ಸ್ಥಾನದಲ್ಲಿದೆ. ಹೊಸದಾಗಿ ರಚನೆಯಾದ ಎಡಪಂಥೀಯ ಮೈತ್ರಿಕೂಟವಾದ ನ್ಯೂ ಪಾಪ್ಯುಲರ್ ಫ್ರಂಟ್ 182 ಸೀಟ್‌ಗಳನ್ನು ಜಯಿಸುವ ಮೂಲಕ ಅತ್ಯಂತ ದೊಡ್ಡ ಕೂಟವಾಗಿ ಹೊರಹೊಮ್ಮಿದೆ. ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರನ್‌ರ ಎನ್‌ಸೆಂಬಲ್ ಗುಂಪು 163 ಸ್ಥಾನಗಳನ್ನು ಗೆದ್ದಿದೆ. ಯಾವುದೇ ಒಂದು ಪಕ್ಷ ಅಥವಾ ರಂಗ ಸ್ಪಷ್ಟ ಬಹುಮತ ಗಳಿಸದ ಫಲಿತಾಂಶ ಇದಾಗಿದೆ. ಫ್ರಾನ್ಸ್‌ನ 577 ಸ್ಥಾನಗಳ ಸಂಸತ್ತಿನ ಕೆಳಮನೆ ನ್ಯಾಷನಲ್ ಅಸೆಂಬ್ಲಿಯಲ್ಲಿ ಸರಳ ಬಹುಮತ ಗಳಿಸಲು 286 ಸ್ಥಾನಗಳು ಬೇಕಾಗುತ್ತವೆ. ನ್ಯೂ ಪಾಪ್ಯುಲರ್ ಫ್ರಂಟ್‌ಗೆ 100ಕ್ಕೂ ಅಧಿಕ ಸ್ಥಾನಗಳಿಂದ ಬಹುಮತ ತಪ್ಪಿದೆ. ಜೂನ್‌ನಲ್ಲಿ ಐರೋಪ್ಯ ಒಕ್ಕೂಟ (ಯುರೋಪಿಯನ್ ಯೂನಿಯನ್) ಪಾರ್ಲಿಮೆಂಟ್‌ಗೆ ನಡೆದ ಚುನಾವಣೆಯಲ್ಲಿ ಮ್ಯಾಕ್ರನ್‌ರ ಪಕ್ಷ ಹಿನ್ನಡೆ ಅನುಭವಿಸಿದ್ದರಿಂದ ಅಧ್ಯಕ್ಷರು ಸಾರ್ವತ್ರಿಕ ಚುನಾವಣೆಗೆ ಕರೆ ನೀಡಿದ್ದರು.

ಐರೋಪ್ಯ ಒಕ್ಕೂಟ ಸಂಸತ್ತಿಗೆ ನಡೆದ ಚುನಾವಣೆಗಳ ತರುವಾಯದಲ್ಲೇ, ಅತಿ ಬಲಪಂಥೀಯರ ಬೆಳವಣಿಗೆ ಬಗ್ಗೆ ಕಳವಳಕೊಂಡ ಫ್ರಾನ್ಸ್ ಜನರು ದೇಶದಾದ್ಯಂತ ದೊಡ್ಡ ಪ್ರಮಾಣದ ಮೆರವಣಿಗೆ, ಸಭೆಗಳನ್ನು ನಡೆಸಿದರು. ಕಟ್ಟಾ-ಬಲಪಂಥೀಯರ ವಿಭಜನಕಾರಿ ಹಾಗೂ ಪ್ರತಿಗಾಮಿ ರಾಜಕೀಯಕ್ಕೆ ಸ್ಪಷ್ಟ ವಿರೋಧವನ್ನು ದಾಖಲಿಸಿದರು. ಬಹಳಷ್ಟು ಎಡ ಪಕ್ಷಗಳು ಜನರ ಮನೋಭಾವವನ್ನು ಸರಿಯಾಗಿಯೇ ಅಂದಾಜು ಮಾಡಿದ್ದವು ಹಾಗೂ ಹೊಸ ಮೈತ್ರಿಕೂಟ ನ್ಯೂ ಪಾಪ್ಯುಲರ್ ಫ್ರಂಟ್ ಅನ್ನು ರಚಿಸಿದವು.

ಪಾಪ್ಯುಲರ್ ಫ್ರಂಟ್‌ನ ಪಕ್ಷಗಳು

ಜೀನ್ ಲುಕ್ ಮೆಲೆಂಚನ್‌ರ ಫ್ರಾನ್ಸ್ ಅನ್‌ಬೌವ್ಡ್, ಸೋಷಲಿಸ್ಟ್ ಪಾರ್ಟಿ, ಗ್ರೀನ್ಸ್ ಮತ್ತು ಫ್ರಾನ್ಸ್ ಕಮ್ಯೂನಿಸ್ಟ್ ಪಕ್ಷ-ಇವುಗಳು ಹೊಸದಾಗಿ ರಚನೆಯಾದ ಪಾಪ್ಯುಲರ್ ಫ್ರಂಟ್‌ನಲ್ಲಿರುವ ಪಕ್ಷಗಳಾಗಿವೆ. ಅಧಿಕಾರಕ್ಕೆ ಬಂದರೆ 150-ಅಂಶಗಳ ಕಾರ್ಯಸೂಚಿಯನ್ನು ಜಾರಿಗೊಳಿಸುವುದಾಗಿ ಈ ಪಕ್ಷಗಳು ಒಟ್ಟಾಗಿ ಘೋಷಿಸಿದ್ದವು. ಚುನಾವಣೆಗೆ ಕೆಲವೇ ದಿನಗಳಿರುವಾಗ ಈ ರಂಗ ರಚನೆಯಾದರೂ ಅದು ಉತ್ತಮ ನಿರ್ವಹಣೆ ತೋರಿದ್ದು ಅತಿ-ಬಲಪಂಥೀಯರನ್ನು ತಡೆಯುವ ಶಕ್ತಿಯಾಗಿ ಹೊರಹೊಮ್ಮಿದ್ದು ಗಮನಾರ್ಹವಾಗಿದೆ.

ಮೊದಲ ಹಂತದಲ್ಲಿ, ಲೆ ಪೆನ್‌ರ ಪಕ್ಷವು ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇಕಡ 33.1 ಮತಗಳನ್ನು ಗಳಿಸಿ ಮುಂಚೂಣಿ ಪಕ್ಷವಾಗಿ ಹೊರಹೊಮ್ಮಿತ್ತು. ಅದರ ನಂತರ, ಶೇ.28 ಮತಗಳೊಂದಿಗೆ ನ್ಯೂ ಪಾಪ್ಯುಲರ್ ಫ್ರಂಟ್ ಮತ್ತು ಶೇ.21 ಮತ ಗಳಿಸಿದ ಮ್ಯಾಕ್ರನ್‌ರ ಗುಂಪು ಇತ್ತು. ಯಾವುದೇ ರಂಗವು ಸ್ಪಷ್ಟ ಬಹುಮತವನ್ನು ಗಳಿಸದಿದ್ದರಿಂದ ಎರಡನೇ ಸುತ್ತಿನ ಚುನಾವಣೆಯನ್ನು ನಡೆಸಲಾಗಿತ್ತು. ಶೇಕಡ 12.5ಕ್ಕಿಂತ ಅಧಿಕ ಮತಗಳನ್ನು ಗಳಿಸಿದವರಿಗೆ ಮಾತ್ರ ಅದರಲ್ಲಿ ಸ್ಪರ್ಧಿಸಲು ಅವಕಾಶ ನೀಡಲಾಗಿತ್ತು. ಇದರಿಂದಾಗಿ, ಮೇಲಿನ ಮೂರು ರಂಗಗಳಿಂದ ಕೇವಲ ಮೂರು ಅಭ್ಯರ್ಥಿಗಳ ನಡುವಿನ ಸ್ಪರ್ಧೆಗೆ ರಂಗ ಸಜ್ಜುಗೊಂಡಿತು.

ಸೋಲಿಸಲು ರಣತಂತ್ರ

ಕಟ್ಟಾ ಬಲಪಂಥೀಯರ ಬಗ್ಗೆ ಜನರಲ್ಲಿದ್ದ ಅಸಮಾಧಾನದ ಹಿನ್ನೆಲೆಯಲ್ಲಿ ಅವರನ್ನು ವಿರೋಧಿಸುವ ಎಲ್ಲಾ ಪಕ್ಷಗಳು ಒಟ್ಟಾಗಿ ಅವರನ್ನು ಸೋಲಿಸಲು ಕಾರ್ಯತಂತ್ರವೊಂದನ್ನು ರೂಪಿಸಿದವು. ಅದರ ಪ್ರಕಾರ, ಮೊದಲ ಸುತ್ತಿನಲ್ಲಿ ಮೂರನೇ ಸ್ಥಾನ ಗಳಿಸಿದ್ದ 200ಕ್ಕೂ ಹೆಚ್ಚು ಅಭ್ಯರ್ಥಿಗಳು ತಮ್ಮ ಹುರಿಯಾಳುತನವನ್ನು ವಾಪಸ್ ಪಡೆದರು. ನ್ಯೂ ಪಾಪ್ಯುಲರ್ ಫ್ರಂಟ್ ತಕ್ಷಣವೇ ತನ್ನ ಅಭ್ಯರ್ಥಿಗಳನ್ನು ವಾಪಸ್ ಪಡೆಯಿತು. ಆದರೆ, ಮ್ಯಾಕ್ರನ್ ಗುಂಪಿನ ಎಲ್ಲಾ ಅಭ್ಯರ್ಥಿಗಳು ಇದಕ್ಕೆ ಸ್ಪಂದಿಸಲಿಲ್ಲ. ಅದರ ಅನೇಕ ಹುರಿಯಾಳುಗಳು ಕಣದಿಂದ ವಾಪಸ್ ಪಡೆಯಲು ನಿರಾಕರಿಸಿದರು. ಮೆಲೆಂಚನ್‌ರ ಎಡಪಂಥೀಯ ಫ್ರಾನ್ಸ್ ಅನ್‌ಬೌವ್ಡ್ ಪಕ್ಷವನ್ನು ಅವರು ಲೆ ಪೆನ್‌ರ ಅತಿ ಬಲಪಂಥೀಯ ನ್ಯಾಷನಲ್ ರ‍್ಯಾಲಿಗೆ ಸಮೀಕರಿಸಿದ್ದೇ ಇದಕ್ಕೆ ಕಾರಣ.

ಇಂಥ ಅಡೆತಡೆಗಳಿದ್ದರೂ ಕಟ್ಟಾ-ಬಲಪಂಥೀಯರು ಮೂರನೇ ಸ್ಥಾನಕ್ಕೆ ಹೋಗಿರುವುದನ್ನು ಫಲಿತಾಂಶಗಳು ತೋರಿಸುತ್ತವೆ. ಅವರು ಅಧಿಕಾರಕ್ಕೆ ಬರುವುದನ್ನು ಜನರು ಮತ್ತೊಮ್ಮೆ ತಡೆದಿದ್ದಾರೆ. ಅತಿ-ಬಲಪಂಥೀಯರ ನೀತಿಗಳಿಗೆ ಜನರ ಅಸಮಾಧಾನ ಮತ್ತು ಈ ಶಕ್ತಿಗಳನ್ನು ಸೋಲಿಸಲು ವಿಶ್ವಾಸಾರ್ಹ ಆಯ್ಕೆ ಲಭ್ಯವಾಗಿದ್ದು ಬಲಪಂಥೀಯರ ಸೋಲಿಗೆ ಕೊಡುಗೆ ನೀಡಿದವು.

ನ್ಯಾಷನಲ್ ಅಸೆಂಬ್ಲಿಯಲ್ಲಿ ಬಹುಮತ ಹೊಂದಿದ್ದ ಮ್ಯಾಕ್ರನ್, ನವ-ಉದಾರವಾದಿ ನೀತಿಗಳಿಂದ ನಿರ್ದೇಶಿತವಾದ ಮಿತವ್ಯಯ ಕ್ರಮಗಳನ್ನು ಜಾರಿ ಮಾಡಿದ್ದರು. ಶ್ರೀಮಂತರ ಮೇಲೆ ತೆರಿಗೆಗಳನ್ನು ಹೇರಲು ಅವರ ಸರ್ಕಾರ ನಿರಾಕರಿಸಿತು. ಆದರೆ, ದುಡಿಯುವ ಜನರ ಮೇಲೆ ಎಲ್ಲಾ ರೀತಿಯ ತೆರಿಗೆಗಳನ್ನು ಹೇರಿತ್ತು. ನೌಕರರ ನಿವೃತ್ತಿ ವಯಸ್ಸನ್ನು ಏರಿಸಿತ್ತು. ಪಿಂಚಣಿ ಸುಧಾರಣೆಗಳನ್ನು ಮಾಡಲಾಗಿತ್ತು. ಕಾರ್ಮಿಕರು ಮತ್ತು ರೈತರು ಈ ಕ್ರಮಗಳನ್ನು ವಿರೋಧಿಸಿ ಬೃಹತ್ ಪ್ರತಿಭಟನೆಗಳನ್ನು ನಡೆಸಿದ್ದಲ್ಲದೆ ಪ್ರಬಲವಾದ ಹೋರಾಟಗಳನ್ನೂ ಸಂಘಟಿಸಿದ್ದರು. ಕಾರ್ಮಿಕರು ತಿಂಗಳುಗಟ್ಟಲೆ ದೀರ್ಘ ಕಾಲ ನಡೆಸಿದ ಹೋರಾಟ ಮತ್ತು ರೈತರು ಹಾಗೂ ಜನರ 'ಯೆಲ್ಲೋ ವೆಸ್ಟ್ಸ' ಚಳವಳಿಯು ಮ್ಯಾಕ್ರನ್ ಸರಕಾರದ ವಿರುದ್ಧದ ಜನರಲ್ಲಿ ಮಡುಗಟ್ಟಿದ್ದ ಆಕ್ರೋಶದ ಎರಡು ದೊಡ್ಡ ಪ್ರತಿಬಿಂಬವಾಗಿದ್ದವು.

ಸರಕಾರದ ನೀತಿಗಳಿಂದ ಉಂಟಾದ ಅತೃಪ್ತಿಯನ್ನು ಅತಿ-ಬಲಪಂಥೀಯರು ಬಳಸಿಕೊಂಡರು. ಈ ಎಲ್ಲಾ ಸಮಸ್ಯೆಗಳಿಗೆ ವಲಸೆಗಾರರು ಹರಿದು ಬರುತ್ತಿರುವುದೇ ಕಾರಣ ಎಂದು ಅವರು ದೂರಿದರು. ಅತಿ-ಬಲಪಂಥೀಯರು ಜನರ ನಡುವೆ ಜನಾಂಗೀಯ ಮತ್ತು ಧಾರ್ಮಿಕ ದ್ವೇಷವನ್ನು ಬಿತ್ತಿದರು. ಕನ್ಸರ್ವೇಟಿವ್ ಮತ್ತು ಸೋಷಲಿಸ್ಟ್‌ರಂಥ ಎಲ್ಲ ಸಾಂಪ್ರದಾಯಿಕವಾದ ವ್ಯವಸ್ಥೆ ಪರ ಪಕ್ಷಗಳ ವೈಫಲ್ಯ ಮತ್ತು ಅದರ ಜೊತೆಯಲ್ಲಿ ಕಮ್ಯೂನಿಸ್ಟ್ ಪಕ್ಷ ಹಾಗೂ ಗ್ರೀನ್ಸ್ ನಂಥ ಪರಿಸರವಾದಿ ಗುಂಪುಗಳ ದೌರ್ಬಲ್ಯಗಳು, ಅತಿ-ಬಲಪಂಥೀಯರು ಬೆಳೆಯಲು ನೆರವಾದವು.

ಲೆ ಪೆನ್ ಅಥವಾ ಆಕೆಯ ಪಕ್ಷ ಪಿಂಚಣಿ ಸುಧಾರಣೆಗಳನ್ನಾಗಲೀ ನಿವೃತ್ತಿ ವಯಸ್ಸಿನ ಏರಿಕೆಯನ್ನಾಗಲೀ ಯಾವತ್ತೂ ವಿರೋಧಿಸಲಿಲ್ಲ. ಆಳುವ ವರ್ಗಗಳನ್ನು ಪ್ರತಿನಿಧಿಸುವ ಅನೇಕ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಲೆ ಪೆನ್ ಹಾಗೂ ಆಕೆಯ ಪಕ್ಷವನ್ನು ಬಹಿರಂಗವಾಗಿ ಬೆಂಬಲಿಸಿದವು. ಜನರಲ್ಲಿರುವ ಅತೃಪ್ತಿಯಿಂದ ಯಾವ ರಿತಿಯಲ್ಲೂ ಎಡ ಪಕ್ಷಗಳಿಗೆ ಲಾಭವಾಗಬಾರದು ಎನ್ನುವುದು ಕಾರ್ಪೊರೇಟ್ ಕಂಪನಿಗಳ ಬಯಕೆಯಾಗಿತ್ತು.

ಮರೆಯದ ಫ್ಯಾಸಿಸಂ ಭೀಕರತೆ

ನವ-ಉದಾರವಾದಿ ತತ್ವಕ್ಕೆ ಲೆ ಪೆನ್ ಕಟ್ಟು ಬಿದ್ದಿರುವುದು, ಹಾಗೂ ಆಕೆಯ ವಿಭಜನಕಾರಿ ರಾಜಕೀಯದಿಂದ ಜನರು ಅನುಮಾನಗೊಂಡಿದ್ದರು. ಒಂದು ವೇಳೆ ಇಂಥ ಪಕ್ಷಗಳು ಅಧಿಕಾರಕ್ಕೆ ಬಂದರೆ ತಮ್ಮ ಯಾವುದೇ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ; ಅದರ ಬದಲು ಸಾಮಾಜಿಕ ಸಂರಚನೆಯನ್ನು ಮುರಿದು ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ ಎಂದು ಜನರು ಮನವರಿಕೆ ಮಾಡಿಕೊಂಡರು. ಜನರು ಫ್ಯಾಸಿಸಂ ಮತ್ತು ನಾಜಿವಾದದ ಭಯಾನಕತೆಗಳನ್ನು ಮರೆತಿಲ್ಲ. ಹಾಗೂ ಇನ್ನೊಮ್ಮೆ ಆ ರೀತಿ ಆಗುವುದು ಅವರಿಗೆ ಬೇಕಿರಲಿಲ್ಲ.

ನ್ಯೂ ಪಾಪ್ಯುಲರ್ ಫ್ರಂಟ್‌ನ ಆರ್ಥಿಕ ಅಜೆಂಡಾದಿಂದಾಗಿ ಅದಕ್ಕೆ ಜನರ ಮನ್ನಣೆ ದೊರಕಿತು. ಅತಿ-ಬಲಪಂಥೀಯರ ಬೆಳವಣಿಗೆ ವಿರುದ್ಧ ಹೋರಾಡುವ ಫ್ರಂಟ್‌ನ ದೃಢ ನಿಲವು ಕೂಡ ಜನರ ಪ್ರೀತಿಗೆ ಪಾತ್ರವಾಯಿತು. ಕೆಲವು ಸಮಾಜ ಕಲ್ಯಾಣ ಕ್ರಮಗಳನ್ನು ಮರಳಿ ಸ್ಥಾಪಿಸುವುದಾಗಿ, ವಿಶೇಷವಾಗಿ 'ಮಿತವ್ಯಯ'ದಂಥ ನಿರ್ದಿಷ್ಟ ನವ-ಉದಾರವಾದಿ ನೀತಿಗಳನ್ನು ವಾಪಸ್ ಪಡೆಯುವುದಾಗಿ ಪಾಪ್ಯುಲರ್ ಫ್ರಂಟ್ ಆಶ್ವಾಸನೆ ನೀಡಿತು. ನಿವೃತ್ತಿ ವಯಸ್ಸನ್ನು ಇಳಿಸುವುದಾಗಿಯೂ ಪಿಂಚಣಿ ಸುಧಾರಣೆಗಳನ್ನು ರದ್ದುಪಡಿಸುವುದಾಗಿಯೂ ಭರವಸೆ ನೀಡಿದ ರಂಗ, ಧನಿಕರ ಮೇಲೆ ತೆರಿಗೆ ಹೇರುವ ಆಶ್ವಾಸನೆಯನ್ನೂ ನೀಡಿದೆ.

ಒಡೆದ ಸಮಾಜ

ಸಮಾಜ ಎಷ್ಟರ ಮಟ್ಟಿಗೆ ಒಡೆದು ಹೋಗಿದೆ ಎನ್ನುವುದನ್ನು ಫ್ರಾನ್ಸ್ ಚುನಾವಣೆ ತೋರಿಸುತ್ತದೆ. ಲೆ ಪೆನ್‌ರ ನ್ಯಾಷನಲ್ ರ‍್ಯಾಲಿಗೆ ಬಹುಮತ ಗಳಿಸಲು ಸಾಧ್ಯವಾಗದಿದ್ದರೂ ನ್ಯಾಶನಲ್ ಅಸೆಂಬ್ಲಿಯಲ್ಲಿ ತನ್ನ ಸದಸ್ಯರ ಸಂಖ್ಯೆಯನ್ನು ಹೆಚ್ಚುಕಮ್ಮಿ ದುಪ್ಪಟ್ಟುಗೊಳಿಸಿಕೊಳ್ಳುವಲ್ಲಿ ಅದು ಯಶಸ್ವಿಯಾಗಿದೆ. ಅತಿಬಲಪಂಥೀಯ ಚಿಂತನೆಯು ಸಮಾಜದಲ್ಲಿ ಎಷ್ಟರ ಮಟ್ಟಿಗೆ ಬೇರೂರಿದೆ ಎನ್ನುವುದಕ್ಕೆ ಇದೊಂದು ಮೈ ನಡುಗಿಸುವ ಜ್ಞಾಪನೆಯಂತಿದೆ.

ಈ ವಿಭಜನೆಗಳು ಈಗ ಹೊಸ ಸರಕಾರ ರಚಿಸುವಲ್ಲಿಯೂ ಪ್ರತಿಫಲಿಸಲಿದೆ. ಸರಕಾರದ ಮೇಲಿನ ತನ್ನ ಹಿಡಿತವನ್ನು ಕಳೆದು ಕೊಳ್ಳಲು ಮ್ಯಾಕ್ರನ್ ಸಿದ್ಧರಿಲ್ಲ. ಹಠಾತ್ ಇನ್ನೊಂದು ಚುನಾವಣೆ ನಡೆಸುವ ಅವರ ಯತ್ನ ವಿಫಲವಾಗಿದೆ. ಎಡ ಪಕ್ಷಗಳ ಕೂಟ ರಚನೆಯಾಗುವುದನ್ನು ಹಾಗೂ ನಂತರ ಅದು ಚುನಾವಣೆಯಲ್ಲಿ ಬಲವಾದ ಸಾಧನೆ ತೋರುವುದನ್ನು ಮ್ಯಾಕ್ರನ್ ಊಹಿಸಿಯೇ ಇರಲಿಕ್ಕಿಲ್ಲ. ಅವರಿಗೆ, ಅತಿ ಬಲಪಂಥೀಯರು ದೊಡ್ಡ ಬೆದರಿಕೆಯೇ ಅಲ್ಲ. ಯಾಕೆಂದರೆ, ಅವರ ಅನೇಕ ನೀತಿಗಳು ಅತಿ-ಬಲಪಂಥೀಯ ಸಿದ್ಧಾಂತವನ್ನು ಸಹಜಗೊಳಿಸುವಲ್ಲಿ ನೆರವಾಗಿವೆ. ಫ್ರೆಂಚ್ ಆಳುವ ವರ್ಗಗಳು ಕೂಡ ಎಡ ಪಂಥೀಯರು ಅಧಿಕಾರಕ್ಕೆ ಬರುವುದನ್ನು ತಡೆಯಲು ಕನ್ಸರ್ವೇಟಿವ್ ಬಲಪಂಥೀಯರು ಮತ್ತು ಕಟ್ಟಾ-ಬಲಪಂಥೀಯರ ನಡುವೆ ಸಖ್ಯ ಆಗುವುದಕ್ಕೆ ಆದ್ಯತೆ ನೀಡುತ್ತವೆ. ಆ ರೀತಿಯ ಮೈತ್ರಿ ಏರ್ಪಟ್ಟರೆ ನವ-ಉದಾರವಾದಿ ನೀತಿಗಳನ್ನು ಮುಂದುವರಿಸಿಕೊಂಡು ಹೋಗಲು ಆಗುತ್ತದೆ ಎನ್ನುವುದು ಆಳುವ ವರ್ಗಗಳ ಲೆಕ್ಕಾಚಾರವಾಗಿದೆ.

ಒಮ್ಮತವಿಲ್ಲ

ಅಧಿಕಾರದ ಹಂಚಿಕೆ ವಿಚಾರದಲ್ಲಿ ನ್ಯೂ ಪಾಪ್ಯುಲರ್ ಫ್ರಂಟ್‌ನಲ್ಲಿ ಒಮ್ಮತವಿಲ್ಲ. ಮೆಲೆಂಚನ್‌ರನ್ನು ನಾಯಕರಾಗಿ ಒಪ್ಪಲು ಸೋಷಲಿಸ್ಟ್ ಪಕ್ಷ ಮತ್ತು ಗ್ರೀನ್ಸ್ ತಯಾರಿಲ್ಲ. ರಂಗದ ಅಂಗಪಕ್ಷಗಳ ಪೈಕಿ ಮೆಲಂಚನ್‌ರ ಪಕ್ಷವೇ ಹೆಚ್ಚು ಸೀಟುಗಳನ್ನು ಗೆದ್ದಿದೆಯಾದರೂ ಈ ಎರಡು ಪಕ್ಷಗಳ ಧೋರಣೆ ಹೀಗಿದೆ. ಆರ್ಥಿಕ ನೀತಿಗಳ ಬಗ್ಗೆ ಕೆಲವು ಗಂಭೀರ ಭಿನ್ನಾಭಿಪ್ರಾಯಗಳಿವೆ ಹಾಗೂ ಮೆಲಂಚನ್‌ರನ್ನು 'ಅತಿ ಎಡಪಂಥೀಯ' ಹಾಗೂ 'ಬಂಡವಾಳ-ವಿರೋಧಿ' ಎಂದು ಪರಿಗಣಿಸಲಾಗುತ್ತದೆ. ಈ ಭಿನ್ನಮತಗಳನ್ನು ಬಳಸಿಕೊಂಡು, ಅವುಗಳು ಮಧ್ಯ-ಎಡಪಂಥೀಯ ಸರಕಾರವನ್ನು ರಚಿಸದಂತೆ ಅವುಗಳನ್ನು ದೂರ ಸರಿಸುವ ಪ್ರಯತ್ನಗಳು ಆರಂಭವಾಗಿವೆ.

ಜನಾದೇಶಕ್ಕೆ ಅಗೌರವ

ಅಂಥ ಪ್ರಯತ್ನಗಳು ಜನಾದೇಶವನ್ನು ಅಗೌರವಿಸಿದಂತಾಗುತ್ತದೆ. ಜನರು ಮ್ಯಾಕ್ರನ್ ಮತ್ತು ಲೆ ಪೆನ್ ಇಬ್ಬರ ವಿರುದ್ಧವೂ ಮತ ನೀಡಿದ್ದಾರೆ. ಅವರು ಅತಿ-ಬಲಪಂಥೀಯ ಮತ್ತು ನವ-ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಮತ ಚಲಾಯಿಸಿದ್ದಾರೆ. ರಚನೆಯಾಗುವ ಯಾವುದೇ ಸರಕಾರವಾದರೂ ಈ ವಾಸ್ತವತೆಯನ್ನು ಮನಗಂಡು ಜನರ ತೀರ್ಪನ್ನು ಮನ್ನಿಸಬೇಕಾಗುತ್ತದೆ. ಆಗ ಮಾತ್ರವೇ ಅವರು ಜನರ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗುತ್ತದೆ. ಬೇರೆ ಯಾವುದೇ ಹೆಜ್ಜೆಯಿಟ್ಟರೂ ಅದು ವಿನಾಶಕಾರಿಯಾಗುತ್ತದೆ ಮತ್ತು ಅತಿ-ಬಲಪಂಥೀಯರು ಇನ್ನಷ್ಟು ಬಲಗೊಳ್ಳಲು ನೆರವಾಗುತ್ತದೆ. ಫ್ರಾನ್ಸ್‌ನಲ್ಲಿ ಕಟ್ಟಾ-ಬಲಪಂಥೀಯರ ಅಪಾಯದ ಮುನ್ಸೂಚನೆ ಸಂಪೂರ್ಣವಾಗಿ ದೂರವಾಗಿಲ್ಲ; ಅದನ್ನು ಸದ್ಯಕ್ಕೆ ತಡೆದು ನಿಲ್ಲಿಸಲಾಗಿದೆ ಅಷ್ಟೇ.

ಅನು: ವಿಶ್ವ

ಕಳೆದ 15 ತಿಂಗಳುಗಳಿಂದ ರಾಜ್ಯದಲ್ಲಿ 1,182 ರೈತರು ಆತ್ಮಹತ್ಯೆ:

ರೈತರ ಆತ್ಮಹತ್ಯೆ ಹಿಂದಿರುವ ಕಾರಣಗಳೇನು?

ರಾಜ್ಯದಲ್ಲಿ ಕಳೆದ 15 ತಿಂಗಳುಗಳಿಂದ ಸುಮಾರು 1,182 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ರಾಜ್ಯ ಕೃಷಿ ಇಲಾಖೆ ಮುಖ್ಯಮಂತ್ರಿಗಳಿಗೆ ವರದಿ ನೀಡಿದೆ. ಆತ್ಮಹತ್ಯೆ ಆದ ರೈತನ ಕುಟುಂಬದವರು ಅದನ್ನು ಆತ್ಮಹತ್ಯೆ ಎಂದು ಪರಿಗಣಿಸಿ ಮೊಕದ್ದಮೆ ದಾಖಲಿಸಿ, ಕೃಷಿ ಇಲಾಖೆಯಲ್ಲಿ ದಾಖಲಾಗಿರುವ ಅಂಕಿ ಅಂಶಗಳು ಇವಾಗಿದ್ದು, ಯಾವ ಎಲ್ಲಕ್ಕೂ ಸಿಗದೆ ನಡೆದಿರುವ ಆತ್ಮಹತ್ಯೆಗಳ ಸಂಖ್ಯೆ ಎಷ್ಟಿದೆ ಎಂದು ಹೇಳಲು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ಇಲಾಖೆ ಅಧಿಕೃತವಾಗಿ ನೀಡಿರುವ ಈ ಸಂಖ್ಯೆಯೂ ಕಡಿಮೆಯೇನಲ್ಲ. 15 ತಿಂಗಳು ಎಂದರೆ 450 ದಿನಗಳು. ಅಂದರೆ ಸರಾಸರಿ ದಿನಕ್ಕೆ ಮೂವರು ರೈತರು ರಾಜ್ಯದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ಸರಿಯಾಗಿ ತಲುಪುತ್ತಿದೆಯೋ ಇಲವೋ ಎಂದು ಅಧಿಕಾರಿಗಳ ಸಭೆಯಲ್ಲಿ ಪರಿಶೀಲನೆಯನ್ನು ನಡೆಸಿದ ಮುಖ್ಯಮಂತ್ರಿಗಳು, ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಇರುವ ಮಾರ್ಗೋಪಾಯಗಳ ಕುರಿತು ಅಥವಾ ಸಂಕಷ್ಟದಲ್ಲಿರುವ ಕೃಷಿ ಮತ್ತು ರೈತರನ್ನು ಸಂಕಷ್ಟದಿಂದ ಹೊರತರುವ ನಿಟ್ಟಿನಲ್ಲಿ ಯಾವ ಚರ್ಚೆಯನ್ನೂ ನಡೆಸಿದಂತೆ ಕಾಣುತ್ತಿಲ್ಲ. ಇದರಿಂದ ಸ್ಪಷ್ಟವಾಗಿ ತಿಳಿಯುವ ವಿಷಯವೇನೆಂದರೆ ಆಳುವ ಪ್ರಭುತ್ವಕ್ಕೆ, ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ರೈತರ ಆತ್ಮಹತ್ಯೆಗಳನ್ನು ಶಾಶ್ವತವಾಗಿ ತಡೆಯುವ, ಅದಕ್ಕಾಗಿ ಕೃಷಿ ಮತ್ತು ರೈತ ಪರವಾದ ನೀತಿಗಳನ್ನು ರೂಪಿಸುವ ಯೋಚನೆ ಇದ್ದಂತಿಲ್ಲ. ಮಾತ್ರವಲ್ಲ ಕೇಂದ್ರ ರಾಜ್ಯ ಸರ್ಕಾರಗಳು ಇಷ್ಟು ವರ್ಷಗಳಿಂದ ಅನುಸರಿಸಿಕೊಂಡು ಬಂದಿರುವ ನೀತಿಗಳ ಪರಿಣಾಮವೇ ರೈತರ ಆತ್ಮಹತ್ಯೆಗಳ ಸಂಖ್ಯೆ ಏರುಗತಿಯಲ್ಲಿರಲು ಕಾರಣ.

ಅನ್ನದಾತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ ಎಂದರೆ ಅದು ಈ ದೇಶದ ಕೃಷಿ ಬಿಕ್ಕಟ್ಟನ್ನು ಬಿಂಬಿಸುತ್ತದೆ. ಈ ಆತ್ಮಹತ್ಯೆಗಳಿಗಿರುವ ತಾತ್ವಿಕ ಮತ್ತು ಪ್ರಾಯೋಗಿಕ ಕಾರಣಗಳನ್ನು ಹೆಕ್ಕುತ್ತಾ, ಅವುಗಳಿಗೆ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ಮಾಡೋಣ.

ಯಾವುದೇ ಒಬ್ಬ ರೈತನಿಗೆ ಮೂಲಭೂತವಾಗಿ ಮೂರು ಹಂತದ ಸಮಸ್ಯೆಗಳು ಕೃಷಿ ಕ್ಷೇತ್ರದಲ್ಲಿ ತಲೆದೋರುತ್ತವೆ. ಮೊದಲ ಹಂತದಲ್ಲಿ ಭೂಮಿ ಮತ್ತು ಬಿತ್ತನೆಯ ಕುರಿತಾದ ಸಮಸ್ಯೆಗಳು, ಎರಡನೇ ಹಂತದಲ್ಲಿ ಬೆಳೆ ಬೆಳೆಯುವ ಸಂದರ್ಭದಲ್ಲಿನ ಸಮಸ್ಯೆಗಳು, ಮೂರನೇ ಹಂತದಲ್ಲಿ ಮಾರುಕಟ್ಟೆಯ ಸಮಸ್ಯೆ ಮತ್ತು ಬಿತ್ತನೆಯ ಕುರಿತಾದ ಸಮಸ್ಯೆಗಳು, ಎರಡನೇ ಹಂತದಲ್ಲಿ ಬೆಳೆ ಬೆಳೆಯುವ ಸಂದರ್ಭದಲ್ಲಿನ ಸಮಸ್ಯೆಗಳು, ಮೂರನೇ ಹಂತದಲ್ಲಿ ಮಾರುಕಟ್ಟೆಯ ಸಮಸ್ಯೆ. ಈ ಮೂರು ಹಂತದ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ರೈತ ಪರವಾದ ಪರಿಹಾರಗಳನ್ನು ಕಂಡುಕೊಂಡರೆ ಸಾಕು. ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬಹುದು.

ಎಚ್.ಆರ್. ನವೀನ್‌ಕುಮಾರ್, ಹಾಸನ

ಕರ್ನಾಟಕದಲ್ಲಿ ಈಗ ಮುಂಗಾರು ಮಳೆ ಪ್ರಾರಂಭವಾಗಿದೆ. ಆದರೆ ಕಳೆದ 4–5 ವರ್ಷಗಳಿಂದ ರಾಜ್ಯ ಬೀಕರ ಬರಗಾಲವನ್ನು ಎದುರಿಸಿದೆ. ಇದರಿಂದ ರೈತ ಸಮುದಾಯ ಅತ್ಯಂತ ಹೆಚ್ಚಿನ ನಷ್ಟವನ್ನ ಅನುಭವಿಸಿದ್ದಾರೆ. ಇದರ ಹಿಂದೆ ಬರ ಪರಿಹಾರ ಸರಿಯಾಗಿ ರೈತರಿಗೆ ತಲುಪಿಲ್ಲ. ಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ಅವರು ಹೇಳುವಂತೆ “ಬರ ಅಂದರೆ ಎಲ್ಲರಿಗೂ ಇಷ್ಟ” ಇವೆಲ್ಲವುಗಳ ಒಟ್ಟು ಮೊತ್ತವೇ ರೈತರ ಆತ್ಮಹತ್ಯೆಗಳು.

ಸಬ್ಸಿಡಿ ಕಡಿತ–ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ:

ಭಾರತದಲ್ಲಿನ ಕೃಷಿಯಲ್ಲಿ ದಿನದಿಂದ ದಿನಕ್ಕೆ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಕೃಷಿ ಲಾಗುವಾಡುಗಳಾದ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ, ಯಂತ್ರೋಪಕರಣಗಳು, ಡೀಸೆಲ್ ಇವುಗಳ ಮೇಲಿನ ಸಬ್ಸಿಡಿಗಳನ್ನು ಎಲ್ಲಾ ಸರ್ಕಾರಗಳು ಸ್ಪರ್ಧೆಗಿಳಿದಂತೆ ಕಡಿತಗೊಳಿಸುತ್ತಿರುವುದರಿಂದ, ಇವುಗಳ ಮೂಲ ಬೆಲೆಗಳು ಗಗನಕ್ಕೇರುತ್ತಿವೆ. ಇದರಿಂದಾಗಿ ಕೃಷಿ ಮಾಡಲು ಸಾಲ ರಾಷ್ಟ್ರೀಯ ಬ್ಯಾಂಕುಗಳಲ್ಲಿ, ಕೃಷಿ ಪತ್ತಿನ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಸುಲಭವಾಗಿ ಸಿಗದ ಕಾರಣ, ಅನಿವಾರ್ಯವಾಗಿ ಖಾಸಗೀ ಲೇವಾದಾರರ ಬಳಿ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ತರುತ್ತಾರೆ. ಅದಕ್ಕೆ ಬಡ್ಡಿ, ಚಕ್ರಬಡ್ಡಿ ಸೇರಿ ಸಾಲ ತೀರಿಸಲಾಗದೆ, ಬೆಳೆದ ಬೆಳೆಯೂ ಕೈಹಿಡಿಯದಾದಾಗ ಸಾಲಗಾರರ ಕಾಟ ತಡೆಯಲಾರದೆ, ಸ್ವಾಭಿಮಾನಕ್ಕೆ ಅಂಜಿ ಆತ್ಮಹತ್ಯೆಗೆ ಶರಣಾಗುತ್ತಾನೆ. ಇವುಗಳ ಜೊತೆಗೆ ಈಗ ಮೈಕ್ರೋಫೈನಾನ್ಸ್ ಗಳು, ಸ್ವಸಹಾಯ ಗುಂಪುಗಳ ಮೂಲಕ ಸಾಲ ಕೊಟ್ಟು ವಿಪರೀತ ಬಡ್ಡಿ ವಸೂಲಿ ಮಾಡಿ ಸಾಲಗಾರರಿಗೆ ಕಿರುಕುಳ ನೀಡುವ ಪ್ರಕರಣಗಳು ಹೆಚ್ಚಾಗುತ್ತಿವೆ. ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿ ಮೈಕ್ರೋಫೈನಾನ್ಸ್ ವ್ಯವಹಾರದಲ್ಲಿ ಸಿಲುಕಿ ಸಾಲ ತೀರಿಸಲಾಗದೆ, ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡುಕೊಂಡಿರುವ ಧಾರುಣ ಘಟನೆ ನಡೆದಿದೆ.

ಇಂತಹ ಪರಿಸ್ಥಿತಿಯಲ್ಲಿರುವಾಗ ಕೇಂದ್ರ ಮತ್ತು ರಾಜ್ಯದ ಬಿಜೆಪಿ ಕಾಂಗ್ರೆಸ್ ಸರ್ಕಾರಗಳು ದೊಡ್ಡ ದೊಡ್ಡ ಉದ್ಯಮಿಪತಿಗಳ, ಕಾರ್ಪೊರೇಟ್ ಕಂಪನಿಗಳ ಸಾಲವನ್ನು ಮನ್ನಾ ಮಾಡುತ್ತದೆ,



ಮಾಡಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿ ಮಾಡಲಾಗಿದೆ. ಕೃಷಿಗೆ ಅಗತ್ಯವಿರುವ ಎಲ್ಲಾ ಲಾಗುವಾಡುಗಳಿಗೆ ನೀಡುವ ಸಬ್ಸಿಡಿಯನ್ನು ಹೆಚ್ಚಿಸಿ ಅವುಗಳ ಬೆಲೆಗಳನ್ನು ಕಡಿತಗೊಳಿಸಿದರೆ, ಪ್ರಾರಂಭಿಕ ಹಂತದಲ್ಲಿ ರೈತರು ಸಾಲಮಾಡುವ ಸ್ಥಿತಿ ನಿರ್ಮಾಣವಾಗುವುದಿಲ್ಲ.

ಸಾಲ ಸೌಲಭ್ಯದ ಕೊರತೆ:

ಪ್ರಸ್ತುತ ಸಾಲ ಮಾಡದೇ ಕೃಷಿ ಮಾಡಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಭೂಮಿಯನ್ನು ಅತ್ಯಂತ ಭಾವನಾತ್ಮಕವಾಗಿ ಸ್ವೀಕರಿಸಿರುವ ರೈತ ಸಮುದಾಯ ಬೆಳೆಯನ್ನು ಬೆಳೆಯದೆ ಹೊಲವನ್ನು ಹಾಳುಬಿಡಲು ಇಚ್ಚಿಸುವುದಿಲ್ಲ. ಬದಲಾಗಿ ಅದರಿಂದ ಯಾವ ಪ್ರಮಾಣದ ಲಾಭಾಂಶ ಸಿಗುತ್ತದೆ ಎಂಬುದನ್ನು ಯೋಚಿಸುವ ಮೊದಲು, ನಾನು ಬೆಳೆ ಬೆಳೆಯದಿದ್ದರೆ ರೈತನಾಗಿ ಸ್ವಾಭಿಮಾನದಿಂದ ಹಳ್ಳಿಗಳಲ್ಲಿ ನಾಲ್ಕುಜನರ ಎದುರು ಓಡಾಡುವುದಾದರೂ ಹೇಗೆ ಎಂದು ಯೋಚಿಸುತ್ತಾನೆ. ಇದರ ಪ್ರತಿಫಲವಾಗಿ ತೆರಿಗೆಯಲ್ಲಿ ವಿನಾಯಿತಿ ತೋರುತ್ತದೆ. ಆದರೆ ದೇಶಕ್ಕೆ ಅನ್ನ ಬೆಳೆಯುವ ರೈತನ ಕೃಷಿ ಸಾಲವನ್ನು ಒಂದು ಸಾರಿ ಸಂಪೂರ್ಣ ಮನ್ನಾ ಮಾಡುವ ಋಣಮುಕ್ತ ಕಾಯ್ದೆಯನ್ನು ತರುವ ಯಾವ ಆಲೋಚನೆಗಳನ್ನು ಮಾಡುತ್ತಿಲ್ಲ.

ಮಾರುಕಟ್ಟೆಯ ಸಮಸ್ಯೆ:

ಅಂತಿಮವಾಗಿ ರೈತರು ಎದುರಿಸುವ ಸಮಸ್ಯೆ ಎಂದರೆ ಅದು ಮಾರುಕಟ್ಟೆಯ ಸಮಸ್ಯೆ. ಹವಾಮಾನ ವೈಪರಿತ್ಯ, ಕಾಡುಪ್ರಾಣಿಗಳ ಹಾವಳಿ, ಅತಿವೃಷ್ಟಿ, ಅನಾವೃಷ್ಟಿಗಳಂತಹ ಪ್ರಾಕೃತಿಕ ಸವಾಲುಗಳನ್ನೆಲ್ಲಾ ಎದುರಿಸಿ ಬೆಳೆ ಬೆಳೆದು, ಅದನ್ನು ಮಾರುಕಟ್ಟೆಗೆ ಕೊಂಡೊಯ್ದರೆ ಅಲ್ಲಿ ರೈತನ ಪಾಲಿಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ. ಅವನ ಬೆವರಿನ ಶ್ರಮ ಸಂಪೂರ್ಣವಾಗಿ ವ್ಯರ್ಥವಾದಂತೆ ಭಾಸವಾಗುತ್ತಿದೆ. ಇದಕ್ಕಾಗಿ ಈಗಾಗಲೇ ದೇಶಾದ್ಯಂತ ಸಾಕಷ್ಟು ಅಧ್ಯಯನಗಳನ್ನು ನಡೆಸಿ, ಕೃಷಿ ಬಿಕ್ಕಟ್ಟನ್ನು ತಡೆಗಟ್ಟಿ ಆ ಮೂಲಕ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೃಷಿ ತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು. ಇದುವರೆಗೂ ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ, ಕಾಂಗ್ರೆಸ್ ಸರ್ಕಾರಗಳು ಇದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ಈ ಶಿಫಾರಸ್ಸಿನ ಒಂದು ಪ್ರಮುಖ ಅಂಶವೆಂದರೆ ಅದು ರೈತರು ಬೆಳೆದ ಬೆಳೆಗಳಿಗೆ ಬೆಲೆಯನ್ನು ನಿಗದಿ ಮಾಡುವ ಕುರಿತು. ಇದಕ್ಕಾಗಿ ಡಾ. ಎಂ.ಎಸ್.ಸ್ವಾಮಿನಾಥನ್ ಅವರು ಸಿ2+50% ಎಂಬ ಸೂತ್ರವನ್ನು ನೀಡಿದ್ದಾರೆ. ಅಂದರೆ ಯಾವುದೇ ಒಂದು ಬೆಳೆಯನ್ನು ಬೆಳೆಯಲು ತಗುಲುವ ವೆಚ್ಚವನ್ನು ಲೆಕ್ಕಹಾಕಿ, ಅದಕ್ಕೆ ಶೇಕಡಾ 50 ರಷ್ಟು ಲಾಭಾಂಶ ಸೇರಿಸಿ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಮಾಡಬೇಕು. ಆದರೆ ಇಂದು ದೇಶಾದ್ಯಂತ ಮಾರುಕಟ್ಟೆ ಖಾಸಗೀ ಕಾರ್ಪೊರೇಟ್ ಕೈವಶವಾಗಿದ್ದು, ಇಲ್ಲಿ ಬಡರೈತರಿಗೆ ನ್ಯಾಯವನ್ನು ನಿರೀಕ್ಷಿಸುವುದೇ ಕಷ್ಟ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮುಕ್ತ ವ್ಯಾಪಾರ ಒಪ್ಪಂದದ ಭಾಗವಾಗಿ ಭಾರತದಲ್ಲಿ ಬೆಳೆಯುವ ಬಹುತೇಕ ಎಲ್ಲಾ ಕೃಷಿ ಉತ್ಪನ್ನಗಳನ್ನು ಸುಂಕರಹಿತವಾಗಿ ಅಥವಾ ಕಡಿಮೆ ಸುಂಕದಲ್ಲಿ ಭಾರತದ ಮಾರುಕಟ್ಟೆಗಳಿಗೆ ಲಗ್ಗೆ ಇಟ್ಟು, ನಮ್ಮ ರೈತರು ಬೆಳೆದ ಪದಾರ್ಥಗಳು ಮಾರಾಟವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಕೃಷಿಯ ಆದಾಯ ಕುಸಿದಿರುವುದರಿಂದ ಹೈನುಗಾರಿಕೆಯ ಮೇಲೆ ಭರವಸೆ ಇಟ್ಟು ರೈತರು ಆ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದ್ದರೆ, ಈಗ ಡೈರಿ ಉತ್ಪನ್ನಗಳೂ ವಿದೇಶದಿಂದ ಭಾರತದ ಮಾರುಕಟ್ಟೆಗೆ ಲಗ್ಗೆಯಿಟ್ಟಿವೆ.

ನೀತಿಗಳ ಪರಿಣಾಮ:

ಕೃಷಿಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ರೈತಾಪಿ ಕೃಷಿಯನ್ನು ಬಲಪಡಿಸಲು, ಆಳುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀತಿಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು, ರೈತ ಸಮುದಾಯವನ್ನು ಒಳಗೊಳ್ಳುವ ಯಾವ ಸೂಚನೆಗಳೂ ಇದುವರೆಗೂ ಕಂಡುಬಂದಿಲ್ಲ. 1990 ರ ನಂತರದ ಜಾಗತೀಕರಣ ನೀತಿಗಳ ಪರಿಣಾಮವಾಗಿ ಕೃಷಿಯನ್ನು ಸಂಪೂರ್ಣವಾಗಿ ಕಾರ್ಪೊರೇಟೀಕರಣ ಗೊಳಿಸಬೇಕೆನ್ನುವ ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ. ಇದರ ಭಾಗವಾಗಿಯೇ ಸಬ್ಸಿಡಿಗಳ ಕಡಿತ, ಮೂರು ಕರಾಳ ಕೃಷಿ ಕಾಯ್ದೆಗಳನ್ನು ಯಾವುದೇ ಚರ್ಚೆಗಳಿಲ್ಲದೆ ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸುವ ಪ್ರಯತ್ನ. (ಧೀರೋದ್ದಾತ್ತ ದೆಹಲಿ ರೈತ ಚಳವಳಿಯಿಂದಾಗಿ ಈ ನೀತಿಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಸಾಧ್ಯವಾಗಿದೆ)

ಒಟ್ಟಾರೆ ರೈತರ ಆತ್ಮಹತ್ಯೆಗಳಿಗೆ ಒಂದೆಡೆ ಆಳುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ಕಾರ್ಪೊರೇಟ್ ಪರವಾದ ನೀತಿಗಳು ಕಾರಣವಾದರೆ, ಮತ್ತೊಂದೆಡೆ ಹವಾಮಾನ ಬದಲಾವಣೆ ಮತ್ತು ಮಣ್ಣಿನ ಗುಣ, ನೀರಿನ ಲಭ್ಯತೆಯ ಆಧಾರದಲ್ಲಿ ಮತ್ತು ಅಗತ್ಯಕ್ಕೆ ಅನುಗುಣವಾಗಿ ಯಾವ ಬೆಳೆಯನ್ನು ಎಷ್ಟು ಬೆಳೆಯಬೇಕು ಎನ್ನುವ ಒಂದು ರಾಷ್ಟ್ರೀಯ ಯೋಜನೆ ಇಲ್ಲದಿರುವುದು. ಬಿತ್ತನೆ ಬೀಜದ ಸ್ವಾವಲಂಬನೆಯನ್ನು ಕಳೆದುಕೊಂಡಿರುವುದು ರೈತರನ್ನು ಕೃಷಿಯಿಂದ ದೂಡುವ ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿದೆ.



3 ಹೊಸ ಕ್ರಿಮಿನಲ್ ಕಾನೂನುಗಳು ನೋಟುರದ್ಧತಿಯಂತಹ ಮತ್ತೊಂದು ಮೂರ್ಖಕ್ರಮ:

ಹಿಂತೆಗೆದುಕೊಳ್ಳುವಂತೆ ಕೇಂದ್ರ ಕಾರ್ಮಿಕ ಸಂಘಗಳು, ಒಕ್ಕೂಟಗಳ ವೇದಿಕೆಯ ಆಗ್ರಹ

ಜುಲೈ 1 ರಿಂದ ಜಾರಿಗೆ ಬಂದಿರುವ ಭಾರತೀಯ ನ್ಯಾಯ ಸಂಹಿತೆ ಮತ್ತಿತರ ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳುವಂತೆ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಹಲವು ಸ್ವತಂತ್ರ ನೌಕರರ ಒಕ್ಕೂಟಗಳ ವೇದಿಕೆ ಕರೆ ನೀಡಿದೆ.

ಹಿಂದಿನ ಕಾನೂನುಗಳಿಗೆ ಹಿಂತಿರುಗಲು ಸರ್ಕಾರವನ್ನು ಒತ್ತಾಯಿಸುತ್ತಾ, 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೀಡಿರುವ ಜಂಟಿ ಹೇಳಿಕೆಯು ಬದಲಾವಣೆಗಳನ್ನು "ಅಳವಡಿಸಿಕೊಳ್ಳುವ ಮತ್ತು ಅನುಷ್ಠಾನಗೊಳಿಸುವ ಮೊದಲು ಸಾರ್ವಜನಿಕ ರಂಗದಲ್ಲಿ ಅವುಗಳ ಮೇಲೆ ಚರ್ಚೆ ನಡೆಯಬೇಕು", ಏಕೆಂದರೆ ಈ ಬದಲಾವಣೆಗಳನ್ನು "ಸರಿಯಾದ ಸಮಾಲೋಚನೆಯಿಲ್ಲದೆ, ಸಂಸದೀಯ ಸಮಿತಿಯು ನೀಡಿದ ಸಲಹೆಗಳನ್ನೂ ನಿರ್ಲಕ್ಷಿಸಿ. ಮತ್ತು ಕರಡನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡದೆ ಜನರ ಮೇಲೆ ಹೇರಲಾಗಿದೆ" ಎಂದು ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.

"ಇವುಗಳನ್ನು ಬ್ರಿಟಿಷರ ಕಾಲದ ಕಾನೂನುಗಳನ್ನು ಬದಲಿಸುವ ಉದ್ದೇಶದಿಂದ ತರಲಾಗಿದೆ ಎಂಬ ಸಮರ್ಥನೆಯು ಸುಳ್ಳು, ಏಕೆಂದರೆ ಇದು ಹಿಂದಿನ ಕಾನೂನುಗಳ ಎಲ್ಲಾ ನಿಬಂಧನೆಗಳನ್ನು ಉಳಿಸಿಕೊಂಡಿದೆ ಮತ್ತು ಅವುಗಳಲ್ಲಿ ಕೆಲವನ್ನು ಇನ್ನಷ್ಟು ಕಠಿಣಗೊಳಿಸುತ್ತದೆ. ಉದಾಹರಣೆಗೆ, ರಾಜದ್ರೋಹವನ್ನು ಶಿಕ್ಷಿಸಲು ಉದ್ದೇಶಿಸಿರುವ ಐಪಿಎಸ್ ನ ಸೆಕ್ಷನ್ 124 (ಇದು ಒಂದು ವಿಶಿಷ್ಟ ಬ್ರಿಟಿಷ್ ಶಾಸನ) ಅನ್ನು ಉಳಿಸಿಕೊಳ್ಳಲಾಗಿದೆ ಮತ್ತು 3 ವರ್ಷಗಳ ಜೈಲು ಶಿಕ್ಷೆಯ ನಿಬಂಧನೆಯನ್ನು 7 ವರ್ಷಗಳಿಗೆ ಹೆಚ್ಚಿಸಲಾಗಿದೆ! ಇದರ ಪ್ರಕಾರ ಜನರ ಯಾವುದೇ ಸಭೆಗಳು ಮತ್ತು ಅವುಗಳ ಮುಖಂಡರನ್ನು ಭಯೋತ್ಪಾದಕರು ಎಂದು ಘೋಷಿಸಬಹುದು. ಎಲ್ಲಾ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ಈ ನಿಬಂಧನೆಯ ಅಡಿಯಲ್ಲಿ ತರಬಹುದು" ಎಂದು ಇಂಟಕ್, ಸಿಐಟಿಯು, ಎಐಟಿಯುಸಿ, ಎಸ್ಇಡಬ್ಲ್ಯೂಎ, ಹೆಚ್ಎಂಎಸ್, ಎಐಯುಟಿಯುಸಿ, ಎಐಸಿಸಿಟಿಯು, ಯುಟಿಯುಸಿ, ಎಲ್‌ಪಿಎಫ್ ಮತ್ತು ಟಿಯುಸಿಸಿ ಸಹಿ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ

ಜುಲೈ 1, 2024 ರಿಂದ ಜಾರಿಗೆ ಬಂದಿರುವ ಈ 3 ಹೊಸ ಕ್ರಿಮಿನಲ್ ಕಾನೂನುಗಳ ದೂರಗಾಮಿ ಪರಿಣಾಮಗಳ ಬಗ್ಗೆ ಸಾಮಾನ್ಯ ಜನರಿಗೆ ತಿಳಿದಿರುವ ಸಾಧ್ಯತೆ ಇಲ್ಲ. ಅವನ್ನು ಜನರ ಮೇಲೆ ಬಲವಂತವಾಗಿ ಹೇರಲಾಗಿದೆ.

ಪೊಲೀಸ್ ಠಾಣೆಗಳ ಮುಖ್ಯಸ್ಥರಿಗೆ ಎಫ್ಐಆರ್ ದಾಖಲಿಸಲು ಎಲ್ಲಾ ಅಧಿಕಾರಗಳನ್ನು ನೀಡಲಾಗಿದೆ, ಎಫ್ಐಆರ್ ದಾಖಲಿಸುವುದು ಪ್ರತಿಯೊಬ್ಬ ನಾಗರಿಕನ ಹಕ್ಕು ಎಂಬ ಇದುವರೆಗಿನ ನಿಬಂಧನೆಗಿಂತ ಭಿನ್ನವಾಗಿ ಅವನ್ನು ನೋಂದಾಯಿಸಬೇಕೇ ಬೇಡವೇ ಎಂಬುದನ್ನೂ ಪೋಲೀಸರ ವಿವೇಚನೆಗೆ ಬಿಡಲಾಗಿದೆ, ಪೋಲೀಸ್ ಕಸ್ಟಡಿ ಅವಧಿಯನ್ನು ಈಗಿರುವ 15 ದಿನಗಳಿಂದ 90 ದಿನಗಳಿಗೆ ಹೆಚ್ಚಿಸಲಾಗಿದೆ. ತಮ್ಮ ನೈಜ ಬೇಡಿಕೆಗಳಿಗಾಗಿ ಶಾಂತಿಯುತ ಪ್ರತಿಭಟನಾಕಾರರು ಮತ್ತು ಘೇರಾವ್ ಮಾಡುವ ಕಾರ್ಮಿಕರ ವಿರುದ್ಧ ಕೇಸು ದಾಖಲಿಸಲು ಪೊಲೀಸರಿಗೆ ಅಧಿಕಾರ ಕೊಡಲಾಗಿದೆ. ಇದು ಆಳುವವರು ಮತ್ತು ಅವರ ಗುರುಗಳ ಮರ್ಜಿಗಳಿಗೆ ಅನುಗುಣವಾಗಿ ದಬ್ಬಾಳಿಕೆಯ ತಂತ್ರಗಳನ್ನು ಅನುಸರಿಸುವ ಪೊಲೀಸ್ ರಾಜ್ಯಭಾರಕ್ಕೆ ನಾಂದಿ ಹಾಡಬಹುದು ಎಂದು ವೇದಿಕೆ ಭೀತಿ ವ್ಯಕ್ತಪಡಿಸಿದೆ.

ಈಗಾಗಲೇ ದೇಶಾದ್ಯಂತ ಟ್ರಕ್ ಚಾಲಕರಿಂದ ಇದಕ್ಕೆ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಿಟ್ ಅಂಡ್ ರನ್ ಪ್ರಕರಣಗಳಿಗೆ ಸಂಬಂಧಿಸಿದ ಕರಾಳ ನಿಬಂಧನೆಗಳಿಗೆ ತೀವ್ರ ವಿರೋಧ ವ್ಯಕ್ತವಾದಾಗ, ಸರಕಾರ ಹಿಂದೆ ಸರಿಯಬೇಕಾಯಿತು, ಆ ಸೆಕ್ಷನ್‌ಗಳನ್ನು ಜಾರಿಗೆ ತರುವುದಿಲ್ಲ ಎಂದು ಹೇಳಬೇಕಾಯಿತು, ಆದರೆ ಅವುಗಳನ್ನು ಇನ್ನೂ ರದ್ದುಗೊಳಿಸಲಿಲ್ಲ ಎಂದು ಕಾರ್ಮಿಕ ಸಂಘಗಳು ನೆನಪಿಸಿವೆ.

ಈ ಮೂಲಕ ಹಿಂದಿ ಭಾಷೆಯನ್ನು ಹೇರಲಾಗುತ್ತಿದೆ ಎಂಬ ಆಕ್ಷೇಪವೂ ಇದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಈ ಸರಕಾರದ 2016ರ ನೋಟು ರದ್ದತಿಯಂತ ಮತ್ತೊಂದು ಮೂರ್ಖ ಹೆಜ್ಜೆಯಾಗಿದೆ, ವಾಸ್ತವವಾಗಿ ಇದು ಹೆಚ್ಚು ಅಪಾಯಕಾರಿ, ಕ್ರಿಮಿನಲ್ ನ್ಯಾಯಶಾಸ್ತ್ರವನ್ನು ಪುನರ್ರಚಿಸಿ ಜನರ ಹಕ್ಕುಗಳ ಮೇಲೆ ದಾಳಿಗಳನ್ನು ಹರಿಯ ಬಿಡುವ ನವ ಉದಾರವಾದಿ ಶಕ್ತಿಗಳ ಹಿತಾಸಕ್ತಿಗಳಿಗೆ ಸರಿಹೊಂದುವ ಕ್ರಮ ಎಂದಿರುವ ಕೇಂದ್ರೀಯ ಕಾರ್ಮಿಕ ಸಂಘಗಳು, ನೌಕರರ ಒಕ್ಕೂಟಗಳ ವೇದಿಕೆಯು ಈ ಕಾನೂನುಗಳನ್ನು ರದ್ದುಗೊಳಿಸಬೇಕು ಮತ್ತು ಪ್ರಸ್ತಾಪಿಸಲಾದ ಯಾವುದೇ ಬದಲಾವಣೆಗಳನ್ನು ಅಳವಡಿಸಿಕೊಳ್ಳುವ ಮತ್ತು ಅನುಷ್ಠಾನಗೊಳಿಸುವ ಮೊದಲು ಈ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿದೆ.

ಮೋದಿ–3 ಸರಕಾರದ ಪೂರ್ಣ ಬಜೆಟ್ 2024–25 ಹೇಗಿರಬೇಕು... ಪುಟ 6 ರಿಂದ

2020ರಲ್ಲಿ ಆರಂಭಿಸಿದೆ. ಆಂತರಿಕ ಉದ್ದಿಮೆಗಳಿಗೆ ಅವುಗಳ ಉತ್ಪಾದನಾ ಸಾಧನೆಯ ಮೇಲೆ ಆಯ್ದ ಉದ್ದಿಮೆಗಳಿಗೆ ಉತ್ತೇಜನಾತ್ಮಕ ಸಬ್ಸಿಡಿ ನೀಡುವ ಯೋಜನೆ ಇದಾಗಿದೆ. ಆಂತರಿಕವಾಗಿ ಉತ್ಪಾದನೆಯನ್ನು ಪ್ರೋತ್ಸಾಹಿಸುವುದರ ಮೂಲಕ ಆಮದು ಹೊರೆಯನ್ನು ಕಡಿಮೆ ಮಾಡುವುದು ಇದರ ಒಂದು ಉದ್ದೇಶ. ಆದರೆ ಇದು ಮತ್ತೆ ಉಳ್ಳವರಿಗೆ ಅನುಕೂಲ ಮಾಡಿಕೊಡುವ ಯೋಜನೆಯೇ ವಿನಾ ಕೈಗಾರಿಕೆಗಳನ್ನು ದೃಢವಾಗಿ ಬೆಳೆಸುವ ಯೋಜನೆಯಲ್ಲ. ಈ ಯೋಜನೆಯು ಆಮೆಗತಿಯಲ್ಲಿ ನಡೆದಿದೆ.

ಬಜೆಟ್ ಎಂದರೆ ತೆರಿಗೆ ಕಡಿತ, ತೆರಿಗೆ ವಿನಾಯಿತಿ, ತೆರಿಗೆ ರಜ ಮುಂತಾದವುಗಳು ಮಾತ್ರವಲ್ಲ. ಇದಕ್ಕಿಂತ ಮುಖ್ಯವಾಗಿ ಅದರ ಸಾರ್ವಜನಿಕ ವೆಚ್ಚದ ಭಾಗ ಮುಖ್ಯವಾದುದು. ಭಾರತ ಸರ್ಕಾರದ ಬಜೆಟ್ಟಿನಲ್ಲಿನ ಸಾರ್ವಜನಿಕ ವೆಚ್ಚ 2014–15ರಲ್ಲಿ ರೂ. 17.19 ಲಕ್ಷ ಕೋಟಿಯಿದ್ದುದು 2023–24ರಲ್ಲಿ ಇದು ರೂ. 44.90 ಲಕ್ಷ ಕೋಟಯಾಗಿದೆ(ಶೇ.161.19 ಏರಿಕೆ). ಇದೇ ಅವಧಿಯಲ್ಲಿ ದೇಶದ ಜಿಡಿಪಿಯು ರೂ. 128.76 ಲಕ್ಷ ಕೋಟಿಯಿಂದ ರೂ. 296.57 ಲಕ್ಷ ಕೋಟಿಯಾಗಿದೆ (ಶೇ.130.32 ಏರಿಕೆ). ಆದರೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಈ ಅವಧಿಯಲ್ಲಿನ ಸಾಧನೆ ಋಣಾತ್ಮಕವಾದುದಾಗಿದೆ. ಉದ್ಯೋಗ ಕಾರ್ಯಕ್ರಮವಾದ ಮನರೇಗಾ ಕಾರ್ಯಕ್ರಮಕ್ಕೆ ಮೋದಿ ಸರ್ಕಾರವು ಆರಂಭದಿಂದಲೂ ಅನುದಾನವನ್ನು ಕಡಿತ ಮಾಡುತ್ತಾ ಬಂದಿದೆ. ಹೀಗೆ ಅನೇಕ ಜನಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನವನ್ನು ಒಂದೋ ಕಡಿಮೆಮಾಡುತ್ತಿದೆ ಇಲ್ಲವೇ ಏರಿಕೆ ಮಾಡುತ್ತಿಲ್ಲ. ಈ ಕಾರ್ಯಕ್ರಮಗಳಿಗೆ ಪ್ರಸಕ್ತ ಬಜೆಟ್ಟಿನಲ್ಲಿ ಹೆಚ್ಚಿನ ಅನುದಾನ ನೀಡಬೇಕು ಮತ್ತು ಇದೇ ರೀತಿಯ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಕ್ಕೂ ಆರಂಭಿಸಬೇಕು. ಮೋದಿ ಅವಧಿಯಲ್ಲಿ ದೇಶದಲ್ಲಿ ಮಕ್ಕಳ ಮತ್ತು ಮಹಿಳೆಯರ ಅಪೌಷ್ಟಿಕತೆ(ಅನಿಮಿಯ) ಏರಿಕೆಯಾಗುತ್ತಾ ನಡೆದಿದೆ. ಇದಕ್ಕೆ ಒಂದು ಬೃಹತ್ ಕಾರ್ಯಯೋಜನೆಯನ್ನು ಬಜೆಟ್ಟಿನಲ್ಲಿ ಸೇರಿಸಬೇಕು.

'ಸಮಗ್ರ ಬೇಡಿಕೆ' ಪ್ರಣೀತ ಆರ್ಥಿಕತೆ

ಭಾರತದ ಮತದಾರರು 18ನೆಯ ಲೋಕಸಭೆಯ ಚುನಾವಣೆಯಲ್ಲಿ ಸ್ಪಷ್ಟವಾಗಿ ಸರ್ಕಾರದ ಆರ್ಥಿಕ ನೀತಿ ಏನಾಗಿರಬೇಕು ಎಂಬುದನ್ನು ತೋರಿಸಿದ್ದಾರೆ. ಈ ಜನಾದೇಶವು 2024–25ರ ಪೂರ್ಣ ಬಜೆಟ್ಟಿನಲ್ಲಿ ಅಭಿವ್ಯಕ್ತವಾಗಬೇಕು. ಉದ್ಯೋಗ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ ದೊರೆಯಬೇಕು. ಬೆಲೆ ಏರಿಕೆಯನ್ನು, ಮುಖ್ಯವಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಅನುಭೋಗಿ ಬೆಲೆ ಸೂಚ್ಯಂಕವು ಕೆಳಮಟ್ಟದಲ್ಲಿದೆ. ಆದರೆ ಆಹಾರ ಬೆಲೆಗಳ ಏರಿಕೆಯು ಶೇ. 8 ಕ್ಕಿಂತ ಅಧಿಕವಾಗಿದೆ. ಇದು ಬಡವರ, ಕೂಲಿಕಾರರ, ರೈತರ ಮೇಲೆ ಆಘಾತಕಾರಿ ಪರಿಣಾಮ ಬೀರುತ್ತದೆ. ಇದನ್ನು ನಿಯಂತ್ರಿಸಲು ಬಜೆಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಘೋಷಿಸಬೇಕು.

ನಮ್ಮ ಆರ್ಥಿಕತೆಯನ್ನು ಕಾಡುತ್ತಿರುವ ಭಯಾನಕವಾದ ಅಸಮಾನತೆಯು ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಏಕೆಂದರೆ ಬೃಹತ್ ಸಮೂಹವಾದ ಕೂಲಿಕಾರರು, ಅಸಂಘಟಿತ ವಲಯದ ಕೆಲಸಗಾರರು, ರೈತರು ಮುಂತಾದ ಕೆಳವರಮಾನ ವರ್ಗದ ಸಮಗ್ರ ಬೇಡಿಕೆಯು ಕೆಳಮಟ್ಟದಲ್ಲಿರುತ್ತದೆ. ಇದು ಬಂಡವಾಳ ಹೂಡಿಕೆಗೆ ಉತ್ಸಾಹಕರ–ಪ್ರೋತ್ಸಾಹಕರ ವಾತಾವರಣವಲ್ಲ. ಇಂದು ಭಾರತದಲ್ಲಿ ಉಳಿತಾಯ, ಬಂಡವಾಳ ಹೂಡಿಕೆಮಟ್ಟ ಅತಿಕೆಳಮಟ್ಟದಲ್ಲಿದ್ದರೆ ಇದಕ್ಕೆ ಮುಖ್ಯ ಕಾರಣ 'ಸಮಗ್ರ ಬೇಡಿಕೆ'ಯಲ್ಲಿನ ತೀವ್ರ ಕೊರತೆ. ಇದನ್ನು ಅರ್ಥ ಮಾಡಿಕೊಳ್ಳದ ಮೋದಿ ಸರ್ಕಾರ ಕಳೆದ ಹತ್ತು ವರ್ಷಗಳಿಂದ 'ಪೂರೈಕೆ–ಪಣೀತ ಆರ್ಥಿಕ ನೀತಿ'ಯನ್ನು ಅನುಸರಿಸುತ್ತಾ ಬಂದಿದೆ. ಇದಕ್ಕೆ 2024–25ರ ಪೂರ್ಣ ಬಜೆಟ್ ಕೊನೆ ಹಾಡಬೇಕು. ಸಮಗ್ರ ಬೇಡಿಕೆಯನ್ನು ಬಲಪಡಿಸುವುದು ಪ್ರಸ್ತುತ ಬಜೆಟ್ಟಿನ ಮೂಲ ನೆಲೆಯಾಗಬೇಕು.

ಕೋಮುವಾದ– ಧಾರ್ಮಿಕತೆಯ ವೈಭವೀಕರಣ, ಮುಸ್ಲಿಮ್ ದ್ವೇಷ, ಆಹಾರ ಸಂಸ್ಕೃತಿಯ ಮೇಲಿನ ಹಲ್ಲೆ, ದುಡಿಮೆ–ದುಡಿಮೆಗಾರರ ಬಗ್ಗೆ ಗೌರವವಿಲ್ಲದಿರುವುದು ಮುಂತಾದ ಕ್ರಮಗಳು ಆರ್ಥಿಕ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿವೆ. ಈ ಎಲ್ಲ ಕ್ಷುದ್ರ ಸಾಮಾಜಿಕ ಕಾರ್ಯಯೋಜನೆಯನ್ನು ಪ್ರಜ್ಞಾಪೂರ್ವಕವಾಗಿ ಸರ್ಕಾರವು ನಿಲ್ಲಿಸಬೇಕು. ಇದು 18ನೆಯ ಲೋಕಸಭೆ ಚುನಾವಣೆಯ ಸಂದೇಶವಾಗಿದೆ. ಈ ಚುನಾವಣಾ ಜನಾದೇಶವು 2024–25ರ ಪೂರ್ಣ ಬಜೆಟ್ಟಿಗೆ ಮಾರ್ಗಸೂಚಿಯಾಗಲಿ. ನಿಜಕ್ಕೂ ಜುಲೈ 23 ರಂದು ಏನಾಗುತ್ತದೆ ಎಂಬುದನ್ನು ಕಾದು ನೋಡೋಣ. ಸಿ.ರಾಮಮನೋಹರ್ ರೆಡ್ಡಿ ಅವರು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿರುವಂತೆ ಮೋದಿ ಸರ್ಕಾರ, ಅದರ ಆರ್ಥಿಕ–ಸಾಮಾಜಿಕ ನೀತಿ ಬದಲಾಗುತ್ತದೆ ಎಂದು ನಂಬುವುದು ಕಷ್ಟ. ಏಕೆಂದರೆ ಅವರು ಅಧಿಕಾರದಲ್ಲಿದ್ದಾರೆ, ಅವರ ಪಕ್ಷದಲ್ಲಿ ಅಪಾರ ಹಣವಿದೆ, ಅವರ ಪಕ್ಷವು ತನ್ನ ಕಾರ್ಯಕರ್ತರ 'ತೋಳ್ಬಲ'ದಲ್ಲಿ ಹೆಚ್ಚಿನ ನಂಬಿಕೆಯಿಟ್ಟಿದೆ. ಆದರೂ ಲೋಕಸಭೆ ಚುನಾವಣೆಯಲ್ಲಿ ಜನರು ಸಂವಿಧಾನಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ತೋರಿರುವ ವಿಶ್ವಾಸದಿಂದ ಅವರು ಪಾಠ ಕಲಿಯುತ್ತಾರೆ ಎಂದು ನಿರೀಕ್ಷಿಸಬಹುದು.

ಜನಾದೇಶವನ್ನು, ಸಂಸತ್ತಿನಲ್ಲಿ ಹೆಚ್ಚಿರುವ ವಿರೋಧಪಕ್ಷಗಳ ಬಲವನ್ನು, ಸಾಮಾಜಿಕ ಮಾಧ್ಯಮವನ್ನು, ಸ್ವಂತ ಸರ್ಕಾರ ರಚನೆಗೆ ಅವಶ್ಯಕವಾದ ಸಂಸತ್ ಸ್ಥಾನಗಳನ್ನು ಪಡೆಯದಿರುವ ಸ್ಥಿತಿಯನ್ನು, ಬೆಂಬಲ ನೀಡುತ್ತಿರುವ ಪಕ್ಷಗಳ ಮೇಲಿನ ಅವಲಂಬನೆ ಮುಂತಾದ ಸೂಕ್ಷ್ಮ ಸಂಗತಿಗಳನ್ನು, ಸಮ್ಮಿಶ್ರ ಸರ್ಕಾರದ ವಾಸ್ತವವನ್ನು ಮೋದಿ ನಿರ್ಲಕ್ಷಿಸುವುದು ಅಷ್ಟೊಂದು ಸುಲಭವಲ್ಲ.

ಫ್ರಾನ್ಸ್: 2ನೇ ಸುತ್ತಿನಲ್ಲಿ ನವ-ಫ್ಯಾಸಿಸ್ಟರಿಗೆ ಸೋಲು, ಎಡ ಪ್ರಗತಿಪರ ಸರಕಾರಕ್ಕೆ ಜನಾದೇಶಕ್ಕೆ ಮ್ಯಾಕ್ರಾನ್ ತಡೆ ಪ್ರಯತ್ನ

ಫ್ರಾನ್ಸಿನ ಪಾರ್ಲಿಮೆಂಟಿಗೆ ನಡೆದ 2ನೇ ಸುತ್ತಿನ ಚುನಾವಣೆಯಲ್ಲಿ ನ್ಯೂ ಪಾಪ್ಯುಲರ್ ಫ್ರಂಟ್ (NFP) ಅತ್ಯಂತ ಹೆಚ್ಚು ಸೀಟು ಪಡೆದು ಮೊದಲ ಸ್ಥಾನದಲ್ಲಿದೆ. "ಎಕ್ಸಿಟ್ ಪೋಲ್" ನ್ನು ಧಿಕ್ಕರಿಸಿ ಮರೀನ್ ಲೆ ಪೆನ್ ಮತ್ತು ಜೋರ್ಡಾನ್ ಬಾರ್ಡೆಲ್ಲಾ ಅವರ ನಾಯಕತ್ವದ ನವ–ಫ್ಯಾಸಿಸ್ಟ್ "ರಾಷ್ಟ್ರೀಯ ರ್‍ಯಾಲಿ" ಪಕ್ಷದ ನಾಯಕತ್ವದ ಉಗ್ರ ಬಲಪಂಥೀಯ ರಂಗವನ್ನು, ಮೊದಲ ಸುತ್ತಿನಲ್ಲಿ ಗಳಿಸಿದ್ದ ಮೊದಲ ಸ್ಥಾನದಿಂದ ಹೊರಹಾಕಿ, ಮೂರನೇ ಸ್ಥಾನಕ್ಕೆ ತಳ್ಳಿದೆ. ಎಡ ಒಕ್ಕೂಟದ (NFP) ನಾಯಕತ್ವದಲ್ಲಿ ಸರಕಾರ ರಚಿಸಲು ಜನಾದೇಶವಿದೆ. ಎಡ ಒಕ್ಕೂಟ ಪಾರ್ಲಿಮೆಂಟರಿ ರಂಗ ತನ್ನ ನಾಯಕನನ್ನು ಆರಿಸಲಿದ್ದು ಅವರನ್ನು ಪ್ರಧಾನಿಯಾಗಿ ನೇಮಿಸಿ ಸರಕಾರ ರಚನೆಗೆ ಅಧ್ಯಕ್ಷ ಮ್ಯಾಕ್ರಾನ್ ರನ್ನು ಒತ್ತಾಯಿಸಿದ್ದಾರೆ. ಮ್ಯಾಕ್ರಾನ್ ರಂಗಕ್ಕೆ ಜನಾದೇಶವಿಲ್ಲ ಎಂದು ಮನಗಂಡಿರುವ ಪ್ರಧಾನಿ ಅಟ್ಟಲ್ ರಾಜೀನಾಮೆ ಕೊಟ್ಟಿದ್ದಾರೆ. ಎಡ ಮತ್ತು ಕಾರ್ಮಿಕ ವರ್ಗದ ಬೆಂಬಲಿತ ಪಕ್ಷಗಳನ್ನು ಅಧಿಕಾರ ವಹಿಸಿಕೊಳ್ಳದಂತೆ ತಡೆಯಲು ಮ್ಯಾಕ್ರಾನ್ ಇನ್ನೂ ಪ್ರಯತ್ನ ಪಡುತ್ತಿದ್ದಾರೆ ಎಂಬುದು ಸ್ಪಷ್ಟ. ನವ–ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವ ಬಗೆ ಹೇಗೆ ಎಂಬುದು ಎಡ ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳಿಗೆ ಸವಾಲಾಗಿರುವಾಗ ಫ್ರಾನ್ಸಿನ "ನ್ಯೂ ಪಾಪ್ಯುಲರ್ ಫ್ರಂಟ್" (ನವ ಜನಪ್ರಿಯ ರಂಗ–NFP) ಒಂದು ಉತ್ತಮ ಪ್ರಾಯೋಗಿಕ ಮಾದರಿಯನ್ನು ತೋರಿಸಿದೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಜುಲೈ 7 ರಂದು ಫ್ರಾನ್ಸಿನ ಪಾರ್ಲಿಮೆಂಟಿಗೆ ನಡೆದ 2ನೇ ಸುತ್ತಿನ ಚುನಾವಣೆಯಲ್ಲಿ ನ್ಯೂ ಪಾಪ್ಯುಲರ್ ಫ್ರಂಟ್ (ನವ ಜನಪ್ರಿಯ ರಂಗ–NFP) ಅತ್ಯಂತ ಹೆಚ್ಚು ಸೀಟು ಪಡೆದು ಮೊದಲ ಸ್ಥಾನದಲ್ಲಿದೆ. ಎಡಪಂಥೀಯ "ನ್ಯೂ ಪಾಪ್ಯುಲರ್ ಫ್ರಂಟ್" ಒಕ್ಕೂಟವು 'ಎಕ್ಸಿಟ್ ಪೋಲ್' ನ್ನು ಧಿಕ್ಕರಿಸಿ ಮರೀನ್ ಲೆ ಪೆನ್ ಮತ್ತು ಜೋರ್ಡಾನ್ ಬಾರ್ಡೆಲ್ಲಾ ಅವರ ನಾಯಕತ್ವದ ನವ–ಫ್ಯಾಸಿಸ್ಟ್ "ರಾಷ್ಟ್ರೀಯ ರ್‍ಯಾಲಿ" ಪಕ್ಷದ ನಾಯಕತ್ವದ ಉಗ್ರ ಬಲಪಂಥೀಯ ರಂಗವನ್ನು, ಮೊದಲ ಸುತ್ತಿನಲ್ಲಿ ಗಳಿಸಿದ್ದ ಮೊದಲ ಸ್ಥಾನದಿಂದ ಹೊರಹಾಕಿ, ಮೂರನೇ ಸ್ಥಾನಕ್ಕೆ ತಳ್ಳಿದೆ.

ಎಡ ಒಕ್ಕೂಟ NFP ಫ್ರಾನ್ಸಿನ 577 ಸದಸ್ಯರ ಪಾರ್ಲಿಮೆಂಟಿನಲ್ಲಿ 180 ಸ್ಥಾನಗಳನ್ನು ಗೆದ್ದಿದೆ. ಆದರೆ ಸಂಪೂರ್ಣ ಬಹುಮತ ಪಡೆದಿಲ್ಲ. ಎರಡನೇ ಸ್ಥಾನದಲ್ಲಿ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರ ನಡು–ಬಲಪಂಥೀಯ ಎನ್ಸೆಂಬಲ್ ಗುಂಪು, 159 ಸೀಟು ಗಳಿಸಿದೆ. ರಾಷ್ಟ್ರೀಯ ರ್‍ಯಾಲಿ ಯ ನಾಯಕತ್ವದ ಉಗ್ರ ಬಲಪಂಥೀಯ ರಂಗ ಕೇವಲ 142 ಸ್ಥಾನಗಳನ್ನು ಗೆದ್ದಿದೆ. ಬಲಪಂಥೀಯ 'ರಿಪಬ್ಲಿಕನ್' ರಂಗ 39 ಸ್ತಾನಗಳನ್ನು ಗಳಿಸಿ 4ನೇ ಸ್ತಾನದಲ್ಲಿದೆ.

ನ್ಯೂ ಪಾಪ್ಯುಲರ್ ಫ್ರಂಟ್ NFP ಎಂಬುದು, ಫ್ರೆಂಚ್ ಕಮ್ಯುನಿಸ್ಟ್ ಪಾರ್ಟಿ (ಪಿಸಿಎಫ್), ಫ್ರಾನ್ಸ್ ಇನ್ಸೌಮಿಸ್ (ಫ್ರಾನ್ಸ್ ಅನ್ ಬೌಂಡ್, ಜೀನ್–ಲುಕ್ ಮೆಲೆನ್ಚಾನ್ ಪಕ್ಷ), ನಡು–ಎಡಪಂಥೀಯ ಸಮಾಜವಾದಿ ಪಕ್ಷ (ಪಿಎಸ್) ಮತ್ತು ಲೆಸ್ ಎಕಾಲಜಿಸ್ಟ್‌ಟ್ಸ್ (ಗ್ರೀನ್–ಪರಿಸರವಾದಿ ಪಕ್ಷ) ಗಳ ಒಕ್ಕೂಟ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಎಡ ಒಕ್ಕೂಟ ತಂತ್ರಗಾರಿಕೆ


ಫ್ರೆಂಚ್ ಚುನಾವಣಾ ಪದ್ಧತಿಯ ಪ್ರಕಾರ ಮೊದಲನೆಯ ಸುತ್ತಿನ ಮೊದಲ ಎರಡು ಸ್ಥಾನ ಪಡೆದ ಅಭ್ಯರ್ಥಿಗಳು ಮತ್ತು ಪಟ್ಟಿಯಲ್ಲಿರುವ ಮತದಾರರ ಸಂಖ್ಯೆಯ ಶೇ.12.5 ರಷ್ಟು ಮತ ಪಡೆದ ಅಭ್ಯರ್ಥಿಗಳು ಸಹ ಎರಡನೆಯ ಸುತ್ತಿನ ಸ್ಪರ್ಧೆಯಲ್ಲಿ ಇರುತ್ತಾರೆ.

ಎರಡನೆಯ ಸುತ್ತಿನ ಚುನಾವಣೆಗಳಲ್ಲಿ ನವ–ಫ್ಯಾಸಿಸ್ಟ್ ಸರಕಾರ ರಚನೆಯನ್ನು ತಡೆಯಲು, ಉಗ್ರ ಬಲಪಂಥೀಯ ಅಭ್ಯರ್ಥಿಗಳನ್ನು ಸೋಲಿಸಲು ಚುನಾವಣಾ ಹೊಂದಾಣಿಕೆಗೆ ಎಡ ಒಕ್ಕೂಟ NFP ಕರೆ ನೀಡಿತು. ಮ್ಯಾಕ್ರಾನ್ ಅವರ ಎನ್ ಸೆಂಬಲ್ ರಂಗದ ಜತೆ ಮಾತುಕತೆ ನಡೆಸಿತು., ಎರಡೂ ರಂಗಗಳು (ಎಡ ಮತ್ತು ಮ್ಯಾಕ್ರಾನ್ ರಂಗ) ಸ್ಪರ್ಧಿಸಿದರೆ ಉಗ್ರ ಬಲಪಂಥೀಯ ರಂಗದ ಅಭ್ಯರ್ಥಿ ಗೆಲ್ಲುವ ಸಾಧ್ಯತೆಯಿದ್ದಲ್ಲಿ (ವಿಶೇಷವಾಗಿ ಮೊದಲ ಸುತ್ತಿನಲ್ಲಿ ಅದು ಮೊದಲನೇ ಸ್ಥಾನದಲ್ಲಿದ್ದ ಕ್ಷೇತ್ರಗಳಲ್ಲಿ) ಗೆಲ್ಲುವ ಸಾಧ್ಯತೆ ಇಲ್ಲದಿರುವ ಮೂರನೇ ಸ್ಥಾನದಲ್ಲಿರುವ ರಂಗದ ಅಭ್ಯರ್ಥಿಗಳನ್ನು ಹಿಂತೆಗೆಯಬೇಕು ಎಂದು ಕರೆ ನೀಡಿತು. ಇದಕ್ಕೆ ತ್ವರಿತ ಸಹಕಾರ ನೀಡದೆ ಮ್ಯಾಕ್ರಾನ್ ರಂಗ ವಿಳಂಭಿಸಿತು.

NFP ಮ್ಯಾಕ್ರಾನ್ ರಂಗ ಗೆಲ್ಲುವ ಸಾಧ್ಯತೆಯಿರುವ ಕ್ಷೇತ್ರಗಳಲ್ಲಿ ಏಕಪಕ್ಷೀಯವಾಗಿ ತನ್ನ ಅಭ್ಯರ್ಥಿಗಳನ್ನು ಹಿಂತೆಗೆದು ಅದರ ಮೇಲೆ ಅಂತಹುದೇ ನಿರ್ಣಯ ಕೈಗೊಳ್ಳುವಂತೆ ಪ್ರಚಾರ ಮಾಡಿ ಒತ್ತಡ ಹಾಕಿತು. ಇದರಿಂದಾಗಿ ತಾನೂ ಹಾಗೆ ಮಾಡದಿದ್ದರೆ ತನ್ನ ಬೆಂಬಲ 2ನೇ ಸುತ್ತಿನಲ್ಲಿ ಇನ್ನಷ್ಟು ಕಡಿಮೆಯಾಗಬಹುದು ಎಂಬ ಭೀತಿಯಿಂದ ಹಲವು ಕ್ಷೇತ್ರಗಳಲ್ಲಿ ಹಿಂತೆಗೆಯಿತು. ಆದರೆ ಇನ್ನೂ ಹಲವು ಕ್ಷೇತ್ರಗಳಲ್ಲಿ ಹಿಂತೆಗೆಯದೆ ರಾಷ್ಟ್ರೀಯ ರ್‍ಯಾಲಿಗೆ ಸ್ಥಾನವನ್ನು ಕೊಟ್ಟಿತು. ಎಡ ಒಕ್ಕೂಟ NFP 138 ಕ್ಷೇತ್ರಗಳಲ್ಲಿ ಮೂರನೇ ಸ್ಥಾನದಲ್ಲಿದ್ದ ಕಡೆ ಹಿಂತೆಗೆದರೆ ಮ್ಯಾಕ್ರಾನ್ ಒಕ್ಕೂಟ 82 ಕಡೆ ಮಾತ್ರ ಹಿಂತೆಗೆಯಿತು.

ಎರಡನೆ ಸುತ್ತಿನಲ್ಲಿ ಒಟ್ಟು 501 ಸೀಟುಗಳಿಗೆ ಮತದಾನ ನಡೆದು, ಅವುಗಳಲ್ಲಿ ಒಟ್ಟು 306 ಕ್ಷೇತ್ರಗಳಲ್ಲಿ ಮೂರು ಅಭ್ಯರ್ಥಿಗಳಿದ್ದರು. ಎಲ್ಲ ಹಿಂತೆಗೆತಗಳು ಮುಗಿದ ಮೇಲೂ 89 ಕ್ಷೇತ್ರಗಳಲ್ಲಿ ತ್ರಿಕೋಣ ಸ್ಪರ್ಧೆ ತಡೆಯಲು ಆಗಲಿಲ್ಲ. ಅವುಗಳಲ್ಲಿ 70 ಕ್ಷೇತ್ರಗಳಲ್ಲಿ ಮ್ಯಾಕ್ರಾನ್ ರಂಗ ಮೂರನೇ ಸ್ತಾನದಲ್ಲಿದ್ದರೂ ಸಹ ಸ್ಪರ್ಧಿಸಿತು. ಈ ಕ್ಷೇತ್ರಗಳಲ್ಲಿ ಅದು ಹಿಂತೆಗೆದಿದ್ದರೆ ನವ–ಫ್ಯಾಸಿಸ್ಟ್ ಇನ್ನಷ್ಟು ಕಡಿಮೆ ಸೀಟು ಪಡೆಯುತ್ತಿತ್ತು. ಆದರೆ ಈ ಹೆಚ್ಚಿನ ಸೀಟುಗಳೂ ಎಡ ಒಕ್ಕೂಟಕ್ಕೆ ಹೋಗುತ್ತಿದ್ದು, ಅದು ಬಹುಮತಕ್ಕೆ ಹತ್ತಿರ ಬರುತ್ತಿತ್ತು. ಅದು ಮ್ಯಾಕ್ರಾನ್ ಗೆ ಬೇಕಾಗಿರಲಿಲ್ಲ.





ಮ್ಯಾಕ್ರಾನ್ ತಂತ್ರಗಾರಿಕೆ

ಮ್ಯಾಕ್ರಾನ್ ಅವರು ಮಾಜಿ ಹೂಡಿಕೆ ಬ್ಯಾಂಕರ್ ಆಗಿದ್ದು, ಅವರು ಹತ್ತು ವರ್ಷಗಳ ಹಿಂದೆ ಹಣಕಾಸು ಮಂತ್ರಿಯಾಗಲು ಮಾಜಿ ಅಧ್ಯಕ್ಷ ಫ್ರಾಂಕೋಯಿಸ್ ಹೊಲಾಂಡ್ ಅವರನ್ನು ಆರಿಸುವ ಮೊದಲು ರಾಥ್ ಶೀಲ್ಡ್ ಮತ್ತು ಸಿ (Rothschild & Cie) ಬ್ಯಾಂಕ್ ನಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡಿದ್ದರು. ಆ ಪಾತ್ರದಲ್ಲಿ ಮತ್ತು ನಂತರ ಅಧ್ಯಕ್ಷರಾಗಿ, ಅವರು ಫ್ರೆಂಚ್ ಆರ್ಥಿಕತೆಯ ಪ್ರಮುಖ ವಿಭಾಗಗಳನ್ನು ಖಾಸಗೀಕರಣಗೊಳಿಸುವ ಅಥವಾ ಅನಿಯಂತ್ರಿತಗೊಳಿಸುವ ನೀತಿಗಳನ್ನು ಅನುಸರಿಸಿದರು, ಕಾರ್ಮಿಕರ ನಿವೃತ್ತಿ ವಯಸ್ಸನ್ನು ಹೆಚ್ಚಿಸಿದರು, ಅವರ ವಜಾಗೊಳಿಸುವಿಕೆಯನ್ನು ಸುಲಭಗೊಳಿಸಿದರು, ಮತ್ತು ಇತರ ಬಂಡವಾಳಶಾಹಿ ವರ್ಗದ ಆದ್ಯತೆಗಳನ್ನು ಅನುಸರಿಸಿದರು.

ಜೂನ್ ಆರಂಭದಲ್ಲಿ ನಡೆದ ಯುರೋಕೂಟ ಸಂಸತ್ತಿನ ಚುನಾವಣೆಯಲ್ಲಿ "ರಾಷ್ಟ್ರೀಯ ರ್‍ಯಾಲಿ"ಯ ಭಾರೀ ಗೆಲುವಿಗೆ ಅವರ ಅತ್ಯಂತ ಜನವಿರೋಧಿ ಕಟುನೀತಿಗಳೇ ಕಾರಣವಾಗಿದ್ದವು. ಅದರಲ್ಲೂ ಫ್ರಾನ್ಸ್ ಸೇರಿದಂತೆ ನಾಟೋ ಧೋರಣೆಗಳಿಂದ ಆರಂಭವಾದ ಉಕ್ರೇನ್ ಯುದ್ಧ ಹಾಗೂ ರಶ್ಯದ ಮೇಲಿನ ಆರ್ಥಿಕ ದಿಗ್ಬಂಧನದ ನೀತಿಗಳು ಮತ್ತು ಅದರಿಂದಾಗಿ ಜನರ ಜೀವನವೆಚ್ಚದ ವಿಪರೀತ ಏರಿಕೆಯ ಮತ್ತು ಆರ್ಥಿಕತೆಯ ಮೇಲೆ ಆದ ಪರಿಣಾಮಗಳ ವಿರುದ್ಧ ತೀವ್ರ ಆಕ್ರೋಶವಿತ್ತು. ಅದರ ನಂತರ ಮ್ಯಾಕ್ರಾನ್ ದೇಶವನ್ನು, ಅದೂ ಕೆಲವೇ ವಾರಗಳಲ್ಲಿ ಜಾಗತಿಕ ಒಲಿಂಪಿಕ್ಸ್ ಪ್ಯಾರಿಸಿನಲ್ಲಿ ನಡೆಯಲಿರುವಾಗ ಅನಿರೀಕ್ಷಿತ ಕ್ಷಿಪ್ರ ಚುನಾವಣೆಯಲ್ಲಿ ಮುಳುಗಿಸಿದರು. ಫ್ಯಾಸಿಸ್ಟರ ಜಯದ ಭಯವು ಮತದಾರರನ್ನು ತಮ್ಮ ಪಕ್ಷದತ್ತ ದೂಡುತ್ತದೆ, ಐಕ್ಯತೆ ಇಲ್ಲದ ಎಡ ಪಕ್ಷಗಳು ಚುನಾವಣೆಗಳಿಗೆ ಸಿದ್ಧರಿಲ್ಲದಿರುವಾಗ ತಮ್ಮ ಪಕ್ಕಕ್ಕೆ ಸಂಸತ್ತಿನ ನಿಯಂತ್ರಣವನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಅವರ ಲೆಕ್ಕಾಚಾರವಾಗಿತ್ತು. ಇದು ಅಪಾಯಕಾರಿ ಜೂಜಾಟವೆಂದು ಪ್ರಧಾನಿ ಗೇಬ್ರಿಯಲ್ ಅಟ್ಟಲ್ ಸೇರಿದಂತೆ ಅವರದೇ ಪಕ್ಷದ ನಾಯಕರು ಟೀಕಿಸಿದರು. ಆದರೆ ಎಡ ಪಕ್ಷಗಳು ತ್ವರಿತವಾಗಿ "ನವ ಜನಪ್ರಿಯ ರಂಗ" ಕಟ್ಟಿ ಜನರ ಸಮಸ್ಯೆಗಳಿಗೆ ಪರಿಹಾರವಿರುವ ಪ್ರಣಾಳಿಕೆ ಹೊರಡಿಸಿ ಮ್ಯಾಕ್ರಾನ್ ಮತ್ತು ನವ–ಫ್ಯಾಸಿಸ್ಟ್ ರಂಗ ಎರಡಕ್ಕೂ ಸವಾಲು ಎಸೆದರು.

ಚುನಾವಣಾ ಪ್ರಚಾರದ ಉದ್ದಕ್ಕೂ ಅವರು ಎಲ್ಲಾ ಕಡೆಯಿಂದ ಕ್ರೂರ ಟೀಕೆಗಳನ್ನು ಎದುರಿಸಿದರು. ಅನಿರೀಕ್ಷಿತ ಕ್ಷಿಪ್ರ ಚುನಾವಣೆಗೆ ಕರೆ ನೀಡುವ ಜೂಜಾಟದ ಮೂಲಕ ನವ–ಫ್ಯಾಸಿಸ್ಟರು ದೇಶವನ್ನು ಸ್ವಾಧೀನ ಪಡಿಸಿಕೊಂಡರೂ ಪರವಾಗಿಲ್ಲವೆಂಬ ಅವರ ಧೋರಣೆ ತೀವ್ರ ಟೀಕೆಗೊಳಗಾಯಿತು. ಮ್ಯಾಕ್ರಾನ್ ಮತ್ತು ನವ–ಫ್ಯಾಸಿಸ್ಟರಿಗೆ ಬಿಟ್ಟರೆ ಯಾರಿಗೂ ಚುನಾವಣೆ ಬೇಕಾಗಿರಲಿಲ್ಲ. ಚುನಾವಣಾ ಪ್ರಚಾರದ ಉದ್ದಕ್ಕೂ ಅವರು ಎಡ ಒಕ್ಕೂಟ ಮತ್ತು ನವ–ಫ್ಯಾಸಿಸ್ಟ್ ಎರಡೂ ಸಮಾನವಾಗಿ ಅಪಾಯಕಾರಿಯೆಂದು ಬಿಂಬಿಸಿದರು.

ಮೊದಲನೇ ಸುತ್ತಿನಲ್ಲಿ ಮೊದಲ ಸ್ಥಾನ ಪಡೆದ ನವ–ಫ್ಯಾಸಿಸ್ಟ್ ನ ಅಪಾಯ ಮತ್ತು ಎರಡನೇ ಸುತ್ತಿನಲ್ಲಿ ಅವರು ನಿಚ್ಚಳ ಬಹುಮತ ಪಡೆಯುವ ಅಪಾಯದ ಎದುರಲ್ಲೂ ಅವರು ಎಡ ಒಕ್ಕೂಟದ ಜತೆ ಸಹಕಾರಕ್ಕೆ ಸಿದ್ಧವಿರಲಿಲ್ಲ. ಮೂರನೇ ಸ್ಥಾನದಲ್ಲಿರುವ ಪಕ್ಷ (ಅದು ಎಡ ಒಕ್ಕೂಟವಿರಲಿ ಅಥವಾ ಮ್ಯಾಕ್ರಾನ್ ಕೂಟವಿರಲಿ) ಎರಡನೇ ಸುತ್ತಿನಲ್ಲಿ ಹಿಂತೆಗೆಯಬೇಕೆಂಬ ತಂತ್ರಗಾರಿಕೆಗೆ ಅವರ ವಿರೋಧವಿತ್ತು. ಆದರೆ ಮ್ಯಾಕ್ರಾನ್ ಇದಕ್ಕಾಗಿ ತಮ್ಮನ್ನು ಸಾರ್ವಜನಿಕವಾಗಿ ಟೀಕಿಸಿದರೂ ಲೆಕ್ಕಿಸದೆ, ಪ್ರಧಾನಿ ಅಟ್ಟಲ್ ಎಡ ಒಕ್ಕೂಟದ ತಂತ್ರಗಾರಿಕೆಯನ್ನು ಬೆಂಬಲಿಸಿ ಅದರ ಜಾರಿಗೆ ಪ್ರಯತ್ನಿಸಿದರು. ಆದರೂ ನವ–ಫ್ಯಾಸಿಸ್ಟ್ ರಿಗಿಂತ ಎಡಪಂಥೀಯರು ಹೆಚ್ಚು ಅಪಾಯಕಾರಿಯೆಂದು ಭಾವಿಸುವ ಕೆಲವು ಮ್ಯಾಕ್ರಾನ್ ಬೆಂಬಲಿಗ ಅಭ್ಯರ್ಥಿಗಳು ಹಿಂತೆಗೆಯಲಿಲ್ಲ. ಮಾತ್ರವಲ್ಲ, ಅವರಲ್ಲಿ ಹಲವರು ಎಡ ಅಭ್ಯರ್ಥಿಗಳನ್ನು ಸೋಲಿಸಲು ನ್ಯಾಶನಲ್ ರ್‍ಯಾಲಿ ಅಥವಾ ರಿಪಬ್ಲಿಕನ್ ಅಭ್ಯರ್ಥಿಗಳು ಹಿಂತೆಗೆಯುವಂತೆ ಡೀಲ್ ಮಾಡುವ ವಿಫಲ ಪ್ರಯತ್ನವನ್ನೂ ಮಾಡಿದರು.

ಎಡ ಒಕ್ಕೂಟಕ್ಕೆ ಜನಾದೇಶ, ಸರಕಾರ ರಚನೆಗೆ ಮಾಕ್ರಾನ್ ತಡೆ

ಈ ಫಲಿತಾಂಶಗಳ ಪ್ರಕಾರ ಅಧ್ಯಕ್ಷ ಮ್ಯಾಕ್ರಾನ್ ಅವರ ನಡು–ಬಲಪಂಥೀಯ ರಂಗ ಕಳೆದ ಚುನಾವಣೆಗೆ (2022) ಹೋಲಿಸಿದರೆ 86 ಸೀಟು ಕಳೆದುಕೊಂಡು ಜನಾದೇಶ ಕಳೆದುಕೊಂಡಿದೆ.

ಪುಟ 14 ಕ್ಕೆ

ನೋಟುರದ್ದತಿ–ಜಿಎಸ್‌ಟಿ–ಕೊವಿಡ್ ತ್ರಿಶೂಲಕ್ಕೆ 7ವರ್ಷಗಳಲ್ಲಿ 1.6 ಕೋಟಿ ಉದ್ಯೋಗಗಳು ಬಲಿ!

2016ರಲ್ಲಿ ತಂದ ನೋಟುರದ್ದತಿ, 2017ರಲ್ಲಿ ತಂದ ಜಿಎಸ್‌ಟಿ ಮತ್ತು 2020ರಲ್ಲಿ ಎರಗಿದ ಕೊವಿಡ್ ಸಾಂಕ್ರಾಮಿಕ ಪರಿಣಾಮವಾಗಿ ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿದ್ದ 1.6 ಕೋಟಿ ಕಾರ್ಮಿಕರು ಕೆಲಸ ಕಳಕೊಂಡರು, ಇದರಿಂದ ಭಾರತದ ಅರ್ಥವ್ಯವಸ್ಥೆಗೆ 11.3 ಲಕ್ಷ ಕೋಟಿ ರೂ.ಗಳ ಹಾನಿಯುಂಟಾಗಿದೆ ಎಂದು ಕಳೆದ ವಾರ ಪ್ರಕಟವಾದ ಅಧ್ಯಯನವೊಂದು ಹೇಳಿದೆ.

ಈ 11.3 ಲಕ್ಷ ಕೋಟಿ ರೂ. 2022–3ರ ಜಿಡಿಪಿಯ 4.3% ದಷ್ಟಾಗುತ್ತದೆ ಎಂದು ಈ ಅಧ್ಯಯನ ನಡೆಸಿದ ಇಂಡಿಯಾ ರೇಟಿಂಗ್ ಅಂಡ್ ರಿಸರ್ಚ್ ಸಂಘಟನೆ ಹೇಳಿದೆ.(ದಿ ಹಿಂದು, ಜುಲೈ 10)

2015–16 ರಿಂದ 2022–23ರ ನಡುವೆ 65 ಲಕ್ಷ ಅನೌಪಚಾರಿಕ ಉದ್ದಿಮೆಗಳು ಮುಚ್ಚಿ ಹೋದವು. ಇದರ ಪರಿಣಾಮವಾಗಿ 1.6 ಕೋಟಿ ಉದ್ಯೋಗ ನಷ್ಟವಾದುದರಿಂದ 2022–23ರ ಹಣಕಾಸು ವರ್ಷದಲ್ಲೂ ದೇಶದ ಒಟ್ಟು ಅರ್ಥವ್ಯವಸ್ಥೆಯಲ್ಲಿ ಒಟ್ಟು ಮೌಲ್ಯವರ್ಧನೆ 2015–16 ಮಟ್ಟಕ್ಕಿಂತ 1.6% ದಷ್ಟು ಕೆಳಗಿದೆ. ಅಂದರೆ ಮೋದಿಯವರ ಅಚ್ಛೇ ದಿನ್‌ಗಳ ಎರಡು ಆರ್ಥಿಕ 'ಮಿಂಚಿನ ಕ್ರಮಗಳು', ಮತ್ತು ನಂತರ ಕೊವಿಡ್ ಸಾಂಕ್ರಾಮಿಕವನ್ನು ಎದುರಿಸಲೆಂದು ಹೇರಿದ ಲಾಕ್‌ಡೌನಿನಿಂದ ಭಾರತದ ಅರ್ಥವ್ಯವಸ್ಥೆ ಇನ್ನೂ ಸುಧಾರಿಸಿಕೊಂಡಿಲ್ಲ ಎಂಬ ಸಂಗತಿ ಈ ಮೂಲಕ ದೃಢಪಟ್ಟಿದೆ.

ನೋಟುರದ್ದತಿಯನ್ನು ಕಪ್ಪು ಹಣವನ್ನು ಹೊರಗೆಳೆಯುವ ಹೆಸರಲ್ಲಿ ಇದ್ದಕ್ಕಿದ್ದಂತೆ ತರಲಾಯಿತು, 'ಒಂದು ದೇಶ ಒಂದು ತೆರಿಗೆ' ಹೆಸರಲ್ಲಿ ಜಿಎಸ್‌ಟಿಯನ್ನು ಸಾಕಷ್ಟು ಸಿದ್ಧತೆ–ಚರ್ಚೆಯಿಲ್ಲದೆ ತರಾತುರಿಯಿಂದ ಜಾರಿ ಮಾಡಲಾಯಿತು. ಇವನ್ನು ಟೀಕಾಕಾರರು ಆಗಲೇ 'ಮೋದಿನೋಮಿಕ್ಸ್' ಅಥವ 'ಮೋದಿಶಾಸ್ತ್ರ' ಎಂದು ಟೀಕಿಸಿದ್ದರು. ನಂತರ ಕೊವಿಡ್ ಸಾಂಕ್ರಾಮಿಕವನ್ನು ಪರಿಣಾಮಕಾರಿಯಾಗಿ ಎದುರಿಸುವ ಹೆಸರಿನಲ್ಲಿ ಇದ್ದಕ್ಕಿದ್ದಂತೆ ಹೇರಿದ ಲಾಕ್‌ಡೌನ್ ಈ ಎರಡು 'ಮೋದಿಶಾಸ್ತ್ರ'ದ ಕ್ರಮಗಳ ದುಷ್ಪರಿಣಾಮಗಳನ್ನು ಮತ್ತಷ್ಟು ತೀವ್ರಗೊಳಿಸಿತು ಎಂಬ ಸಂಗತಿಯತ್ತ ಆರು ತಿಂಗಳ ಹಿಂದೆ ಪ್ರಕಟವಾದ ಎನ್‌ಎಸ್‌ಒ ಮಾಹಿತಿಗಳು ಗಮನ ಸೆಳೆದಿದ್ದವು. ಈಗ ಈ ಅಧ್ಯಯನ ಅದನ್ನು ಇನ್ನಷ್ಟು ದೃಢಪಡಿಸಿದೆ.

'ಮೋದಿನೋಮಿಕ್ಸ್' ಆಘಾತಗಳು

ಹಣಕಾಸು–ವರ್ಷ2011 ಮತ್ತು ಹಣಕಾಸು–ವರ್ಷ2016ರ ನಡುವೆ ಅನೌಪಚಾರಿಕ ವಲಯದ ವಾರ್ಷಿಕ ಬೆಳವಣಿಗೆ ದರ(ಸಿಎಜಿಆರ್) 7.4% ಇತ್ತು, ನಂತರ ಅದು ಕೇವಲ 0.2% ಕ್ಕೆ ಇಳಿಯಿತು ಎಂದು ಈ ಅಧ್ಯಯನದಲ್ಲಿ ಕಂಡು ಬಂದಿದೆ. ಅಂದರೆ ಈ ಎರಡು ಮೋದಿನೋಮಿಕ್ಸ್ ಕ್ರಮಗಳು ಅರ್ಥವ್ಯವಸ್ಥೆಗೆ ಉಂಟು ಮಾಡಿದ ದುಷ್ಪರಿಣಾಮಗಳ ಆಳ ಎಷ್ಟು, ಕೊವಿಡ್‌ನ ಕಳಪೆ ನಿರ್ವಹಣೆ ಹೇಗೆ ಅದನ್ನು ಮತ್ತಷ್ಟು ಉಲ್ಬಣಗೊಳಿಸಿತು ಎಂಬುದು ಸ್ಪಷ್ಟವಾಗುತ್ತದೆ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.

2023ರ ಆವರ್ತಿತ ಶ್ರಮಶಕ್ತಿ ಸರ್ವೆ(ಪಿಎಲ್‌ಎಫ್‌ಎಸ್)ಯ ಪ್ರಕಾರ ಅನೌಪಚಾರಿಕ ವಲಯ 75%ದಷ್ಟು ಉದ್ಯೋಗ ನೀಡುತ್ತದೆ, ಒಟ್ಟು ರಾಷ್ಟ್ರೀಯ ಉತ್ಪನ್ನದ (ಜಿಡಿಪಿ) 45% ದಷ್ಟನ್ನು ಕೊಡುತ್ತದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಸರ್ವೆಯ ಪ್ರಕಾರ, ಹಣಕಾಸು–ವರ್ಷ2022 ಮತ್ತು ಹಣಕಾಸು–ವರ್ಷ2023ರ ನಡುವೆ ಕೃಷಿಯೇತರ ಉದ್ದಿಮೆಗಳ ಸಂಖ್ಯೆ 5.97 ಕೋಟಿಯಿಂದ 6.5 ಕೋಟಿ ಗೇರಿದರೂ, ಇದು ಕೂಡ 2016ರ 'ಆಘಾತ–ಪೂರ್ವ' ವರ್ಷಕ್ಕಿಂತ ಮೊದಲಿದ್ದ 11.13 ಕೋಟಿಯ ಮಟ್ಟಕ್ಕಿಂತ ಬಹಳ ಕೆಳಗಿದೆ. ತಯಾರಿಕಾ ವಲಯದ ಉದ್ಯೋಗಗಳ ಸಂಖ್ಯೆ ಹಣಕಾಸು–ವರ್ಷ2016ಕ್ಕೆ ಹೋಲಿಸಿದರೆ, ಹಣಕಾಸು–ವರ್ಷ2023ರಲ್ಲಿ 54 ಲಕ್ಷದಷ್ಟು ಕಡಿಮೆಯಾಗಿದೆ, 3.6 ಕೋಟಿಯಿಂದ 3.06 ಕೋಟಿಗೆ ಇಳಿದಿದೆ.



ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್,

2016ರಿಂದ ಆರಂಭವಾದ 'ಮೋದಿನೋಮಿಕ್ಸ್' ಆಘಾತಗಳಿಲ್ಲದಿದ್ದರೆ, 2023ರಲ್ಲಿ ಕೃಷಿಯೇತರ ಉದ್ದಿಮೆಗಳ ಸಂಖ್ಯೆ ಮೇಲೆ ಹೇಳಿದ 6.5 ಕೋಟಿಯ ಬದಲು 7.14 ಕೋಟಿ ಇರುತ್ತಿತ್ತು, ಇವುಗಳಲ್ಲಿ ಉದ್ಯೋಗ ಪಡೆದವರ ಸಂಖ್ಯೆ 10.96 ಕೋಟಿಯ ಬದಲು 12.53 ಕೋಟಿ ಇರಬೇಕಾಗಿತ್ತು ಎಂದು 2011–16ರ ಅವಧಿಯ ವಾಸ್ತವಿಕ ಬೆಳವಣಿಗೆಯ ಆಧಾರದಲ್ಲಿ ಲೆಕ್ಕ ಹಾಕಲಾಗಿದೆ.

ಸಣ್ಣ ಉತ್ಪಾದಕರ ಮೇಲೆ ದಾಳಿ

ಸೇವಾವಲಯದಲ್ಲಿ ಅನೌಪಚಾರಿಕ ವಲಯದ ಪಾಲು ಈ ಅವಧಿಯಲ್ಲಿ 46.9%ದಿಂದ 32.3%ಕ್ಕೆ ಇಳಿದರೆ, ವ್ಯಾಪಾರ ವಲಯದಲ್ಲಿ ಇದು 34.3% ದಿಂದ 21.2%ಕ್ಕೆ ಇಳಿಯಿತು. ತಯಾರಿಕಾ ವಲಯದಲ್ಲಿ 12.5%ದಿಂದ 10.2%ಕ್ಕೆ ಇಳಿಯಿತು.

ಅನೌಪಚಾರಿಕ ವಲಯದ ಉದ್ದಿಮೆ ವಲಯದ ಗಾತ್ರ ಹಣಕಾಸು–ವರ್ಷ2023ರಲ್ಲಿ 15.4 ಲಕ್ಷ ಕೋಟಿ ರೂ.ಗಳು. 2016ರಿಂದ 2023ರ ನಡುವೆ ಇದು ವಾರ್ಷಿಕ 4.3% ದರದಲ್ಲಿ ಬೆಳೆದರೆ, ಅದರ ಮೊದಲ 5 ವರ್ಷಗಳಲ್ಲಿ 2011ರಿಂದ 2016ರ ನಡುವೆ 12.9%ದರದಲ್ಲಿ ಬೆಳೆದಿತ್ತು.

ಮೋದಿ ಸರಕಾರ ಏನೇ ಹೇಳಿಕೊಂಡರೂ, ನೋಟುರದ್ದತಿ ಮತ್ತು ಜಿಎಸ್‌ಟಿಯ ಉದ್ದೇಶ ಅರ್ಥವ್ಯವಸ್ಥೆಯನ್ನು ಹೆಚ್ಚೆಚ್ಚು ಔಪಚಾರಿಕ ಗೊಳಿಸುವ 'ಸದುದ್ದೇಶ'ವನ್ನು ಹೊಂದಿತ್ತು ಎಂದು ಕೆಲವರು ವಾದಿಸುತ್ತಾರೆ. ಆದರೆ ಈ ಎರಡು ಕ್ರಮಗಳ ಮೂಲಕ ಮತ್ತು ಕೊವಿಡ್ ಕಾಲವನ್ನು ಬಳಸಿಕೊಂಡು ವಾಸ್ತವವಾಗಿ ಮೋದಿ ಸರಕಾರ ಅನೌಪಚಾರಿಕ ವಲಯದ ಮೇಲೆ ದಾಳಿ ಮಾಡಿದ್ದು, ಸಣ್ಣ ರೈತರೂ ಸೇರಿದಂತೆ ಸಣ್ಣ ಉತ್ಪಾದಕರ ಮೇಲೆ ನಡೆಸಿರುವ ದಾಳಿ, ಆಮೂಲಕ ಈ ಕ್ಷೇತ್ರವನ್ನು 'ಔಪಚಾರಿಕ'ಗೊಳಿಸಿ ತಮ್ಮ ದೇಶಿ ಆಪ್ತ ಬಂಡವಳಿಗರು ಸೇರಿದಂತೆ ದೇಸಿ–ವಿದೇಶಿ ದೊಡ್ಡ ಬಂಡವಳಿಗರಿಗೆ ತೆರೆದು ಕೊಡಲಿಕ್ಕಾಗಿ ಎಂದು ಕೆಲವು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. **ಮೂರು ರೈತ–ವಿರೋಧಿ ಕಾನೂನುಗಳು, ನಾಲ್ಕು ಕಾರ್ಮಿಕ–ವಿರೋಧಿ ಕಾರ್ಮಿಕ ಸಂಹಿತೆಗಳು ಮತ್ತು ಈಗ ಮೂರು 'ಹೊಸ' 'ದೇಸೀ' ಕ್ರಿಮಿನಲ್ ಕಾನೂನುಗಳು ಇದಕ್ಕೆ ಸಾಕ್ಷಿ ಎನ್ನುವ ವಾದವನ್ನು ಈಗ ಅಲ್ಲಗಳೆಯಲು ಸಾಧ್ಯವಿಲ್ಲ.**

5000 ಕೋಟಿ ರೂ.ಗಳ 'ವಿವಾಹ ಮಹೋತ್ಸವ'!

ಜಿಯೊ ಮತ್ತು ಏರ್‌ಟೆಲ್ ಕಂಪನಿಗಳು ತಮ್ಮ ದರಗಳನ್ನು ತೀವ್ರವಾಗಿ ಹೆಚ್ಚಿಸಿರುವ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಅದರಲ್ಲಿ ಅಂಬಾನಿ ಒಡೆತನದ ಜಿಯೋ ಕಂಪನಿಯಂತೂ ಅತ್ಯಂತ ಕಡಿಮೆ ದರದೊಂದಿಗೆ 2016ರಲ್ಲಿ ಈ ಕ್ಷೇತ್ರವನ್ನು ಪ್ರವೇಶಿಸಿ 8 ವರ್ಷಗಳಲ್ಲಿ 20607 ಕೋಟಿ ರೂ. ಲಾಭ ಗಿಟ್ಟಿಸಿಕೊಂಡ ನಂತರ ತನ್ನ ದರಗಳಲ್ಲಿ 12ರಿಂದ 25ಶೇ. ಏರಿಕೆ ಮಾಡಿ ಇದರಿಂದ ಇನ್ನೂ ಸುಮಾರು 15000 ಕೋಟಿ ರೂ.ಗಳ ಲಾಭಪೇರಿಸಲು ಮುಂದಾಗಿದೆ. ಇದನ್ನು ಯಾವುದೇ ನಿರ್ವಹಣಾ ವೆಚ್ಚದ ಏರಿಕೆಯ ಹೆಸರಲ್ಲಿ ಮಾಡಿಲ್ಲ, ಬದಲಾಗಿ "ಪ್ರತಿ ಬಳಕೆದಾರನಿಂದ ಸರಾಸರಿ ಆದಾಯ' ಎಂಬ ಪರಿಕಲ್ಪನೆಯ ಮೇಲೆ ಮಾಡಲಾಗಿದೆಯಂತೆ!

ಇದರ ಬೆನ್ನಲ್ಲೇ ಜಿಯೊ ಒಡೆಯನ ಕಿರಿಯ ಮಗನ 'ವಿವಾಹ ಮಹೋತ್ಸವ'ದ ವೈಭವೋಪೇತ ಸುದ್ದಿಗಳು ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಇದಕ್ಕೆ 3000–5000 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆಯಂತೆ. ನಿಜ, ಜಿಯೋ ದರ ಏರಿಸಿದ್ದು ಖಂಡಿತ ಈ ಕಾರಣಕ್ಕಾಗಿ ಇರಲಿಕಿಲ್ಲ. ಏಕೆಂದರೆ, ಇದು ಅಂಬಾನಿ ಸಂಪತ್ತಿನ 0.5% ದಷ್ಟೂ ಆಗುವುದಿಲ್ಲವಂತೆ. ಭಾರತೀಯ ತಂದೆ–ತಾಯಿ ತಮ್ಮ ಮಕ್ಕಳ ವಿವಾಹಕ್ಕಾಗಿ ಸಾಮಾನ್ಯವಾಗಿ ತಮ್ಮ ಆದಾಯದ ಶೇಕಡಾವಾರಾಗಿ ಇದಕ್ಕಿಂತ ಎಷ್ಟೋ ಹೆಚ್ಚು ಖರ್ಚು ಮಾಡುತ್ತಾರೆ, ಭಾರೀ ಸಾಲ ಮಾಡಲೂ ಹಿಂಜರಿಯದಿರುವಾಗ ಇದೇನು ದೊಡ್ಡ ಮೊತ್ತ ಅಲ್ಲವೇ ಅಲ್ಲ ಎಂದೊಬ್ಬ ವಿಶ್ಲೇಷಕರು ಟಿಪ್ಪಣಿ ಮಾಡಿದ್ದಾರೆ.

ಗುಜರಾತಿನ ಜಾಮ್‌ನಗರದಲ್ಲಿ ಫೆಬ್ರುವರಿ–ಮಾರ್ಚ್‌ನಲ್ಲಿ ನಡೆದ ವಿವಾಹ–ಪೂರ್ವ ಸಮಾರಂಭಕ್ಕೆ ಬರುವ ಅತಿಥಿಗಳ ಸಾಗಾಣಿಕೆಗೆ 5ದಿನಗಳಲ್ಲಿ 600ಕ್ಕೂ ಹೆಚ್ಚು ಜೆಟ್‌ಗಳ ಸೇವೆಯನ್ನು ಭಾರತೀಯ ವಿಮಾನ ಪಡೆ ಒದಗಿಸಿತು ಎಂಬ ಬಗ್ಗೆ ಚರ್ಚೆ ನಡೆದಿತ್ತು. ಈ ಬಾರಿ ಮೂರು ದಿನಗಳ ವಿವಾಹ ಮಹೋತ್ಸವದ ಅತಿಥಿಗಳನ್ನು ಒಯ್ಯಲು ಮೂರು ಫಾಲ್ಕನ್–2000 ಜೆಟ್‌ಗಳನ್ನು ಬಾಡಿಗೆಗೆ ತಗೊಳ್ಳಲಾಗಿದೆಯಂತೆ. ಅಲ್ಲದೆ ಮುಂಬೈ ಪೋಲಿಸ್ ಈ ವಿವಾಹ ನಡೆಯುವ ಸ್ಥಳದ ಸುತ್ತ ಜುಲೈ 12 ರಿಂದ ಜುಲೈ 15 ರವರೆಗೆ 'ಸಾರಿಗೆ ವ್ಯವಸ್ಥೆ"ಗಳನ್ನು ಅಂದರೆ ಜನಸಾಮಾನ್ಯರಿಗೆ ಸಾರಿಗೆ ನಿರ್ಬಂಧಗಳನ್ನು ಪ್ರಕಟಿಸಿದೆಯಂತೆ.

ಬೇರೆ ಗೃಹಗಳು/ಲೋಕಗಳಿಂದಲೂ ಬರುವ ಅತಿಥಿಗಳಿಗೆ ವ್ಯವಸ್ಥೆಯನ್ನು ಮಹಾರಾಷ್ಟ್ರದ ಡಬಲ್ ಇಂಜಿನ್ ಸರಕಾರ ಮಾಡಿದೆಯೇ ಗೊತ್ತಾಗಿಲ್ಲ!

ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ್, ಫೇಸ್‌ಬುಕ್



ಮೇಧಾ ಪಾಟ್ಕರ್‌ಗೆ ಶಿಕ್ಷೆ–10ಲಕ್ಷ ರೂ.ದಂಡ!

ಪ್ರಖ್ಯಾತ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರಿಗೆ ದಿಲ್ಲಿಯ ಮೆಟ್ರೊಪಾಲಿಟನ್ ಕೋರ್ಟ್ 23 ವರ್ಷಗಳಷ್ಟು ಹಳೆಯ ಮಾನನಷ್ಟ ಆರೋಪದ ಪ್ರಕರಣವೊಂದರಲ್ಲಿ 5 ತಿಂಗಳ ಸೆರೆವಾಸ ಮತ್ತು 10 ಲಕ್ಷ ರೂ.ಗಳ ದಂಡ ವಿಧಿಸಿದೆ ಎಂಬಸುದ್ದಿ ವ್ಯಾಪಕ ಆಕ್ರೋಶವನ್ನು ಉಂಟು ಮಾಡಿದೆ.

ಈ ಕೇಸ್ ಹಾಕಿದವರು ಈಗ ದಿಲ್ಲಿಯ ಉಪರಾಜ್ಯಪಾಲರಾಗಿರುವ ಮತ್ತು ಇತ್ತೀಚೆಗೆ ಮತ್ತೊಬ್ಬ ಹಿರಿಯ ಹೋರಾಟಗಾರ್ತಿ ಅರುಂಧತಿ ರಾಯ್ ವಿರುದ್ಧ 14 ವರ್ಷಗಳಷ್ಟು ಹಳೆಯ ಕೇಸೊಂದರಲ್ಲಿ ವಿಚಾರಣೆ ನಡೆಸಲು ದಿಲ್ಲಿ ಪೊಲಿಸ್‌ಗೆ 'ಮಂಜೂರಾತಿ' ನೀಡಿರುವ ವಿನಯ್ ಕುಮಾರ್ ಸಕ್ಸೇನಾ.

ಗಮನಾರ್ಹ ಸಂಗತಿಯೆಂದರೆ 2001ರಲ್ಲಿ ಈ ಮೊಕದ್ದಮೆ ಹಾಕಿದಾಗ ಸಕ್ಸೇನಾ ಖಾಸಗಿ ಕಂಪನಿ ಜೆಕೆ ಸಿಮೆಂಟ್‌ನ ಮತ್ತು ಅದಾಣಿ ಗುಂಪಿನ ಅಧಿಕಾರಿಯಾಗಿದ್ದರು! ಇವರು ನರ್ಮದಾ ಆಣೆಕಟ್ಟಿನಿಂದ ಪೀಡಿತರಾಗಿರುವ 244 ಹಳ್ಳಿಗಳ ಒಂದು ಲಕ್ಷಕ್ಕೂ ಹೆಚ್ಚು ಆದಿವಾಸಿ, ದಲಿತ ರೈತರು ಮತ್ತು ಕಾರ್ಮಿಕರ ಮರುವಸತಿಯನ್ನು ವಿರೋಧಿಸುತ್ತಿದ್ದವರು.

ಒಂದು ಎನ್‌ಜಿಒ ಮುಖ್ಯಸ್ಥನಾಗಿ ಈತ ಮೇಧಾ ಪಾಟ್ಕರ್ ಮತ್ತು ನರ್ಮದಾ ಬಚಾವೊ ಆಂದೋಲನದ ವಿರುದ್ಧ ಒಂದು ಜಾಹೀರಾತು ಪ್ರಕಟಿಸಿದ್ದರು. ಮತ್ತು ಅವರ ವಿರುದ್ಧ ದುರುದ್ದೇಶಪೂರಿತ ಲೇಖನಗಳು ಪ್ರಕಟವಾಗುವಂತೆ ಮಾಡಿದ್ದರು ಎನ್ನಲಾಗಿದೆ. ಆಕೆಯ ವಿರುದ್ದ ಸುಪ್ರಿಂ ಕೋರ್ಟಿನಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಸಲ್ಲಿಸಿದ್ದರು. ನ್ಯಾಯಾಲಯ 'ಇದು ವೈಯಕ್ತಿಕ ಹಿತಾಸಕ್ತಿ ಅರ್ಜಿ' ಎಂದು ತಳ್ಳಿಹಾಕಿ 5000ರೂ. ದಂಡವನ್ನೂ ವಿಧಿಸಿತ್ತು. ಅಲ್ಲದೆ ಸಾಬರಮತಿ ಆಶ್ರಮದಲ್ಲಿ 2002ರಲ್ಲಿ ಮೇಧಾ ಅವರ ಮೇಲೆ ದೈಹಿಕ ದಾಳಿಯ ಪ್ರಕರಣದಲ್ಲಿ ಈತ ಒಬ್ಬ ಆರೋಪಿಯೂ ಆಗಿದ್ದಾರೆ!

ಸಕ್ಸೆನಾ ಜಾಹೀರಾತಿಗೆ ಮೇಧಾ ಅವರು "ಸಕ್ಸೇನಾ ಗುಜರಾತಿನ ಜನತೆ ಮತ್ತು ಸಂಪನ್ಮೂಲಗಳನ್ನು ಬಿಲ್ ಗೇಟ್‌ರವರ ಮುಂದೆ ಅಡವಿಟ್ಟಿದ್ದಾರೆ" ಎಂದು ಪ್ರತಿಕ್ರಿಯಿಸಿದ್ದರು. ಇದರ ವಿರುದ್ಧ ಸಕ್ಸೇನಾ ಹಾಕಿದ ಮಾನನಷ್ಟ ಮೊಕದ್ದಮೆ ಇದು.

ಕೋರ್ಟಿನ ಈ ತೀರ್ಪಿನ ಬಗ್ಗೆ ಕಳವಳ ಮತ್ತು ಬೇಸರ ವ್ಯಕ್ತಪಡಿಸಿರುವ ಪರಿಸರ, ನಾಗರಿಕ ಹಕ್ಕುಗಳ ಕಾರ್ಯಕರ್ತರು ಇದು ನ್ಯಾಯಕ್ಕೆ ಬಗೆದಿರುವ ಅಪಚಾರ ಎಂದು ವರ್ಣಿಸಿದ್ದಾರೆ.

ಒಬ್ಬ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತೆಯನ್ನು ಸುಳ್ಳು ಸಂಗತಿಗಳ ಆಧಾರದಲ್ಲಿ ಶಿಕ್ಷಿಸಲು ಹೊರಟಿರುವುದು

ಪುಟ 15 ಕ್ಕೆ



ಫ್ರಾನ್ಸಿನಲ್ಲಿ ಉಗ್ರ ಬಲಪಂಥೀಯರ ಫ್ಯಾಸಿಸ್ಟ್ ಸವಾಲಿನ ಸಂದರ್ಭದಲ್ಲಿ ಎಡಪಂಥೀಯರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು 'ನವ ಜನಪ್ರಿಯ ರಂಗ' (ಎನ್.ಎಫ್.ಪಿ.) ರಚಿಸಿರುವುದು ಸ್ವಾಗತಾರ್ಹ ಸಂಕೇತವಾಗಿದೆ. ಫ್ಯಾಸಿಸ್ಟ್ ಶಕ್ತಿಗಳನ್ನು ಅಧಿಕಾರದಿಂದ ದೂರವಿಡುವುದಕ್ಕಾಗಿ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಮತ್ತು ಎನ್.ಎಫ್.ಪಿ.ಯೊಳಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಕೂಡ ಬದಿಗಿಟ್ಟಿರುವುದು ಸಾಕಷ್ಟು ಗಮನಾರ್ಹವಾಗಿದೆ. ಇನ್ನೂ ಹೆಚ್ಚು ಗಮನಾರ್ಹವಾದುದೆಂದರೆ, ನವ-ಉದಾರವಾದವನ್ನು ಸಂಪೂರ್ಣವಾಗಿ ವಿರೋಧಿಸುವ ಮತ್ತು ಒಟ್ಟಾರೆಯಾಗಿ ಹೊಸ ಮತ್ತು ಉತ್ತೇಜನಕಾರಿ ದಾರಿಯನ್ನು ಹಿಡಿಯುವ ಒಂದು ಸರ್ವಸಾಮಾನ್ಯ ಆರ್ಥಿಕ ಕಾರ್ಯಕ್ರಮವನ್ನು ರೂಪಿಸಿರುವುದು, ಮತ್ತು ಅದನ್ನು ಈ ರಂಗದ ಎಲ್ಲಾ ಘಟಕಗಳು ಸಮರ್ಥಿಸಿಕೊಳ್ಳುತ್ತಿರುವುದು ವಿಚಾರಗಳ ಕ್ಷೇತ್ರದಲ್ಲಿ ಕಾಣುತ್ತಿರುವುದು, ವಿಶೇಷವಾಗಿ ಮುಂದುವರೆದ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಇದು ಸಂಭವಿಸುತ್ತಿರುವುದು ಒಂದು ಹೊಸ ಆರಂಭವನ್ನು ಸೂಚಿಸುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್

ಫ್ರಾನ್ಸಿನಲ್ಲಿ ನವ-ಉದಾರವಾದವನ್ನು ಮೀರಿ ಹೋಗುವ 'ಎನ್.ಎಫ್.ಪಿ.'ಯ ಸ್ಪಷ್ಟ ಆರ್ಥಿಕ ಕಾರ್ಯಕ್ರಮ



ಯುರೋಪಿಯನ್ ಪಾರ್ಲಿಮೆಂಟ್ ಚುನಾವಣೆಯಲ್ಲಿ ಉಗ್ರ ಬಲ ಪಂಥೀಯರ ಗಮನಾರ್ಹ ಪ್ರದರ್ಶನದ ಹಿನ್ನೆಲೆಯಲ್ಲಿ ಎಮ್ಯಾನುಯೆಲ್ ಮ್ಯಾಕ್ರೊನ್ ಪ್ರಕಟಿಸಿದ ಫ್ರೆಂಚ್ ಚುನಾವಣೆಗಳಲ್ಲಿ ಮರಿನೆ ಲೆ ಪೆನ್ ರವರ ಫ್ಯಾಸಿಸ್ಟ್ ಸವಾಲನ್ನು ಎದುರಿಸಲು ಫ್ರಾನ್ಸಿನ ನಾಲ್ಕು ಎಡಪಂಥೀಯ ಪಕ್ಷಗಳು, ಅಂದರೆ ಕಮ್ಯುನಿಸ್ಟರು, ಸೋಶಲಿಸ್ಟರು, ಗ್ರೀನ್ಸ್ ಮತ್ತು (ಜೀನ್-ಲುಕ್ ಮೆಲೆಂಛೊನ್ ರವರ) ಫ್ರಾನ್ಸ್ ಅನ್‌ಬೋವ್ಡ್ ಒಟ್ಟು ಸೇರಿ 'ನೋಯೆ ಫ್ರಂಟ್ ಪಾಪ್ಯುಲರೆ-ಎನ್.ಎಫ್.ಪಿ.-ಅಂದರೆ ನವ ಜನಪ್ರಿಯ ರಂಗ-ಇಂಗ್ಲೀಷಿನಲ್ಲಿ ನ್ಯೂ ಪಾಪ್ಯುಲರ್ ಫ್ರಂಟ್) ರಚಿಸಿಕೊಂಡಿದ್ದಾರೆ. ಈ ಬೆಳವಣಿಗೆಯು ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಈ ರಂಗ 1930ರ ದಶಕದ ಫ್ರಾನ್ಸ್‌ನ 'ಪಾಪ್ಯುಲರ್ ಫ್ರಂಟ್' ಅನ್ನು ನೆನಪಿಸುತ್ತದೆ, ಅದು ಯುರೋಪಿನಲ್ಲಿ ಫ್ಯಾಸಿಸಂನ ಉದಯದ, ವಿಶೇಷವಾಗಿ ಜರ್ಮನಿಯನ್ನು ನಾಜಿಗಳು ಸ್ವಾಧೀನಪಡಿಸಿಕೊಂಡ ಹಿನ್ನೆಲೆಯಲ್ಲಿ ರೂಪುಗೊಂಡಿತ್ತು. ಮ್ಯಾಕ್ರೊನ್ ಒಬ್ಬ ನೇರ ನವ-ಉದಾರವಾದಿಯಾಗಿದ್ದು, ಈ ಸಮಯದಲ್ಲಿ ಅವರ ಸಮೀಕ್ಷಾ ರೇಟಿಂಗ್‌ಗಳು ತುಂಬಾ ಕಳಪೆಯಾಗಿವೆ ಮತ್ತು ಉಗ್ರ ಬಲಪಂಥೀಯರು ತಮ್ಮ ಚಾರಿತ್ರ್ಯಕ್ಕೆ ಅನುಗುಣವಾಗಿ ಅಸ್ಪಷ್ಟ ಅರ್ಥಶಾಸ್ತ್ರ ಹೊಂದಿದ್ದು, ಸದ್ಯ ಅರೆಮನಸ್ಸಿನಿಂದ ದೊಡ್ಡ ಬಂಡವಳಿಗರನ್ನು ಬೆಂಬಲಿಸುವವರು (ಮತ್ತು 'ಸೂಕ್ತ ಕ್ಷಣ'ದಲ್ಲಿ ಏಕಸ್ವಾಮ್ಯ ಬಂಡವಾಳದೊಂದಿಗೆ ಬಹಿರಂಗವಾಗಿ ಹೊಂದಾಣಿಕೆ ಮಾಡಿಕೊಳ್ಳುವವರು). ಇಂತಹ ಸಂದರ್ಭದಲ್ಲಿ ಎನ್.ಎಫ್.ಪಿ. ಸ್ಪಷ್ಟ ಆರ್ಥಿಕ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದೆ. ಎನ್.ಎಫ್.ಪಿ. ಸೋಷಲಿಸ್ಟರನ್ನು ಒಳಗೊಳ್ಳುವ ಸಲುವಾಗಿ ಉಕ್ರೇನ್ ಯುದ್ಧದ ವಿಷಯದಲ್ಲಿ ಅಮೆರಿಕದ ನಿಲುವನ್ನು ಅನುಸರಿಸಬೇಕಾಗಿದ್ದರೂ ಮತ್ತು ಮೆಲೆಂಛೋನ್ ದೃಷ್ಟಿಕೋನಗಳಿಗೆ ಸಂಬಂಧಿಸಿದಂತೆ, ಗಾಜಾದಲ್ಲಿನ ನರಮೇಧದ ಬಗ್ಗೆ ತೆಗೆದುಕೊಂಡ ನಿಲುವಿನಲ್ಲಿ ರಾಜಿ ಮಾಡಿಕೊಂಡಿದ್ದರೂ, ಅದು ಅಂಗೀಕರಿಸಿರುವ ಆರ್ಥಿಕ ಕಾರ್ಯಕ್ರಮ ನವ-ಉದಾರವಾದಕ್ಕೆ ಸ್ಪಷ್ಟ ವಿರೋಧವನ್ನು ಹೊಂದಿದೆ.

ಈ ಕಾರ್ಯಕ್ರಮವು ಮಾಸಿಕ ಕನಿಷ್ಠ ವೇತನವನ್ನು ಹೆಚ್ಚಿಸುವುದಾಗಿ ಹೇಳಿದೆ; ಅಗತ್ಯ ಆಹಾರ ಪದಾರ್ಥಗಳು, ವಿದ್ಯುತ್, ಅನಿಲ ಮತ್ತು ಪೆಟ್ರೋಲ್ ಮೇಲೆ ಬೆಲೆ ಮಿತಿಗಳನ್ನು ವಿಧಿಸುವುದಾಗಿ ಹೇಳಿದೆ; ನಿವೃತ್ತಿ ವಯಸ್ಸನ್ನು 64 ಕ್ಕೆ ಹೆಚ್ಚಿಸುವ ಮ್ಯಾಕ್ರೊನ್ ನಿರ್ಧಾರವನ್ನು ರದ್ದುಗೊಳಿಸುವುದಾಗಿ ಹೇಳಿದೆ; ಮತ್ತು ಪರಿಸರ ಪರಿವರ್ತನೆ ಹಾಗೂ ಸಾರ್ವಜನಿಕ ಸೇವೆಗಳಲ್ಲಿ ದೊಡ್ಡ ಹೂಡಿಕೆಗಳನ್ನು ಮಾಡುವುದಾಗಿ ಹೇಳಿದೆ. ಎನ್.ಪಿ.ಎಫ್. ಈ ಕಾರ್ಯಕ್ರಮದ ಅನುಷ್ಠಾನದ ವೆಚ್ಚದ ಲೆಕ್ಕಾಚಾರವನ್ನು ಎಚ್ಚರಿಕೆಯಿಂದ ಮಾಡಿ, ಐರೋಪ್ಯ ಸಮುದಾಯ ವಿಧಿಸಿರುವ ಹಣಕಾಸಿನ ಕೊರತೆ ಮಿತಿಗಳನ್ನು ಮೀರದೆಯೇ, ಕಂಪನಿಗಳ ಸೂಪರ್-ಲಾಭಗಳ ಮೇಲೆ ತೆರಿಗೆ ವಿಧಿಸುವ ಮೂಲಕ, ಮ್ಯಾಕ್ರೊನ್ ರದ್ದು ಮಾಡಿದ ಸಂಪತ್ತಿನ ತೆರಿಗೆಯನ್ನು ಮತ್ತೆ ತರುವ ಮೂಲಕ, ವಿವಿಧ ತೆರಿಗೆ ಲೋಪಗಳನ್ನು ಮುಚ್ಚುವ ಮೂಲಕ ಮತ್ತು ವಾರಸುದಾರಿಕೆಯಲ್ಲಿ ಪಡೆಯಬಹುದಾದ ಮೊತ್ತಕ್ಕೆ ಮಿತಿಯಿರುವಂತೆ ಖಚಿತಪಡಿಸಿಕೊಳ್ಳುವ ಮೂಲಕ ಮತ್ತು ಈ ಮಿತಿಯನ್ನು ಮೀರಿದ್ದನ್ನು ಪ್ರಭುತ್ವವು ಹೆಚ್ಚುವರಿಯಾಗಿ ವಹಿಸಿಕೊಳ್ಳುವ ಮೂಲಕ ತನ್ನ ಕಾರ್ಯಕ್ರಮಕ್ಕೆ ಹಣಕಾಸನ್ನು ಒದಗಿಸುವ ಪ್ರಸ್ತಾವನೆಯನ್ನು ಮುಂದಿಟ್ಟಿದೆ

ಇದೆಲ್ಲವೂ ಈ ಹಲವು ವರ್ಷಗಳಿಂದ ನವ-ಉದಾರವಾದವು ಏನನ್ನು ಬೋಧಿಸುತ್ತ ಬಂದಿದೆಯೋ ಮತ್ತು ಫ್ರಾನ್ಸ್‌ನಲ್ಲಿ ಮಾತ್ರವಲ್ಲದೆ ಭಾರತ ಸೇರಿದಂತೆ ಪ್ರಪಂಚದಾದ್ಯಂತ ಮುಖ್ಯವಾಹಿನಿಯ ಮಾಧ್ಯಮಗಳು ಪರಮ ಸತ್ಯವೆಂದು ಪ್ರಚಾರ ಮಾಡುತ್ತ ಬಂದಿವೆಯೋ ಅವೆಲ್ಲಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿವೆ. ದೇಶಗಳು ಕಾರ್ಪೊರೇಟ್ ತೆರಿಗೆ ದರವನ್ನು ಕನಿಷ್ಠ 25 ಶೇ.ಕ್ಕೆ ಏರಿಸುವ ಒಪ್ಪಂದಕ್ಕೆ ಬರಬೇಕು, ಆ ಮೂಲಕ ವಿಭಿನ್ನ ತೆರಿಗೆ ದರಗಳ ಪ್ರಯೋಜನವನ್ನು ಪಡೆಯಲು ಬಂಡವಾಳವು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಚಲಿಸುವುದನ್ನು ತಡೆಯಬಹುದು ಎಂಬ ಸಲಹೆಯನ್ನು ನೀಡಿದಾಗ, ಜಾಗತೀಕರಣಗೊಂಡಿರುವ ಹಣಕಾಸಿಗೆ ಅಡಿಯಾಳಾಗಿರುವ ಹೆಚ್ಚಿನ ಸರ್ಕಾರಗಳು ಹಿಂಜರಿದವು. ಅಂತಿಮವಾಗಿ 15 ಶೇ. ತೆರಿಗೆ ದರಕ್ಕೆ ಒಪ್ಪಂದ ಏರ್ಪಟ್ಟಿತು, ಇದು ಹೆಚ್ಚಿನ ದೇಶಗಳಲ್ಲಿ ಚಾಲ್ತಿಯಲ್ಲಿರುವ ಕಾರ್ಪೊರೇಟ್ ತೆರಿಗೆ ದರಕ್ಕಿಂತ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಸೂಪರ್-ಲಾಭಗಳ ತೆರಿಗೆ ವಿಧಿಸುವ ಎನ್.ಎಫ್.ಪಿ.ನ ಕಾರ್ಯಕ್ರಮದಲ್ಲಿನ ಪ್ರಸ್ತಾಪವು ವಿಶೇಷ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ನವ-ಉದಾರವಾದದ ಬುರುಡೆಗಳಿಗೆ ಧಿಕ್ಕಾರ

ಅಂತೆಯೇ, ಸಂಪತ್ತು ತೆರಿಗೆಯನ್ನು ಜಾರಿಗೆ ತರುವುದು ಕಷ್ಟ ಮತ್ತು ಅದರಿಂದ ಬರುವ ಆದಾಯವು ಅದನ್ನು ನಿರ್ವಹಿಸಲು ತಗಲುವ ವೆಚ್ಚಕ್ಕಿಂತ ಕಡಿಮೆ ಎಂಬ ಸಬೂಬು ಹೇಳಿ, ಅದನ್ನು ರದ್ದುಗೊಳಿಸುವ ಪ್ರವೃತ್ತಿ ಸಾಮಾನ್ಯವಾಗಿ ಬಿಟ್ಟಿದೆ. ಭಾರತದಲ್ಲಿ ಕೂಡ ಈ ಸಬೂಬಿನ ಮೇಲೆ ಹಿಂದೆ ಜಾರಿಯಲ್ಲಿದ್ದ ಸಂಪತ್ತು ತೆರಿಗೆಯನ್ನು ರದ್ದುಪಡಿಸಲಾಯಿತು. ಸಂಪತ್ತು ತೆರಿಗೆಯನ್ನು ನಿರುತ್ಸಾಹದಿಂದಲೇ ಜಾರಿಗೊಳಿಸಲಾಯಿತು ಮತ್ತು ಅದರ ಪರಿಣಾಮವಾಗಿ ಅದರಿಂದ ಪಡೆದ ಅಲ್ಪ ಆದಾಯವನ್ನು ನಂತರ ಅದನ್ನು ರದ್ದುಗೊಳಿಸುವ ನೆಪವಾಗಿ ಬಳಸಲಾಯಿತು. ಎನ್.ಎಫ್.ಪಿ.ನ ಕಾರ್ಯಕ್ರಮವು ಇದು ಕೇವಲ ಬುರುಡೆ ಎನ್ನುತ್ತ ಸಂಪತ್ತು ತೆರಿಗೆಯನ್ನು ಮತ್ತೆ ಜಾರಿಗೆ ತರುವುದಾಗಿ ಹೇಳಿದೆ.

ನಿಜ, ಇತರ ರಾಜಕೀಯ ಸಂಘಟನೆಗಳೂ ಇತ್ತೀಚಿನ ವರ್ಷಗಳಲ್ಲಿ ಗಮನಾರ್ಹ ಆದಾಯದ ಮೂಲವಾಗಿ ಸಂಪತ್ತಿನ ತೆರಿಗೆಯನ್ನು ಮತ್ತೆ ವಿಧಿಸಬೇಕೆಂದು ಸೂಚಿಸಿವೆ. ಕಳೆದ ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷೀಯ ಚುನಾವಣೆಗಳಲ್ಲಿ, ಡೆಮಾಕ್ರಟಿಕ್ ಪಕ್ಷದ ಇಬ್ಬರು ಸ್ಪರ್ಧಿಗಳಾದ ಬರ್ನಿ ಸ್ಯಾಂಡರ್ಸ್ ಮತ್ತು ಎಲಿಜಬೆತ್ ವಾರೆನ್ ಶ್ರೇಣೀಕೃತ ಸಂಪತ್ತಿನ ತೆರಿಗೆಯ ಪ್ರಸ್ತಾಪಗಳನ್ನು ಮುಂದಿಟ್ಟಿದ್ದರು. ಆದರೆ ಅಮೆರಿಕಾದ ರಾಜಕೀಯ ವ್ಯವಸ್ಥೆಯು ಡೊನಾಲ್ಡ್ ಟ್ರಂಪ್ ರನ್ನು ಎದುರಿಸಲು ಈ ಇಬ್ಬರಲ್ಲಿ ಯಾರೂ ನೇಮಕಗೊಳ್ಳದಂತೆ ತಡೆಯಿತು, ಇದರಿಂದಾಗಿ ಅವರ ಪ್ರಸ್ತಾಪಗಳು ಪ್ರಾಥಮಿಕ ಹಂತದಲ್ಲಿಯೇ ಉಳಿದುಕೊಂಡವು. ಇತ್ತೀಚೆಗಷ್ಟೇ, 'ವಿಶ್ವ ಅಸಮಾನತೆ ದತ್ತಾಂಶ ಭಂಡಾರ'ಕ್ಕೆ ಸಂಬಂಧಿಸಿದ ಫ್ರೆಂಚ್ ಅರ್ಥಶಾಸ್ತ್ರಜ್ಞ ಥಾಮಸ್ ಪಿಕೆಟ್ಟಿ ಅವರ ಸುತ್ತಲಿನ ತಂಡವು ಸಂಪತ್ತಿನ ಅಸಮಾನತೆಯ ಬೃಹತ್ ಹೆಚ್ಚಳದ ಹಿನ್ನೆಲೆಯಲ್ಲಿ ಭಾರತವು ಅತಿ ಶ್ರೀಮಂತರ ಮೇಲೆ ಒಂದು ಸಂಪತ್ತಿನ ತೆರಿಗೆಯನ್ನು ಮತ್ತೆ ವಿಧಿಸಬೇಕೆಂಬ ಪ್ರಸ್ತಾಪವನ್ನು ಮುಂದಿಟ್ಟಿತು. ಇದು ದೇಶದಲ್ಲಿ ಎಡಪಂಥೀಯರು ದೀರ್ಘಕಾಲದಿಂದ ಮುಂದಿಡುತ್ತ ಬಂದಿರುವುದಕ್ಕೆ ದನಿಗೂಡಿಸಿರುವ ಪ್ರಸ್ತಾಪ.

ಅಂತೆಯೇ ಎನ್.ಎಫ್.ಪಿ. ಪ್ರಸ್ತಾಪಿಸಿದ ವಾರಸುದಾರಿಕೆ ತೆರಿಗೆಯನ್ನು ವಿಧಿಸುವುದನ್ನು ಮತ್ತೆ ಪರಿಶೀಲಿಸುವುದು ಯಾವುದೇ ಪ್ರಜಾಪ್ರಭುತ್ವ ಸಮಾಜದಲ್ಲಿ ಅತ್ಯಗತ್ಯವಾಗಿರುತ್ತದೆ. ವಾಸ್ತವವಾಗಿ ಅಂತಹ ತೆರಿಗೆಯು ಬಂಡವಾಳಶಾಹಿಯ ತತ್ವಕ್ಕೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ, ಏಕೆಂದರೆ ಆ ತತ್ವ ಲಾಭವನ್ನು ಬಂಡವಾಳಶಾಹಿಗಳು ಹೊಂದಿರುವ ಕೆಲವು ವಿಶೇಷ ಗುಣಗಳಿಗೆ ಪ್ರತಿಫಲ ಎಂದೇ ಸಮರ್ಥಿಸುತ್ತದೆಯೇ ಹೊರತು ಮಕ್ಕಳಿಗೆ ಪಿತ್ರಾರ್ಜಿತವಾಗಿ ಬರುವಂತದ್ದು ಎಂದೇನೂ ಹೇಳುವುದಿಲ್ಲ. ಅದಲ್ಲದೆ, ಪಿತ್ರಾರ್ಜಿತ ತೆರಿಗೆಗೆ ಅದರದ್ದೇ ಆದ ಸಮರ್ಥನೆಯಿದ್ದರೂ, ಅದು ಸಂಪತ್ತು ತೆರಿಗೆಗೆ ಅಗತ್ಯವಾದ ಪೂರಕ ತೆರಿಗೆಯೂ ಆಗಿದೆ. ಇತ್ತೀಚೆಗಷ್ಟೇ ಕಾಂಗ್ರೆಸ್‌ನ ಪ್ರಮುಖ ಸದಸ್ಯರೊಬ್ಬರು (ಎಡಪಂಥೀಯರು ಈ ವಿಚಾರವನ್ನು ಬಹಳ ಸಮಯದಿಂದ ಪ್ರಸ್ತಾಪಿಸುತ್ತಿದ್ದಾರೆ) ವಾರಸುದಾರಿಕೆ ತೆರಿಗೆಯನ್ನು ಸೂಚಿಸಿದಾಗ, ಪ್ರಧಾನಿ ನರೇಂದ್ರ ಮೋದಿ ಅವರಷ್ಟೇ ಅಲ್ಲ, ಇಡೀ ಭಾರತೀಯ ಮಾಧ್ಯಮಗಳು ಅವರ ಮೇಲೆ ಟನ್‌ಗಟ್ಟಲೆ ಇಟ್ಟಿಗೆಗಳ ರೀತಿಯಲ್ಲಿ ಮುಗಿಬಿದ್ದಿದ್ದವು. ಪ್ರಧಾನ ಮಂತ್ರಿಗಳು ಕಾಂಗ್ರೆಸ್ ಹಿಂದೂ ಮಹಿಳೆಯರ ಆಭರಣಗಳನ್ನು ಕಸಿದುಕೊಂಡು ಮುಸ್ಲಿಮರಿಗೆ ಹಸ್ತಾಂತರಿಸಲು ಹೊರಟಿದೆ ಎಂದು ಹೇಳುವ ಮೂಲಕ ಆ ಪ್ರಸ್ತಾಪಕ್ಕೆ ಸಂಪೂರ್ಣವಾಗಿ ಕುಟಿಲವಾದ ಕೋಮುವಾದಿ-ಫ್ಯಾಸಿಸ್ಟ್ ತಿರುವು ನೀಡಿದರು! ವಾಸ್ತವವಾಗಿ ಎನ್.ಎಫ್.ಪಿ.ಯ ಸಲಹೆಯು ವಾರಸುದಾರಿಕೆಯ ತೆರಿಗೆಗೆ ಮಾತ್ರವಲ್ಲ, ವಾರಸುದಾರಿಕೆಯ ಮೇಲೆ ಮಿತಿಗೂ ಸಂಬಂಧಿಸಿದೆ, ಇದು ಈ ಸಂದರ್ಭದಲ್ಲಿ ವಿಶೇಷ ಮಹತ್ವವನ್ನು ಪಡೆದಿದೆ.

ಸಾರ್ವಜನಿಕ ಸೇವೆಗಳ ಮೇಲಿನ ವೆಚ್ಚವನ್ನು ಹೆಚ್ಚಿಸುವ ಪ್ರಸ್ತಾಪದ ವಿಷಯದಲ್ಲೂ ಇದು ಸತ್ಯ. ನವ-ಉದಾರವಾದಿ ಬಂಡವಾಳಶಾಹಿಯ ಆಗ್ರಹಗಳಿಗೆ ಅನುಗುಣವಾಗಿ ಶಿಕ್ಷಣ ಮತ್ತು ಆರೋಗ್ಯಪಾಲನೆಯಂತಹ ಸೇವೆಗಳನ್ನು ಖಾಸಗೀಕರಣಗೊಳಿಸುವುದರ ದುಷ್ಪರಿಣಾಮವನ್ನು ನಮ್ಮದೇ ದೇಶದಲ್ಲಿ ನೋಡಿದ್ದೇವೆ, ಅವುಗಳು ವಿಪರೀತವಾಗಿ ದುಬಾರಿಗೊಂಡಿವೆ. ವಾಸ್ತವವಾಗಿ, ರೈತರು ಮರುಪಾವತಿ ಮಾಡಲು ಸಾಧ್ಯವಾಗದ ಸಾಲಗಳಿಗೆ ಸಿಲುಕಲು, ತಮ್ಮ ಜೀವವನ್ನೇ ಕೊಡುವಂತಾಗಿರುವ ಕಾರಣಗಳಲ್ಲಿ ಒಂದಾಗಿದೆ. ಇದ್ದಕ್ಕಿದ್ದಂತೆ ಎರಗುವ ಆರೋಗ್ಯ ವೆಚ್ಚಗಳಿಂದಾಗಿ ಇದು ಉದ್ಭವಿಸುತ್ತದೆ.

ಬೆಲೆ ಮಿತಿಗಳನ್ನು ವಿಧಿಸುವ ಗಮನಾರ್ಹ ವಿಚಾರ

ಅದೇ ರೀತಿಯಲ್ಲಿ, ಹಣದುಬ್ಬರದ ದುಷ್ಪ್ರಭಾವದಿಂದ ಜನರನ್ನು ರಕ್ಷಿಸುವ ಸಾಧನವಾಗಿ ಬೆಲೆ ಮಿತಿಗಳನ್ನು ಹೊಂದುವ ಪ್ರಸ್ತಾಪವು ವಿತ್ತೀಯ ಮತ್ತು ಹಣಕಾಸಿನ ನೀತಿಯ ಉಪಕರಣವಾಗಿ ಅದನ್ನು ಬಳಸುವ ಬಂಡವಾಳಶಾಹಿ ಮೂಢನಂಬಿಕೆಯನ್ನು ಸಂಪೂರ್ಣವಾಗಿ ಕಳಚಿ ಹಾಕುತ್ತದೆ. ಈ ನೀತಿ ಉಪಕರಣಗಳು ಅರ್ಥವ್ಯವಸ್ಥೆಯಲ್ಲಿ ಪುಟ 14 ಕ್ಕೆ

ಫ್ರಾನ್ಸಿನಲ್ಲಿ ನವ–ಉದಾರವಾದ.......... ಪುಟ 13 ರಿಂದ

ಚಟುವಟಿಕೆಯ ಮಟ್ಟವನ್ನು ಮತ್ತು ಅದರಿಂದಾಗಿ ಉದ್ಯೋಗವನ್ನು ಇಳಿಸಿಬಿಡುತ್ತವೆ. ವಾಸ್ತವವಾಗಿ, ಬಂಡವಾಳಶಾಹಿಯ ಅಡಿಯಲ್ಲಿ ಹಣದುಬ್ಬರಕ್ಕೆ ಏಕೈಕ ಪ್ರತ್ಯೌಷಧಿಯೆಂದರೆ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗದ ಸೃಷ್ಟಿ. ಹಣದುಬ್ಬರವನ್ನು ಎದುರಿಸುವ ಸಾಧನವಾಗಿ ಹೆಚ್ಚಿನ ನಿರುದ್ಯೋಗಕ್ಕಿಂತ ಬೆಲೆ ನಿಯಂತ್ರಣದ ಪ್ರಸ್ತಾಪವನ್ನು ಬಹಳ ಸಮಯದಿಂದ ಭಾರತದಲ್ಲಿ ಎಡಪಕ್ಷಗಳು ಮುಂದಿಡುತ್ತಿದ್ದು, ಈಗ ಮುಂದುವರೆದ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿನ ಒಂದು ಪ್ರಮುಖ ರಾಜಕೀಯ ರಚನೆಯ ಕಾರ್ಯಕ್ರಮದಲ್ಲಿ ಅದು ಸ್ಥಾನ ಪಡೆದಿದೆ.

ಜಾಗತೀಕರಣಗೊಂಡ ಬಂಡವಾಳದ ವಕ್ತಾರರು ದಶಕಗಳಿಂದ ಕಚಡಾ ವಾದಗಳನ್ನು ಹರಡುತ್ತಿರುವ ಮತ್ತು ಇದಕ್ಕೆ ಪರ್ಯಾಯವಿಲ್ಲ ಎಂದು ಹೇಳುತ್ತ ಬರುತ್ತಿರುವ ವಾತಾವರಣದಲ್ಲಿ ಎನ್.ಎಫ್.ಪಿ. ಕಾರ್ಯಕ್ರಮವು ಒಂದು ತಾಜಾ ಉಸಿರನ್ನು ತುಂಬಿದೆ. ಫ್ರೆಂಚ್ ಬೂರ್ಜ್ವಾ ಪತ್ರಿಕೆಗಳು ಮತ್ತು ನವ–ಉದಾರವಾದದ ಅನುಯಾಯಿಗಳಿಂದ ಹಿಡಿದು ಉಗ್ರ ಬಲಪಂಥೀಯರ ವರೆಗೆ ಹಲವಾರು ರಾಜಕಾರಣಿಗಳು ಎನ್.ಎಫ್.ಪಿ. ಆರ್ಥಿಕ ಕಾರ್ಯಕ್ರಮದ ಮೇಲೆ ಮುಗಿಬಿದ್ದಿರುವುದರಲ್ಲಿ, ಇದನ್ನು ಜಾರಿಗೊಳಿಸಿದರೆ ಫ್ರೆಂಚ್ ಅರ್ಥವ್ಯವಸ್ಥೆಯು ಮುಳುಗಿ ಹೋಗುತ್ತದೆ ಎಂದು ಜನರನ್ನು ಹೆದರಿಸುತ್ತಿರುವಲ್ಲಿ ಆಶ್ಚರ್ಯವೇನಿಲ್ಲ. ಆದರೂ ಇದರಿಂದ ಯಾವುದೇ ಅಭಿಪ್ರಾಯ ಸಂಗ್ರಹಣೆಯಲ್ಲಿ ಎನ್.ಎಫ್.ಪಿ. ಹಿಂದೆ ಬೀಳುವಂತಾಗಲಿಲ್ಲ. ಎರಡನೇ ಸುತ್ತಿನ ಮತದಾನದ ಸಂದರ್ಭದಲ್ಲೂ ಉಗ್ರ ಬಲಪಂಥೀಯರಿಗೆ 31 ಶೇ. ದಷ್ಟು ಬೆಂಬಲವಿದೆಯೆಂದೂ, ಅದಕ್ಕೆ ಪ್ರತಿಯಾಗಿ ಎನ್.ಎಫ್.ಪಿ. ಪಾಲು 26 ರಿಂದ 28 ಶೇ.ದಷ್ಟು ಮತ್ತು ಮ್ಯಾಕ್ರೊನ್ ಪಕ್ಷ 20 ಶೇ. ದಷ್ಟು ಬೆಂಬಲ ಪಡೆದಿದೆ ಎಂದು ವರದಿಯಾಗುತ್ತಿತ್ತು.

ಹೊಸ ಆರಂಭದ ಸೂಚನೆ

ಫ್ರಾನ್ಸಿನ ಎಡಪಂಥೀಯರು ಫ್ಯಾಸಿಸಂ ಅನ್ನು ಸೋಲಿಸಲು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗೂಡುವಲ್ಲಿ ಯಶಸ್ವಿಯಾಗಿರುವುದು ಸ್ವಾಗತಾರ್ಹ ಸಂಕೇತವಾಗಿದೆ. ಸೋಶಿಯಲ್ ಡೆಮಾಕ್ರಟಿಕ್ ನಾಯಕ ಗ್ಲುಕ್ಸ್ ಮನ್, ಜೀನ್–ಲುಕ್ ಮೆಲೆಂಚೊನ್ ಬಗ್ಗೆ ತನ್ನ ಬಹುಕಾಲದ ದ್ವೇಷವನ್ನು ಬದಿಗಿಟ್ಟು, ಎನ್.ಎಫ್.ಪಿ. ಗೆ ಬೆಂಬಲದ ಭರವಸೆಯನ್ನು ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ಮೆಲೆಂಚೊನ್, ಎನ್.ಎಫ್.ಪಿ. ವಿಜಯಶಾಲಿಯಾದರೆ, ಮೈತ್ರಿ ಪಾಲುದಾರರು ಆಕ್ಷೇಪಿಸಿದರೆ ಪ್ರಧಾನ ಮಂತ್ರಿ ಹುದ್ದೆಯಿಂದ ದೂರ ನಿಲ್ಲುವುದಾಗಿ ಭರವಸೆ ನೀಡಿದ್ದಾರೆ. ಉಗ್ರ ಬಲಪಂಥೀಯರನ್ನು ಅಧಿಕಾರದಿಂದ ದೂರವಿಡುವುದಕ್ಕಾಗಿ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಮತ್ತು ಎನ್.ಎಫ್.ಪಿ.ನೊಳಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಕೂಡ ಬದಿಗಿಟ್ಟಿರುವುದು ಸಾಕಷ್ಟು ಗಮನಾರ್ಹವಾಗಿದೆ.

ನಮ್ಮ ದೃಷ್ಟಿಯಿಂದ, ಇನ್ನೂ ಹೆಚ್ಚು ಗಮನಾರ್ಹವಾದುದೆಂದರೆ, ನವ–ಉದಾರವಾದವನ್ನು ವಿರೋಧಿಸುವ ಮತ್ತು ಒಟ್ಟಾರೆಯಾಗಿ ಹೊಸ ಮತ್ತು ಉತ್ತೇಜನಕಾರಿ ದಾರಿಯನ್ನು ಹಿಡಿಯುವ ಒಂದು ಸರ್ವಸಾಮಾನ್ಯ ಆರ್ಥಿಕ ಕಾರ್ಯಕ್ರಮವನ್ನು ರೂಪಿಸಿರುವುದು, ಮತ್ತು ಅದನ್ನು ಈ ರಂಗದ ಎಲ್ಲಾ ಘಟಕಗಳು ಸಮರ್ಥಿಸಿಕೊಳ್ಳುತ್ತಿರುವುದು. ಇದು ವಿಚಾರಗಳ ಕ್ಷೇತ್ರದಲ್ಲಿ, ವಿಶೇಷವಾಗಿ ಇದು ಮುಂದುವರೆದ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಸಂಭವಿಸುತ್ತಿರುವುದು ಒಂದು ಹೊಸ ಆರಂಭವನ್ನು ಸೂಚಿಸುತ್ತದೆ.

(ಇದು, ಅಂತಿಮ ಫಲಿತಾಂಶ ಪ್ರಕಟವಾಗುವ ಮೊದಲು, ಇನ್ನೂ ಉಗ್ರ ಬಲಪಂಥೀಯರು ಎಡಪಂಥೀಯರಿಗಿಂತ ಮುಂದಿದ್ದಾರೆ ಎಂದು ಅಭಿಪ್ರಾಯ ಸಂಗ್ರಹಗಳು ಹೇಳುತ್ತಿದ್ದ ಸಮಯದಲ್ಲಿ ಬರೆದಿರುವ ಲೇಖನ ಎಂಬುದನ್ನು ಗಮನಿಸಬೇಕು)

ಅನು: ಕೆ.ವಿ.

ಫ್ರಾನ್ಸ್: 2ನೇ ಸುತ್ತಿನಲ್ಲಿ ನವ–ಫ್ಯಾಸಿಸ್ಟರಿಗೆ ಸೋಲು... ಪುಟ 11 ರಿಂದ

ಮೊದಲ ಸುತ್ತಿನಲ್ಲಿ ಶೇ.4.5 ಮತ್ತು ಎರಡನೇ ಸುತ್ತಿನಲ್ಲಿ ಶೇ.14 ಮತ ಕಳೆದುಕೊಂಡಿದ್ದು ಇದನ್ನು ಸಿದ್ಧ ಪಡಿಸುತ್ತವೆ. ಮೊದಲ ಸುತ್ತಿನಲ್ಲಿ ಶೇ. 21.3 ಮತ ಗಳಿಸಿದ ಮ್ಯಾಕ್ರಾನ್ ಪಕ್ಷ ಎರಡನೇ ಸುತ್ತಿನಲ್ಲಿ ಎಡ ಒಕ್ಕೂಟ (3ನೇ ಪಕ್ಷವಾಗಿದ್ದಲ್ಲಿ ಪೂರ್ಣವಾಗಿ ಹಿಂತೆಗೆದುಕೊಂಡದ್ದರಿಂದ, ಮತ್ತು ಮ್ಯಾಕ್ರಾನ್ ಕೂಟ ಭಾಗಶಃ ಮಾತ್ರ ಹಿಂತೆಗೆದುಕೊಂಡದ್ದರಿಂದ) ಶೇ.24.5 ಮತ ಗಳಿಸಿತು. ಅದೇ ಕಾರಣಕ್ಕೆ ಎಡ ಒಕ್ಕೂಟ 49 ಸೀಟು ಹೆಚ್ಚಳ ಗಳಿಸಿದರೂ ಮೊದಲ ಸುತ್ತಿನಲ್ಲಿ ಶೇ.28.2 ಮತ (ಶೇ. 2.6 ಹೆಚ್ಚಳ) ಗಳಿಸಿದರೂ, ಎರಡನೇ ಸುತ್ತಿನಲ್ಲಿ ಶೇ. 25.8 (ಶೇ.5.8 ಕಡಿತ) ಮತ ಗಳಿಸಿತು.

ಎಡ ಒಕ್ಕೂಟ ಮತ್ತು ಮ್ಯಾಕ್ರಾನ್ ಕೂಟ ಒಟ್ಟಾಗಿ ಮೊದಲ ಮತ್ತು ಎರಡನೇ ಸುತ್ತಿನಲ್ಲಿ ಅನುಕ್ರಮವಾಗಿ ಶೇ. 49.5 ಮತ್ತು ಶೇ. 50.3 ಮತಗಳಿಕೆ ಹಾಗೂ 339 ಸೀಟು ಗಳಿಕೆ ಮೂಲಕ ಮತಗಳಿಕೆ/ಸೀಟು ಎರಡರಲ್ಲೂ ನಿಚ್ಚಳ ಬಹುಮತ ಗಳಿಸಿದೆ. ಆದರೆ ಅದೇ ಸಮಯದಲ್ಲಿ ಹಿಂದೆ ಬಹುಮತ ಹೊಂದಿದ್ದ ಮ್ಯಾಕ್ರಾನ್ ರಂಗವನ್ನು ಮೊದಲ ಸುತ್ತಿನಲ್ಲಿ ಮೂರನೇ ಸ್ತಾನಕ್ಕೆ ಮತ್ತು ಎರಡನೇ ಸುತ್ತಿನಲ್ಲಿ ಎರಡನೇ ಸ್ಥಾನಕ್ಕೆ ನೂಕುವ ಮೂಲಕ ಅದರ ನೀತಿಗಳನ್ನು ತಿರಸ್ಕರಿಸಿದ್ದಾರೆ. ಅದು ಮತಗಳಿಕೆ/ಸೀಟು ಗಳಿಕೆಯಲ್ಲಿ ಎರಡನೇ ಸ್ಥಾನ ಬಂದಿರುವುದು ಎಡ ಒಕ್ಕೂಟ ಅದರ ಜತೆ ಪೂರ್ಣ ಸೀಟು ಹೊಂದಾಣಿಕೆ ಮಾಡಿದ್ದರಿಂದ ಮಾತ್ರವೆಂಬುದು ಸ್ಪಷ್ಟ.

ಹಾಗಾಗಿ ಎಡ ಒಕ್ಕೂಟದ ನಾಯಕತ್ವದಲ್ಲಿ ಸರಕಾರ ರಚಿಸಲು ಜನಾದೇಶವಿದೆ ಎಂದು ಅದರ ನಾಯಕರು ಒತ್ತಾಯಿಸಿದ್ದಾರೆ. ಎಡ ಒಕ್ಕೂಟ ಪಾರ್ಲಿಮೆಂಟರಿ ರಂಗ ತನ್ನ ನಾಯಕನನ್ನು ಆರಿಸಲಿದ್ದು ಅವರನ್ನು ಪ್ರಧಾನಿಯಾಗಿ ನೇಮಿಸಿ ಸರಕಾರ ರಚನೆಗೆ ಅಧ್ಯಕ್ಷ ಮ್ಯಾಕ್ರಾನ್ ರನ್ನು ಒತ್ತಾಯಿಸಿದ್ದಾರೆ. ಮ್ಯಾಕ್ರಾನ್ ರಂಗಕ್ಕೆ ಜನಾದೇಶವಿಲ್ಲ ಎಂದು ಮನಗಂಡಿರುವ ಪ್ರಧಾನಿ ಅಟ್ಟಲ್ ರಾಜೀನಾಮೆ ಕೊಟ್ಟಿದ್ದಾರೆ. ಆದರೂ ಮ್ಯಾಕ್ರಾನ್ ಅವರು ನಾಟೋ 75 ನೇ ವಾರ್ಷಿಕೋತ್ಸವ ಶೃಂಗಸಭೆಗೆ ಯು.ಎಸ್. ತೆರಳುವಾಗ ಪ್ರಧಾನಿಗೆ ಸದ್ಯಕ್ಕೆ ತಮ್ಮ ಸ್ಥಾನದಲ್ಲಿ ಮುಂದುವರೆಯುವಂತೆ ಕೇಳಿದ್ದಾರೆ. ಎಡ ಮತ್ತು ಕಾರ್ಮಿಕ ವರ್ಗದ ಬೆಂಬಲಿತ ಪಕ್ಷಗಳನ್ನು ಅಧಿಕಾರ ವಹಿಸಿಕೊಳ್ಳದಂತೆ ತಡೆಯಲು ಮ್ಯಾಕ್ರಾನ್ ಇನ್ನೂ ಪ್ರಯತ್ನ ಪಡುತ್ತಿದ್ದಾರೆ ಎಂಬುದು ಸ್ಪಷ್ಟ.

ದೊಡ್ಡ ಉದ್ಯಮಿಗಳ ಮತ್ತು ದೈತ್ಯ ಮಾಧ್ಯಮಗಳ ಬೆಂಬಲದೊಂದಿಗೆ, ಅವರು ಚುನಾವಣೆಯಲ್ಲಿ ಮಾಡಿದಂತೆ ಎಡಪಂಥೀಯರ ವಿರುದ್ಧ ಭಯವನ್ನು ಹುಟ್ಟುಹಾಕುವುದನ್ನು ಮುಂದುವರೆಸಿದ್ದಾರೆ. ಅವರು ಎಡ ಒಕ್ಕೂಟವನ್ನು ಅಧಿಕಾರದಿಂದ ಹೊರಗಿಡಲು ಒಂದು ಮಾರ್ಗವನ್ನು ಹುಡುಕುತ್ತಿದ್ದಾರೆಂದು ಹೇಳಲಾಗಿದೆ. ಫ್ರೆಂಚ್ ಸಂವಿಧಾನದ ಪ್ರಕಾರ ಅಧ್ಯಕ್ಷರು ಬಹುಮತ ಪಡೆದ ಅಥವಾ ಅತಿ ದೊಡ್ಡ ಪಕ್ಷದ ನಾಯಕರನ್ನೇ ಪ್ರಧಾನಿಯಾಗಿ ನೇಮಿಸಬೇಕೆಂಬ ಕಟ್ಟುಪಾಡು ಇಲ್ಲ. ಆದರೆ ಪ್ರಧಾನಿ ಮತ್ತು ಅವರ ಸಚಿವ ಸಂಪುಟಕ್ಕೆ ಪಾರ್ಲಿಮೆಂಟ್ ಅನುಮೋದನೆ ನೀಡಬೇಕು. ಎಲ್ಲ ಪಕ್ಷಗಳ "ರಾಷ್ಟ್ರೀಯ ಸರಕಾರ" ಅಥವಾ "ಯಾವುದೇ ಪಕ್ಷಕ್ಕೆ ಸೇರದ "ಟೆಕ್ನೋಕ್ರಾಟ್ ಪರಿಣತರ ಸರಕಾರ" ಅಥವಾ "ಎಡ ಒಕ್ಕೂಟ–ಎನ್ ಸೆಂಬಲ್–ರಿಪಬ್ಲಿಕನ್ ಒಕ್ಕೂಟ ಸರಕಾರ" ಗಳ ನೆಪದಲ್ಲಿ, ಎಡ ಒಕ್ಕೂಟದ ಪ್ರಣಾಳಿಕೆ ಮತ್ತು ನಾಯಕತ್ವದ ಸರಕಾರವನ್ನು ತಡೆಯುವ ಪ್ರಯತ್ನವನ್ನು ಮ್ಯಾಕ್ರಾನ್ ಮತ್ತು ಫ್ರೆಂಚ್ ಮಾತ್ರವಲ್ಲ ಯುರೋ–ಅಮೆರಿಕನ್ ಆಳುವ ವಲಯಗಳು ನಡೆಸುತ್ತಿವೆ.

ಆದರೆ ದುಡಿಯುವ ಮತ್ತು ಕಾರ್ಮಿಕ ವರ್ಗ, ನಾಗರಿಕ ಸಮಾಜ ಸುಮ್ಮನೆ ಕುಳಿತಿಲ್ಲ. ಎರಡು ಸುತ್ತಿನ ಚುನಾವಣೆಗಳಲ್ಲಿ ಪ್ರಚಾರ ಸಂಘಟಿತ ಪ್ರಯತ್ನಗಳ ಮೂಲಕ ಎಡ ಒಕ್ಕೂಟವನ್ನು ಬೆಂಬಲಿಸಿದ್ದ ಟ್ರೇಡ್ ಯೂನಿಯನ್ ಗಳು, ಸಾಮೂಹಿಕ ಸಂಘಟನೆಗಳು, ಪರಿಸರವಾದಿಗಳು ಮತ್ತು ಇತರ ನಾಗರಿಕ ಗುಂಪುಗಳು, ದುಡಿಯುವ ಜನರ ದೊಡ್ಡ ಸಂಘಟನೆಯಾದ ಸಿ.ಜಿ.ಟಿ. ಮತ್ತು ಎಡ ಪಕ್ಷಗಳ ಕಾರ್ಯಕರ್ತರು ಎಡ ಒಕ್ಕೂಟದ ನಾಯಕತ್ವದಲ್ಲಿ ಅದರ ಪ್ರಣಾಳಿಕೆ ಜಾರಿ ಮಾಡುವ ಸರಕಾರ ರಚನೆಯಾಗದಿದ್ದರೆ ಬೀದಿಗಿಳಿದು ಕಾರ್ಯಾಚರಣೆ ನಡೆಸುವುದುದಾಗಿ ಹೇಳಿದ್ದಾರೆ. ಚುನಾವಣೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಬೀದಿಗಿಳಿದು ಕುಣಿದಾಡಿದ್ದು ಮಾತ್ರವಲ್ಲ ಫ್ರಾನ್ಸಿನ ಪ್ರಜಾಪ್ರಭುತ್ವ ಬೆಂಬಲಿಸುವ ಮತ್ತು ನವ–ಫ್ಯಾಸಿಸ್ಟರನ್ನು ಬಲವಾಗಿ ವಿರೋಧಿಸುವ ನಡು–ಎಡಪಂಥೀಯ ಎನ್ ಸೆಂಬಲ್ ಮತ್ತು ಬಲಪಂಥೀಯ ರಿಪಬ್ಲಿಕನ್ ಪಕ್ಷದ ಬೆಂಬಲಿಗರೂ ಅವರಲ್ಲಿದ್ದರು ಎಂಬುದು ಮ್ಯಾಕ್ರಾನ್ ಗೆ ಗಾಬರಿ ತರುತ್ತಿದೆ.

ನವ–ಫ್ಯಾಸಿಸ್ಟರನ್ನು ಸೋಲಿಸುವ ಉತ್ತಮ ಮಾದರಿ

ಫ್ರಾನ್ಸಿನ ಚುನಾವಣಾ ಫಲಿತಾಂಶಗಳು ಜಗತ್ತಿನಾದ್ಯಂತ ಗಮನ ಸೆಳೆದಿವೆ. ಜನವಿರೋಧಿ ಕಠೋರ ಬಂಡವಾಳಶಾಹಿ ನೀತಿಗಳಿಂದ ಜನರ ಜೀವನ ದುರ್ಭರವಾಗುತ್ತಿದ್ದಂತೆ, ಆ ವ್ಯವಸ್ಥೆಯ ವಿರುದ್ಧ ಇದ್ದೇವೆಂದು ಪೋಸು ಕೊಡುವ ನವ–ಫ್ಯಾಸಿಸ್ಟ್ ಮತ್ತು ವಿವಿಧ ಉಗ್ರ ಬಲಪಂಥೀಯ ಶಕ್ತಿಗಳು, ಪಕ್ಷಗಳು ಆಘಾತಕಾರಿಯಾಗಿ ಬಲಗೊಳ್ಳುತ್ತಿವೆ. ಜನವಿಭಾಗಗಳ ನಡುವೆ, ವಲಸೆಗಾರರ ವಿರುದ್ಧ ದ್ವೇಷ ಹಬ್ಬಿಸುತ್ತಿವೆ. ಚುನಾವಣೆಗಳ ಮೂಲಕ ಅಧಿಕಾರಕ್ಕೆ ಬರುತ್ತಿವೆ. ಈ ನವ–ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವ ಬಗೆ ಹೇಗೆ ಎಂಬುದು ಎಡ ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳಿಗೆ ಸವಾಲಾಗಿರುವಾಗ ಫ್ರಾನ್ಸಿನ "ನ್ಯೂ ಪಾಪ್ಯುಲರ್ ಫ್ರಂಟ್" (ನವ ಜನಪ್ರಿಯ ರಂಗ–NFP) ಒಂದು ಉತ್ತಮ ಪ್ರಾಯೋಗಿಕ ಮಾದರಿಯನ್ನು ತೋರಿಸಿದೆ.

ಫ್ರಾನ್ಸ್ ಪಾರ್ಲಿಮೆಂಟರಿ ಚುನಾವಣೆಗಳು 2024 ಫಲಿತಾಂಶಗಳು

ಪಕ್ಷ/ರಂಗ	ಮೊದಲ ಸುತ್ತು			ಎರಡನೇ ಸುತ್ತು			ಒಟ್ಟು ಸೀಟು ಗಳು	ಏರಿಕೆ / ಇಳಿಕೆ (+/–)
	ಸೀಟು	ಮತ ಗಳಿಕೆ %	ಏರಿಕೆ/ ಇಳಿಕೆ % (+/–)	ಸೀಟು	ಮತ ಗಳಿಕೆ %	ಏರಿಕೆ/ ಇಳಿಕೆ % (+/–)		
ಎಡ–ಒಕ್ಕೂಟ NFP	32	28.2	+2.6	148	25.8 *	–5.8	180	+49
ಎನ್–ಸೆಂಬಲ್ ENS	2	21.3	–4.5	157	24.5 *	–14.0	159	–86
ನ್ಯಾಶನಲ್ ರ್‍ಯಾಲಿ ರಂಗ RN/UXD	38	33.2	+14.5	104	37.0 #	+19.8	142	+53
ರಿಪಬ್ಲಿಕನ್ LR	1	6.6	–4.7	38	5.4	–1.9	39	–25
ಇತರ ಬಲಪಂಥೀಯ	0	3.6		27	3.6		27	+17
ಇತರ ಎಡಪಂಥೀಯ	0	1.5		12	1.5		12	–9
ಇತರ ನಡುಪಂಥೀಯ	0	1.2		6	0.7		6	+2
ಪ್ರಾದೇಶಿಕ ಪಕ್ಷಗಳು	0	1.0		9	1.0		9	–1
ಇತರ	1	3.4		2	0.5		3	–1
ಒಟ್ಟು	**76**			**501**			**577**	

ಮೂಲ: ವಿಕಿಪಿಡಿಯಾ (* ಎರಡನೇ ಸುತ್ತಿನಲ್ಲಿ ಈ ರಂಗಗಳು ಹೊಂದಾಣಿಕೆ ಮಾಡಿದ್ದವು, # ಈ ರಂಗ ಅರ್ಹವಾದ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು)

"ನವ ಜನಪ್ರಿಯ ರಂಗ" (NFP) ದ ಗೆಲುವು ಫ್ರಾನ್ಸಿನಲ್ಲಿ ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ವರ್ಗಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ, ವಿಶಾಲವಾದ ಏಕತೆ, ಸಂಘಟನೆ ಮತ್ತು ಸಾಮೂಹಿಕ ಸಜ್ಜುಗೊಳಿಸುವಿಕೆಯು ಮುಂದಿನ ದಾರಿಯನ್ನು ತೋರಿಸಿದೆ. 1930 ರ ದಶಕದಲ್ಲಿ ಫ್ಯಾಸಿಸಂ ಅನ್ನು ತಡೆಯಲು ಬಲ್ಗೇರಿಯನ್ ಕಮ್ಯುನಿಸ್ಟ್ ಪಕ್ಷ ನಾಯಕ ಜಾರ್ಜಿ ಡಿಮಿಟ್ರಾವ್ ಪರಿಚಯಿಸಿದ ಕಾರ್ಮಿಕ, ಎಡ, ಪ್ರಗತಿಪರ ಮತ್ತು ನಡುಪಂಥೀಯ ಶಕ್ತಿಗಳನ್ನು ಒಗ್ಗೂಡಿಸುವ "ಜನಪ್ರಿಯ ರಂಗ" (ಪಾಪ್ಯುಲರ್ ಫ್ರಂಟ್) ದ ತಂತ್ರಗಾರಿಕೆಯ ಹೊಸ ಅವತಾರವಿದು.

ಫ್ರಾನ್ಸ್ ಸುಮಾರು 90 ವರ್ಷಗಳ ಹಿಂದೆ 1935ರಲ್ಲಿ "ಜನಪ್ರಿಯ ರಂಗ" ದ ಸರ್ಕಾರವನ್ನು ಆಯ್ಕೆ ಮಾಡಿದ ಮೊದಲ ದೇಶವಾಗಿದ್ದು, 21ನೇ ಶತಮಾನದ ಇಂದಿನ ಸಂದರ್ಭದಲ್ಲಿ ಮತ್ತೆ ಮೊದಲ ದೇಶವಾಗಿದೆಯೆಂಬುದು ಗಮನಾರ್ಹ.

ಅನೇಕ ನವ–ಫ್ಯಾಸಿಸ್ಟ್ ಪಕ್ಷಗಳಂತೆ, ಫ್ರಾನ್ಸಿನ "ರಾಷ್ಟ್ರೀಯ ರ್‍ಯಾಲಿ"ಯು ಬಂಡವಾಳಶಾಹಿ ಆಳುವ ವರ್ಗಗಳ ನವ ಉದಾರವಾದಿ ಸಿದ್ಧಾಂತದ ಜತೆ ಹೊಂದಾಣಿಕೆ ಮಾಡಿಕೊಳ್ಳುವ ಕ್ರಮಗಳನ್ನು ತೆಗೆದುಕೊಂಡಿದೆ, ಯೂರೋ ಕರೆನ್ಸಿಯನ್ನು ಸ್ವೀಕರಿಸುತ್ತದೆ ಮತ್ತು ದೊಡ್ಡ ಬ್ಯಾಂಕ್‌ಗಳ ಬಜೆಟ್ ಬೇಡಿಕೆಗಳನ್ನು ಅನುಸರಿಸುವುದಾಗಿ ಭರವಸೆ ನೀಡಿದೆ. ನವ–ಫ್ಯಾಸಿಸ್ಟ್ ಪಕ್ಷ ಇಟಲಿಯಲ್ಲಿ ಅಧಿಕಾರಕ್ಕೆ ಬಂದು, ಈಗ "ವ್ಯವಸ್ಥೆ"ಯ ಬಾಗವಾಗಿದೆ. ಉಕ್ರೇನ್ ಯುದ್ಧವನ್ನಾಗಲಿ, ನಾಟೋದ ಮತ್ತು ಯುರೋ ಕೂಟದ ಅಧಿಪತ್ಯವನ್ನಾಗಲಿ, ವಿರೋಧಿಸದೆ ಜನ–ವಿರೋಧಿ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿದೆ. ಎಡ ಪ್ರಜಾಸತ್ತಾತ್ಮಕ ಪ್ರಗತಿಪರ ಬದಲಿ ಇಲ್ಲದಿದ್ದಾಗ ಇಂತಹ ನವ–ಫ್ಯಾಸಿಸ್ಟ್ ಪಕ್ಷಗಳತ್ತ ಜನ ನೋಡುತ್ತಾರೆ.

ಎಂಎಸ್‌ಪಿ ಕಾನೂನಿಗಾಗಿ ಮತ್ತೆ ಚಳುವಳಿ: ಸಂಯುಕ್ತ ಕಿಸಾನ್ ಮೋರ್ಚಾ ಆಗಸ್ಟ್ 9ರಂದು "ಕಾರ್ಪೊರೇಟ್ಸ್ ಕ್ವಿಟ್ ಇಂಡಿಯಾ" ದಿನಾಚರಣೆಗೆ ಕರೆ

ಈ ನಿರ್ಧಾರವನ್ನು ಜುಲೈ 11ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಎಸ್‌ಕೆಎಂ ಮುಖಂಡರು ಪ್ರಕಟಿಸಿದ್ದಾರೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಹನ್ನನ್ ಮೊಲ್ಲ, ಯುಧ್‌ವೀರ್ ಸಿಂಗ್, ಸುನಿಲಂ, ಅವಿಕ್ ಸಾಹ, ಪಿ.ಕೃಷ್ಣ ಪ್ರಸಾದ್, ಆರ್. ವೆಂಕಯ್ಯ ಮತ್ತು ಪ್ರೇಮ್ ಸಿಂಗ್ ಗೆಹ್ಲಾವತ್ ಮಾತಾಡಿದರು.

ರೈತರ ಚಳುವಳಿ 2024ರ ಲೋಕಸಭಾ ಚುನಾವಣೆಗಳ ಮೇಲೆ ಪ್ರಭಾವ ಬೀರಿದೆ, "ಬಿಜೆಪಿಯನ್ನು ಬಯಲಿಗೆಳೆಯಿರಿ, ವಿರೋಧಿಸಿ ಮತ್ತು ಶಿಕ್ಷಿಸಿ" ಅಭಿಯಾನ ಮತ್ತು ರೈತರ ಚಳುವಳಿ ವ್ಯಾಪಕವಾಗಿದ್ದು ಸಕ್ರಿಯವಾಗಿದ್ದಲ್ಲೆಲ್ಲ ಬಹಳ ಪ್ರಭಾವ ಬೀರಿದೆ ಎಂದಿರುವ ಎಸ್‌ಕೆಎಂ "ಪಂಜಾಬ್, ಹರ್ಯಾಣ, ಉತ್ತರಪ್ರದೇಶ, ರಾಜಸ್ತಾನ ಮತ್ತು ಮಹಾರಾಷ್ಟ್ರದ 38 ಗ್ರಾಮೀಣ ಕ್ಷೇತ್ರಗಳಲ್ಲಿ ಬಿಜೆಪಿಯ ಸೋಲು, ಕೇಂದ್ರ ಮಂತ್ರಿಗಳಾಗಿದ್ದ ಅಜಯ್ ಮಿಶ್ರ ಥೇನಿ(ರೈತರ ಕೊಲೆಗಡುಕ) ಲಖಿಂಪುರ ಖೇರಿಯಲ್ಲಿ ಮತ್ತು ಕೃಷಿ ಮಂತ್ರಿ ಅರ್ಜುನ್ ಮುಂಡ ಝಾರ್ಖಂಡಿನ ಖುಂತಿಯಲ್ಲಿ ಸೋತಿದ್ದಾರೆ" ಎಂದಿರುವ ಎಸ್‌ಕೆಎಂ ಗ್ರಾಮೀಣ ಪ್ರಾಬಲ್ಯದ 139 ಕ್ಷೇತ್ರಗಳಲ್ಲಿ ಬಿಜೆಪಿ ಸೋತಿದೆ ಎಂದು ಹೇಳಿದೆ.

ಜುಲೈ 10ರಂದು ನಡೆದ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ಸರ್ವ ಸದಸ್ಯ ಸಭೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಯನ್ನು ಖಾತ್ರಿಪಡಿಸುವ ಕಾನೂನು ಸೇರಿದಂತೆ ಡಿಸೆಂಬರ್ 9, 2021ರಂದು ಒಕ್ಕೂಟ ಸರಕಾರದೊಂದಿಗೆ ನಡೆದ ಒಪ್ಪಂದದ ಜಾರಿಗಾಗಿ ಮತ್ತೆ ಚಳುವಳಿ ಆರಂಭಿಸಲು ನಿರ್ಧರಿಸಿದೆ. ಪ್ರತ್ಯೇಕ ಒಕ್ಕೂಟ ಕೃಷಿ ಬಜೆಟನ್ನು ಮಂಡಿಸಬೇಕು, ಇದರಲ್ಲಿ ಜಿಡಿಪಿಯ ಸಾಕಷ್ಟು ಪಾಲನ್ನು ಒದಗಿಸಬೇಕು ಎಂದೂ ಎಸ್‌ಕೆಎಂ ಆಗ್ರಹಿಸಿದೆ.

ಎನ್‌ಡಿಎ ಸರಕಾರ ರೈತರ 384 ದಿನಗಳ ಹೋರಾಟ ಮತ್ತು 736 ಹುತಾತ್ಮರ ಸರ್ವೋಚ್ಚ ತ್ಯಾಗದ ನಂತರ ರೈತರೊಂದೊಗೆ ಮಾಡಿಕೊಂಡ ಒಪ್ಪಂದವನ್ನು ಉಲ್ಲಂಘಿಸಿದೆ ಎಂದ ಎಸ್‌ಕೆಎಂ, ಎನ್‌ಡಿಎ ಸರಕಾರ ತನ್ನ ಕಾರ್ಪೊರೇಟ್–ಪರ ಧೋರಣೆಗಳನ್ನು ಬದಲಿಸುತ್ತದೆ ಎಂಬ ಭ್ರಮೆ ಇಟ್ಟುಕೊಳ್ಳಬೇಕಾಗಿಲ್ಲ ಎಂದಿದೆ. ಈ ಚಳುವಳಿಯನ್ನು ಮತ್ತೆ ಪ್ರಾರಂಭಿಸುವುದರ ಭಾಗವಾಗಿ ಎಲ್ಲ ಸಂಸತ್ ಸದಸ್ಯರಿಗೆ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಿದೆ, ಸಂಬಂಧಪಟ್ಟ ಎಸ್‌ಕೆಎಂ ರಾಜ್ಯ ಮುಖಂಡರುಗಳ ನಿಯೋಗ ಜುಲೈ 16,17 ಮತ್ತು 18ರಂದು ಅವರನ್ನು ನೇರವಾಗಿ



ಭೇಟಿಯಾಗಿ ಎನ್‌ಡಿಎ ಸರಕಾರದ ಮೇಲೆ ಈ ಬೇಡಿಕೆಗಳ ಈಡೇರಿಕೆಗೆ ಒತ್ತಡ ಹಾಕಬೇಕು ಎಂದು ಆಗ್ರಹಿಸುತ್ತದೆ. ಎಸ್‌ಕೆಎಂ ಮುಖಂಡರು ಪ್ರಧಾನ ಮಂತ್ರಿಗಳು ಮತ್ತು ವಿಪಕ್ಷ ಮುಖಂಡರೊಂದಿಗೆ ಭೇಟಿಗೆ ಸಮಯ ಕೇಳಿ ಅವರಿಗೆ ಬೇಡಿಕೆ ಪಟ್ಟಿಗಳನ್ನು ಸಲ್ಲಿಸಲಿದೆ.

ಆಗಸ್ಟ್ 9ರ 'ಕ್ವಿಟ್ ಇಂಡಿಯ ದಿನ" ದಂದು ದೇಶಾದ್ಯಂತ 'ಕಾರ್ಪೊರೇಟ್ಸ್ ಕ್ವಿಟ್ ಇಂಡಿಯಾ ದಿನ" ವಾಗಿ ಆಚರಿಸಲು ಎಸ್‌ಕೆಎಂ ನಿರ್ಧರಿಸಿದೆ. ಆಗಸ್ಟ್ 17ರಂದು ಎಸ್‌ಕೆಎಂ ಪಂಜಾಬ್ ಮುಖ್ಯಮಂತ್ರಿಗಳು ಸೇರಿದಂತೆ ಎಲ್ಲ ಮಂತ್ರಿಗಳ ನಿವಾಸದ ಎದುರು 3 ಗಂಟೆಗಳ ಪ್ರತಿಭಟನೆ ನಡೆಯಲಿದೆ. ಅದೇ ದಿನ ಎಲ್ಲ ರಾಜ್ಯಗಳಲ್ಲಿ ನೀರಿನ ಬಿಕ್ಕಟ್ಟು, ಕೃಷಿಯನ್ನು ತಟ್ಟಿರುವ ಪರಿಸರ ಬದಲಾವಣೆ, ನೀರು, ಭೂಮಿ, ಅರಣ್ಯ ಮತ್ತು ಖನಿಜಗಳು ಮುಂತಾದ ನೈಸರ್ಗಿಕ ಸಂಪನ್ಮೂಲಗಳ ಸರಕೀಕರಣದ ಬಗ್ಗೆ ದೊಡ್ಡ ವಿಚಾರ ಸಂಕಿರಣಗಳನ್ನು ನಡೆಸಲಾಗುವುದು ಎಂದು ಎಸ್‌ಕೆಎಂ ಪತ್ರಿಕಾ ಹೇಳಿಕೆ ತಿಳಿಸಿದೆ.

ಪ್ರತ್ಯೇಕ ಒಕ್ಕೂಟ ಕೃಷಿ ಬಜೆಟನ್ನು ಮಂಡಿಸಬೇಕು, ಇದರಲ್ಲಿ ಜಿಡಿಪಿಯ ಸಾಕಷ್ಟು ಪಾಲನ್ನು ಒದಗಿಸಬೇಕು ಎಂದೂ ಎಸ್‌ಕೆಎಂ ಆಗ್ರಹಿಸಿದೆ.

ಪಡೀಲ್ ಪಂಪ್ವೆಲ್ ರಸ್ತೆ ಅವ್ಯವಸ್ಥೆ ಶಾಸಕನ ಅಭಿವೃದ್ದಿ ಮುಖಕ್ಕೆ ಹಿಡಿದ ಕೈಗನ್ನಡಿ



ಪಡೀಲ್ ಪಂಪ್ವೆಲ್ ರಸ್ತೆ ಕಾಮಗಾರಿ ಕೈಗೆತ್ತಿಕೊಂಡಿರುವ ಸ್ಮಾರ್ಟ್‌ಸಿಟಿ ಈವರೆಗೂ ರಸ್ತೆ ನಿರ್ಮಿಸದೆ ಬೇಜವಾಬ್ದಾರಿ ವಹಿಸಿದೆ. ಕಳೆದ ಎರಡು ವರ್ಷಗಳಿಗಿಂತ ಅಧಿಕ ಈ ರಸ್ತೆ ನಿರ್ಮಾಣ ಕೆಲಸಗಳಿಂದ ದಿನನಿತ್ಯ ಓಡಾಡುವ ಜನ ಪರಿತಪಿಸುವಂತಾಗಿದೆ. ನಗರದಾದ್ಯಂತ ಅಭಿವೃದ್ಧಿ ಕಾಮಗಾರಿಗಳ ಅವ್ಯವಸ್ಥೆ ನೋಡಿದರೆ ಇದೆಲ್ಲಾ ಶಾಸಕ ವೇದವ್ಯಾಸರ ಮುಖಕ್ಕೆ ಹಿಡಿದ ಕೈಗನ್ನಡಿ ಎಂದು ವ್ಯಂಗಸಿದರು. ರಸ್ತೆ ನಿರ್ಮಾಣ ತ್ವರಿತಗತಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಸಿಪಿಐಎಂ ಪಕ್ಷದ ಕಾರ್ಯಕರ್ತರು ಮೇಯರ್ ಕಚೇರಿಗೆ ಮುತ್ತಿಗೆ ಹೋರಾಟ ಕೈಗೊಳ್ಳಲಿದ್ದಾರೆಂದು 12 ಜುಲೈ 2024 ರ ಶುಕ್ರವಾರ ನಾಗುರಿ ಜಂಕ್ಷನ್ ನಲ್ಲಿ ಸಿಪಿಐಎಂ ಬಜಾಲ್ ವಿಭಾಗ ಸಮಿತಿ ನೇತೃತ್ವದಲ್ಲಿ ಪಡೀಲ್ ಪಂಪ್ವೆಲ್ ರಸ್ತೆ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಒತ್ತಾಯಿಸಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ ಸುನೀಲ್ ಕುಮಾರ ಬಜಾಲ್ ಎಚ್ಚರಿಸಿದರು.

ಸಿಪಿಐಎಂ ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡುತ್ತಾ ಪಂಪ್ವೆಲ್ ಪಡೀಲ್ ರಸ್ತೆ ಕಾಮಗಾರಿ ಆಮೆವೇಗ ಮಾತ್ರವಲ್ಲ ಕಳಪೆ ಮಟ್ಟದಿಂದ ಕೂಡಿದೆ. ಅಳಪೆ ಕೆಂಬಾರ್, ರೈಲ್ವೇ ಸ್ಟೇಷನ್ ಬಳಿ ನಿರ್ಮಿಸುವ ರಸ್ತೆಯನ್ನೊಮ್ಮೆ ಗಮನಿಸಬೇಕು. ಒಂದು ಕಡೆ ಎತ್ತರ ಇನ್ನೊಂದೆಡೆ ತಗ್ಗುಗಳಲ್ಲಿ ಸಂಪೂರ್ಣ ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಬಿಜೆಪಿ ಆಡಳಿತದಲ್ಲಿ ಯಾವೊಂದು ಕಾಮಗಾರಿಗಳನ್ನು ಸರಿಯಾಗಿ ನಿರ್ಮಿಸುತ್ತಿಲ್ಲ ಜನರ ಭಾವನಾತ್ಮಕ ಪ್ರಶ್ನೆಯನ್ನಿಟ್ಟು ಇತ್ತೀಚೆಗೆ ನಿರ್ಮಿಸಿದ ರಾಮ ಮಂದಿರವೇ ಸೋರುತ್ತಿವೆ. ದೆಹಲಿ ವಿಮಾನ ನಿಲ್ದಾಣ ಕುಸಿದಿದೆ. ಬಿಹಾರದಲ್ಲಿ 17 ದಿನಕ್ಕೆ 13 ಸೇತುವೆಗಳು ಬಿದ್ದು ಹೋಗಿವೆ. ಇನ್ನು ಮಂಗಳೂರು ಈ ಘಟನೆಗಳಿಗೆ ಹೊರತಾಗಿಲ್ಲ. ಈ ರೀತಿ ಜನರ ತೆರಿಗೆ ಹಣವನ್ನು ಪೋಲು ಮಾಡುವ ಅಭಿವೃದ್ಧಿ ಕಾಮಗಾರಿಯ ಬೇಜಬಾವ್ದಾರಿಗೆ ಯಾರ ಕೆನ್ನೆಗೆ ಬಾರಿಸಬೇಕೆಂದು ಬಿಜೆಪಿ ಶಾಸಕ ವೇದವ್ಯಾಸ ಕಾಮತ್ ಉತ್ತರಿಸಬೇಕೆಂದು ಹೇಳಿದರು.

–ದೀಪಕ್ ಬಜಾಲ್

ಮೇಧಾ ಪಾಟ್ಕರ್‌ಗೆ ಶಿಕ್ಷೆ–10 ಲಕ್ಷ ರೂ.ದಂಡ... ಪುಟ 12 ರಿಂದ

ನ್ಯಾಯದ ಅಪಹಾಸ್ಯ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಇನ್ನೊಂದೆಡೆಯಲ್ಲಿ ಕಾರ್ಪೊರೇಟ್ ಶಕ್ತಿಗಳು ತಮ್ಮ ಅಧಿಕಾರ ಬಲವನ್ನು ದುರುಪಯೋಗ ಪಡಿಸಿಕೊಳುವಲ್ಲಿ ಸಫಲರಾಗುತ್ತಿದ್ದಾರೆ ಎಂದು ಖೇದ ವ್ಯಕ್ತಪಡಿಸಿದೆ. ಮೇಧಾ ಪಾಟ್ಕರ್ ರವರಿಗೆ ಅವರ ಹೋರಾಟದಲ್ಲಿ ಸೌಹಾರ್ದವನ್ನು ವ್ಯಕ್ತಪಡಿಸುತ್ತ, ಬಡವರ ಜೀವನಾಧಾರದ ಹಕ್ಕುಗಳಿಗೆ ಹೋರಾಡುತ್ತಿರುವವರ ದನಿಗಳನ್ನು ಅಡಗಿಸಲು ಮುಂದಾಗಿರುವ ಕಾರ್ಪೊರೇಟ್ ಶಕ್ತಿಗಳು ಮತ್ತು ಬಿಜೆಪಿಯನ್ನು ಬಯಲಿಗೆಳೆಯಬೇಕು ಎಂದು ಜನರಿಗೆ ಕರೆ ನೀಡಿದೆ.

ಕೇಂದ್ರದಲ್ಲಿ ಮತ್ತು ಮಧ್ಯಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಬಂದ ಸರಕಾರಗಳು ನರ್ಮದಾ ಯೋಜನೆಯಿಂದ ಪೀಡಿತರಾದ ಸಾವಿರಾರು ಬಡ ಕುಟುಂಬಗಳಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿವೆ. 2013ರಲ್ಲಿ ರೈತರ ಹೋರಾಟಗಳ ಹಿನ್ನೆಲೆಯಲ್ಲಿ ಯುಪಿಎ–2 ಸರಕಾರ ಭೂಸ್ವಾಧೀನ ಮರುವಸತಿ ಮತ್ತು ಮರು ಇತ್ಯರ್ಥ ಕಾಯಿದೆಯನ್ನು ತಂದ ನಂತರವೂ, ಈ ಮೂರು ರಾಜ್ಯಗಳ ಎನ್‌ಡಿಎ ಸರಕಾರಗಳು ರೈತರ ಮತ್ತು ಗ್ರಾಮೀಣ ಕಾರ್ಮಿಕರ ಪರಿಹಾರ, ಮರುವಸತಿ ಮತ್ತು ಮರು ಇತ್ಯರ್ಥದ ಹಕ್ಕುಗಳನ್ನು ಖಾತ್ರಿಪಡಿಸಿಲ್ಲ ಎಂದಿರುವ ಎಐಕೆಎಸ್ ನರ್ಮದಾ ಯೋಜನೆಯ ಪೀಡಿತರಿಗೆ ಮರುವಸತಿ ಮತ್ತು ಮರುವ್ಯವಸ್ಥೆಯ ಮೂಲಕ ಉದ್ಯೋಗ ಮತ್ತು ಜೀವನಾಧಾರಗಳನ್ನು ಖಾತ್ರಿಪಡಿಸಬೇಕು ಎಂದು ಕೇಂದ್ರದ ಎನ್‌ಡಿಎ ಸರಕಾರವನ್ನು ಆಗ್ರಹಿಸಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE July 15-21, 2024 Price: Rs. 10/- Date of Publication: 12 July 2024 RNI No. KARKAN /2006/17926 Posted on 16-07-2024
Posted at BG PSO, BG - 560026 **Posted at Periodical Rate -** Rs. 2

ನಿರಂಜನ ಪ್ರಗತಿಶೀಲ ಸಾಹಿತ್ಯದ ರೋಮಾಂಚನ

'ನಿರಂಜನ' ಎಂಬ ಹೆಸರು ಪ್ರಗತಿಶೀಲ ಸಾಹಿತ್ಯದ ಒಂದು ರೋಮಾಂಚನ. ಈಗ ಅವರಿಗೆ ನೂರರ ನೆನೆಪಿನ ನಮನ

ಪ್ರಗತಿಶೀಲ ಸಾಹಿತ್ಯಕ್ಕೆ ಸಾಂಸ್ಥಿಕ ಸ್ವರೂಪ ಮತ್ತು ಚಳವಳಿಯ ರೂಪ ಬಂದದ್ದು ಮುಂಬೈನಲ್ಲಿ, 1943ರಲ್ಲಿ. ಇದಕ್ಕೂ ಮುಂಚೆ ಸಾಹಿತ್ಯದಲ್ಲಿ ಪ್ರಗತಿಶೀಲ ನೆಲೆ–ನಿಲುವುಗಳನ್ನು ಕುರಿತ ಕಾಳಜಿ ವ್ಯಾಪಿಸತೊಡಗಿತ್ತು. 1943ರಲ್ಲಿ ಅಖಿಲ ಭಾರತ ಪ್ರಗತಿಶೀಲ ಬರಹಗಾರರ ಸಮ್ಮೇಳನ ನಡೆಯುವುದರ ಮೂಲಕ ಸೈದ್ಧಾಂತಿಕ ಸ್ಪಷ್ಟತೆ ಮತ್ತು ಕಾರ್ಯಸೂಚಿಯ ಮುನ್ನೋಟ ಲಭ್ಯವಾಯಿತು. ಪ್ರಧಾನವಾಗಿ ಸಾಮ್ರಾಜ್ಯಶಾಹಿಯ ವಿರೋಧದ ಜೊತೆಗೆ ಜನರನ್ನು ಜಾಗೃತಗೊಳಿಸುವ ಸಾಹಿತ್ಯ ರಚನೆ ಮತ್ತು ಕ್ರಿಯೆಗೆ ಈ ಸಮ್ಮೇಳನವು ಪ್ರೇರಣೆ ಒದಗಿಸಿತು. ಸಮತಾವಾದಿ ಸಿದ್ಧಾಂತದ ಪ್ರಭಾವಕ್ಕೆ ಒಳಗಾದವರು ಮುಂಚೂಣಿಯಲ್ಲಿದ್ದ ಈ ಸಮ್ಮೇಳನದ ಪರಿಣಾಮದಿಂದ ಕರ್ನಾಟಕದಲ್ಲೂ ಪ್ರಗತಿಶೀಲತೆಯ ದನಿ ಕೇಳಿಸತೊಡಗಿತು. ಸಾಹಿತ್ಯಕ್ಕೆ ಸಮಾಜಮುಖಿ ಸಂಬಂಧವನ್ನು ಅಂತರ್ಗತಗೊಳಿಸುವ ತಾತ್ವಿಕತೆಗೆ ನೆಲೆ ಒದಗತೊಡಗಿತು. ಜನಸಾಮಾನ್ಯರ ಬದುಕು ಸಾಹಿತ್ಯದ ಕೇಂದ್ರವಾಗಬೇಕೆಂಬ ಆಶಯ ಅನಾವರಣಗೊಂಡಿತು. ಇಂಥ ಆಶಯವುಳ್ಳ ಪ್ರಗತಿಶೀಲ ಸಾಹಿತ್ಯದ 'ಸಾರಥಿ'ಗಳಾದ ಅ.ನ.ಕೃ., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ, ಕುಮಾರ ವೆಂಕಣ್ಣ ಮುಂತಾದವರು ಮುಂಚೂಣಿಯಲ್ಲಿದ್ದರು. ಕನ್ನಡ ಸಾಹಿತ್ಯದಲ್ಲಿ ವಸ್ತುವಲಯ ಮತ್ತು ವಾಚಕ ವಲಯವನ್ನು 'ವಿಸ್ತರಿಸಿದ' ಶ್ರೇಯಸ್ಸು ಇಂಥ ಪ್ರಗತಿಶೀಲ ಸಾಹಿತಿಗಳಿಗೆ ಸಲ್ಲಬೇಕು.

ಪ್ರೊ.ಬರಗೂರು ರಾಮಚಂದ್ರಪ್ಪ

ಕೆಲಕಾಲಾನಂತರ ಕೆಲವರಲ್ಲಿ ಭಿನ್ನಾಭಿಪ್ರಾಯ ಮೂಡಿದ್ದು ನಿಜ. ಹಾಗೆಂದು ಮೂಲ ಆಶಯ ಮೂಲೆ ಸೇರಲಿಲ್ಲ. ವಿಶೇಷವಾಗಿ ನಿರಂಜನ, ಕಟ್ಟೀಮನಿಯಂಥವರ ಸೈದ್ಧಾಂತಿಕ ಸ್ಪಷ್ಟತೆ ಮಾಸಿ ಹೋಗಲಿಲ್ಲ. ಹೀಗಾಗಿ ಇವರೆಲ್ಲ ಜನಸಾಮಾನ್ಯ ಓದುಗರನ್ನು ತಲುಪಿದ ಜನಪರ ಹಾಗೂ ಜನಪ್ರಿಯ ಸಾಹಿತಿಗಳಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಳಿದಿದ್ದಾರೆ. ಹೀಗೆ ಉಳಿಯುತ್ತ ಬೆಳೆಯುತ್ತ ಬಂದ ನಿರಂಜನರು ಜನಪ್ರಿಯ ಸಾಹಿತ್ಯವೆಂದರೆ ಜೊಳ್ಳು ರಚನೆಯಲ್ಲ ಎಂದು ತೋರಿಸಿಕೊಟ್ಟ ಒಬ್ಬ ಪ್ರಮುಖ ಪ್ರಗತಿಶೀಲ ಸಾಹಿತಿಯಾಗಿದ್ದಾರೆ. ನಿರಂಜನರ ನೆನಪು ಕನ್ನಡ ಸಾಹಿತ್ಯದ ಒಂದು ಪ್ರಮುಖ ಪ್ರಗತಿಶೀಲ ಕಾಲಘಟ್ಟಕ್ಕೆ ಸಲ್ಲಿಸುವ ಗೌರವ.

ನಿರಂಜನರ ಜನ್ಮನಾಮ 'ಕುಳಕುಂದ ಶಿವರಾಯ', ಇವರು 'ನಿರಂಜನ'ರಾದದ್ದಕ್ಕೆ ಒಂದು ಪ್ರಬಲ ಕಾರಣವಿದೆ. ಹತ್ತನೇ ವರ್ಷದಲ್ಲೇ ಸುಳ್ಯದಲ್ಲಿ ಗಾಂಧೀಜಿಯವರನ್ನು ನೋಡಿದ ಅನುಭವದಿಂದ ಗಾಂಧಿ ವಿಚಾರಧಾರೆಯ ಸೆಳೆತಕ್ಕೆ ಸಿಕ್ಕಿ ಆನಂತರ ಕಾರ್ಲ್ ಮಾರ್ಕ್ಸ್, ಲೆನಿನ್ ಅವರ ಅಧ್ಯಯನದ ಪ್ರಭಾವಕ್ಕೆ ಒಳಗಾದರು. ಆಗ ಜಾಗತಿಕವಾಗಿ ಕೇಳಿ ಬರತೊಡಗಿದ್ದ ದುಡಿಯುವ ಜನರ ಪರವಾದ ದನಿಗೆ ತಾವೂ ಭಾಗಿಯಾಗುವ ತೀವ್ರತೆಯಿಂದ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದರು. ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿಯಾದರು. ಆಗ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಚೇರಿ ಹುಬ್ಬಳ್ಳಿಯಲ್ಲಿತ್ತು. ಈ ಕಚೇರಿಯ ಹೊಣೆ ಹೊತ್ತಿದ್ದ ಶಿವರಾಯರು ಕಮ್ಯುನಿಸ್ಟ್ ಪಕ್ಷದ ಮುಖವಾಣಿ 'ಜನಶಕ್ತಿ'ಯ ಸಂಪಾದಕರಾಗಿದ್ದರು. ಬ್ರಿಟಿಷ್ ವಸಾಹತುಶಾಹಿ ಆಡಳಿತದ ವಿರುದ್ಧ ಪ್ರತಿರೋಧ ಒಡ್ಡಿದರು. ಬ್ರಿಟಿಷ್ ವಸಾಹತುಶಾಹಿ ಮತ್ತು ಸ್ಥಳೀಯ ಬಂಡವಾಳಶಾಹಿಯನ್ನು ಏಕಕಾಲಕ್ಕೆ ವಿರೋಧಿಸುವುದು ಅಂದಿನ ಕಮ್ಯುನಿಸ್ಟರ ನಿಲುವಾಗಿದ್ದು, ಶಿವರಾಯರು ಅದಕ್ಕನುಗುಣವಾಗಿ ಕ್ರಿಯಾಶೀಲರಾಗಿದ್ದರು. ಮುಂದೆ ಸರ್ಕಾರವು ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಭೂಗತರಾದ 'ಕುಳಕುಂದ ಶಿವರಾಯ'ರು 'ನಿರಂಜನ' ಎಂಬ ಹೆಸರಿನಲ್ಲಿ ಆಳುವ ವರ್ಗ ವಿರೋಧಿಯಾದ ಲೇಖನಗಳನ್ನು ಬರೆಯತೊಡಗಿದರು. ಅಲ್ಲಿಂದ ಅವರಿಗೆ 'ನಿರಂಜನ' ಎಂಬ ಹೆಸರೇ ಖಾಯಂ ಆಯಿತು. ಸಮತಾವಾದಿ ಆಶಯವೂ ಅವರಲ್ಲಿ ಖಾಯಂ ಆಗಿ ಉಳಿಯಿತು. ಅಷ್ಟೇ ಅಲ್ಲ, ಕಾಲದ ಕರೆಗೆ ಓಗೊಡುತ್ತ ಬೆಳೆಯಿತು. ಈ ಬೆಳವಣಿಗೆಯ ಫಲವಾಗಿ ನಿರಂಜನರ ಸಾಹಿತ್ಯ ಸೃಷ್ಟಿ ವಿಸ್ತಾರಗೊಂಡಿತು.

> **ಬ್ರಿಟಿಷ್ ವಸಾಹತುಶಾಹಿ ಮತ್ತು ಸ್ಥಳೀಯ ಬಂಡವಾಳಶಾಹಿಯನ್ನು ಏಕಕಾಲಕ್ಕೆ ವಿರೋಧಿಸುವುದು ಅಂದಿನ ಕಮ್ಯುನಿಸ್ಟರ ನಿಲುವಾಗಿದ್ದು, ಶಿವರಾಯರು ಅದಕ್ಕನುಗುಣವಾಗಿ ಕ್ರಿಯಾಶೀಲರಾಗಿದ್ದರು. ಮುಂದೆ ಸರ್ಕಾರವು ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಭೂಗತರಾದ 'ಕುಳಕುಂದ ಶಿವರಾಯ'ರು 'ನಿರಂಜನ' ಎಂಬ ಹೆಸರಿನಲ್ಲಿ ಆಳುವ ವರ್ಗ ವಿರೋಧಿಯಾದ ಲೇಖನಗಳನ್ನು ಬರೆಯತೊಡಗಿದರು. ಅಲ್ಲಿಂದ ಅವರಿಗೆ 'ನಿರಂಜನ' ಎಂಬ ಹೆಸರೇ ಖಾಯಂ ಆಯಿತು. ಸಮತಾವಾದಿ ಆಶಯವೂ ಅವರಲ್ಲಿ ಖಾಯಂ ಆಗಿ ಉಳಿಯಿತು.**



ನಿರಂಜನರು ಸುಮಾರು ಇಪ್ಪತ್ತೈದು ಕಾದಂಬರಿ, ಆರು ಕಥಾ ಸಂಕಲನ, ಕೆಲವು ಅನುವಾದಗಳ ಮೂಲಕ ತಮ್ಮ ಆಶಯಗಳನ್ನು ಅಕ್ಷರಸ್ಥಗೊಳಿಸಿದ್ದಾರೆ. ಅನೇಕ ಪತ್ರಿಕೆಗಳಿಗೆ ಅಂಕಣಗಳನ್ನು ಬರೆದಿದ್ದಾರೆ. ಮಾಕ್ಸಿಂ ಗಾರ್ಕಿಯವರ 'ಮದರ್' ಕಾದಂಬರಿಯನ್ನು ಕನ್ನಡದಲ್ಲಿ 'ತಾಯಿ'ಯಾಗಿಸಿದ ಹೆಗ್ಗಳಿಕೆ ಇವರದು. ಅಂತೆಯೇ ಮಧ್ಯಮ ವರ್ಗದ ಮನೆಗಳಲ್ಲಿದ್ದ ಸಾಹಿತ್ಯಾನುಭವವನ್ನು 'ರಂಗಮ್ಮನ ವಠಾರ'ಕ್ಕೆ ತಂದ ವಿಸ್ತರಣೆಯೂ ಇವರದು. ನಿರಂಜನರು ಸಾಹಿತ್ಯವನ್ನು ವಠಾರದಲ್ಲಿ ಕಂಡಂತೆ, ಕಟ್ಟೀಮನಿಯವರು ಕಾರ್ಖಾನೆಗಳಲ್ಲಿ ಕಂಡರು. ಇಬ್ಬರೂ ಚಳವಳಿಯ ಆಶಯಗಳಿಗಾಗಿ ತೀವ್ರವಾದ ತುಡಿತಕ್ಕೆ ಒಳಗಾದರು. ಇದರ ಫಲವಾಗಿ ನಿರಂಜನರಿಂದ 'ಚಿರಸ್ಮರಣೆ' ಮತ್ತು ಬಸವರಾಜ ಕಟ್ಟೀಮನಿಯವರಿಂದ 'ಜ್ವಾಲಾಮುಖಿಯ ಮೇಲೆ' ಎಂಬ ಕಾದಂಬರಿಗಳು ರೂಪುಗೊಂಡವು. ಆರಂಭದ ವರ್ಷಗಳಲ್ಲಿ ನಮ್ಮ ವಿಮರ್ಶಾ ಲೋಕವು ಈ ಪ್ರಮುಖ ಕಾದಂಬರಿಗಳ ಕಡೆ ಗಂಭೀರ ಗಮನ ಕೊಡಲಿಲ್ಲ. ಅ.ನ.ಕೃ. ಅವರ 'ಸಂಧ್ಯಾರಾಗ'ವನ್ನು ಕೂಡ ತಡವಾಗಿ ಗುರುತಿಸಲಾಯಿತು. ಬಹುಶಃ ದಶಕ ಕಳೆದ ಮೇಲೆ ಗಂಭೀರವಾಗಿ ಪರಿಗಣಿಸಿದ್ದು ವಿಮರ್ಶೆಯ ಒಂದು ವಿಪರ್ಯಾಸ ಎನ್ನಬಹುದು.



ಇಂದು ನಿರಂಜನ ಎಂದ ಕೂಡಲೇ 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ' ಕಾದಂಬರಿಗಳ ಮೂಲಕ ಗುರುತಿಸುತ್ತೇವೆ. 'ಚಿರಸ್ಮರಣೆ'ಯು ಕಾಸರಗೋಡು ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕೈಯ್ಯೂರು ಎಂಬ ಗ್ರಾಮದಲ್ಲಿ ನಡೆದ ರೈತ ಹೋರಾಟದ ನೈಜಕಥನ. ಏಕಕಾಲಕ್ಕೆ ಜಮೀನ್ದಾರಿಕೆಯ ದಬ್ಬಾಳಿಕೆ ಮತ್ತು ವಸಾಹತುಶಾಹಿ ಆಡಳಿತವನ್ನು ವಿರೋಧಿಸಿದ ಹೋರಾಟದ ಸೃಜನಶೀಲ ನಿರೂಪಣೆ. 'ಮೃತ್ಯುಂಜಯ' ಕಾದಂಬರಿಯು ಈಜಿಪ್ಟಿನ ಫೆರೊ ಆಳ್ವಿಕೆಯ ವಿರುದ್ಧ ನಡೆದ ಬಂಡಾಯದ ಕಥನ. ಇದು 4500 ವರ್ಷಗಳ ಹಿಂದಿನ ಇತಿಹಾಸದ ಸೃಜನಶೀಲ ದಾಖಲೆ. ನಿರಂಜನರ ಸಾಹಿತ್ಯ ಕೃಷಿಯು ಕತೆ, ಕಾದಂಬರಿ, ಅಂಕಣಗಳಿಗಷ್ಟೇ ಸೀಮಿತವಾಗಿರಲಿಲ್ಲ. ಕಿರಿಯರಿಗಾಗಿ 'ಜ್ಞಾನಗಂಗೋತ್ರಿ' ಎಂಬ ವಿಶ್ವಕೋಶವನ್ನು ರೂಪಿಸಿದರು. 'ವಿಶ್ವಕಥಾಕೋಶ'ದ ಇಪ್ಪತ್ತೈದು ಸಂಪುಟಗಳ ಮುಖ್ಯ ಸಂಪಾದಕರಾಗಿ ಬಹುದೊಡ್ಡ ಕೆಲಸ ಮಾಡಿದರು. ಜಗತ್ತಿನ ವಿವಿಧ ದೇಶಗಳ ಆಯ್ದ ಕತೆಗಳನ್ನು ಸಂಕಲಿಸಿ, ಅನೇಕ ಲೇಖಕರನ್ನು ತೊಡಗಿಸಿಕೊಂಡು ಮಾಡಿದ ಈ ಸಂಘಟನಾತ್ಮಕ ಕೆಲಸವು ಇಂದಿಗೂ ಒಂದು ದಾಖಲೆಯಾಗಿದೆ.

ನಿರಂಜನರ ನೆನಪು ಯಾಕೆ ಮುಖ್ಯ ಎಂಬ ಅಂಶಕ್ಕೆ ಆಧಾರವಾಗಿ ನಾಲ್ಕು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ.

1) ಚಳವಳಿಯಲ್ಲಿ ತೊಡಗಿದವರ ಸಾಹಿತ್ಯ ಸೃಷ್ಟಿಯ ಬಗ್ಗೆ ಪೂರ್ವಗ್ರಹವೊಂದು ಕೆಲವರಲ್ಲಿ ಚಾಲ್ತಿಯಲ್ಲಿದೆ. ಇಂಥವರ ಸಾಹಿತ್ಯವು ಕಲಾತ್ಮಕತೆಗೆ ಕುಂದುಂಟು ಮಾಡಿರುತ್ತದೆಯೆಂಬುದು ಅಂಥವರ ಪೂರ್ವಗ್ರಹ. ಆದರೆ ಇಂಥ ಪೂರ್ವಗ್ರಹವನ್ನು ಸುಳ್ಳು ಮಾಡಿದ ಪ್ರಮುಖರಲ್ಲಿ ನಿರಂಜನರೂ ಒಬ್ಬರು.
2) ಜನಪ್ರಿಯ ಸಾಹಿತ್ಯವೆಂದರೆ ಜಾಳುಜಾಳಾಗಿರುತ್ತದೆಯೆಂದೂ ಗಂಭೀರ ವಿಷಯಗಳ ಅಭಿವ್ಯಕ್ತಿ ಇರುವುದಿಲ್ಲವೆಂದೂ ವಾದಿಸುವವರಿಗೆ ನಿರಂಜನರ ಕೆಲವು ಕತೆ, ಕಾದಂಬರಿಗಳು ಉತ್ತಮ ಉತ್ತರವಾಗಿದ್ದವು. ಗಂಭೀರ ವಸ್ತುವಿನ ಶಕ್ತಿ ಕುಂದದಂತೆ ಸಾಮಾನ್ಯ ಓದುಗರಿಗೆ ತಲುಪಿಸಲು ಸಾಧ್ಯ ಎಂಬುದಕ್ಕೆ ನಿರಂಜನರ ಸಾಹಿತ್ಯವೂ ಒಂದು ಸಾಕ್ಷಿ.
3) ಭಿನ್ನಾಭಿಪ್ರಾಯಗಳು ವ್ಯಕ್ತಿದ್ವೇಷವಾಗಬಾರದು ಎಂದು ನಿರಂಜನರು ನಂಬಿದ್ದರು. ಕನ್ನಡದ ಬಹು ಮುಖ್ಯ ಲೇಖಕರಲ್ಲಿ ಒಬ್ಬರಾದ ಅ.ನ.ಕೃ. ಅವರು ವೇಶ್ಯಾ ಸಮಸ್ಯೆ ಕುರಿತು, ನಗ್ನಸತ್ಯ, ಸಂಜೆಗತ್ತಲು, ಶನಿಸಂತಾನ ಎಂಬ ಕಾದಂಬರಿಗಳನ್ನು ಬರೆದಾಗ ನಿರಂಜನರು– ಇವು ಪ್ರಗತಿಶೀಲ ಸಾಹಿತ್ಯ ಅಲ್ಲ ಎಂದು ಟೀಕಿಸಿದರು. ಪ್ರಗತಿಶೀಲ ಸಾಹಿತಿಗಳಂದೇ ಪ್ರಸಿದ್ಧರಾಗಿದ್ದ ಅ.ನ.ಕೃ. ಮತ್ತು ನಿರಂಜನರ ನಡುವೆ ದೊಡ್ಡ ಭಿನ್ನಾಭಿಪ್ರಾಯ ಮೂಡಿತು. ಅ.ನ.ಕೃ. ಅವರು ತಮ್ಮ ನಿಲುವಿನ ಸಮರ್ಥನೆಗಾಗಿ 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಎಂಬ ಗ್ರಂಥವನ್ನು ರಚಿಸಿ ಪ್ರಾಚೀನ ಸಾಹಿತ್ಯದಿಂದ ಆಧುನಿಕದವರೆಗಿನ ಪ್ರೇಮ–ಕಾಮದ ಸನ್ನಿವೇಶಗಳ ನಿದರ್ಶನ ನೀಡಿದರು. ಆದರೂ ಭಿನ್ನಾಭಿಪ್ರಾಯ ನಿಲ್ಲಲಿಲ್ಲ. ಇಷ್ಟಾದರೂ ನಿರಂಜನರು ಅ.ನ.ಕೃ. ಕುರಿತು "ಅ.ನ.ಕೃ. ಅವರು ಒಂದು ಜೀವಮಾನದಲ್ಲಿ ಮಾಡಿದ್ದು ನೂರು ಜೀವಮಾನಗಳ ಕೆಲಸ" ಎಂದು ಹೊಗಳಿದ್ದಾರೆ. ಒಟ್ಟು ಕೊಡುಗೆಯನ್ನು ಗುರುತಿಸಿದ್ದಾರೆ. ಇದು ನಮಗೊಂದು ಪಾಠ.
4) ನಿರಂಜನರ ಆತ್ಮಸ್ಥೈರ್ಯ ಅಪರೂಪವಾದದು. ದೇಹಕ್ಕೆ ಏನಾದರೂ ತೊಂದರೆಯಾದಾಗ ಕೆಲಸಗಳನ್ನು ಬಿಟ್ಟು ಕೊರಗುವವರೂ ಇದ್ದಾರೆ. ಅದೊಂದು ಮಾನವ ಸಹಜ ಲಕ್ಷಣವೂ ಆಗಿದೆ. ಆದರೆ ನಿರಂಜನ ಅವರು ಇದಕ್ಕೆ ಅಪವಾದ. ಅವರು ಪಾರ್ಶ್ವವಾಯುವಿನಿಂದ ಸಹಜ ನಡಿಗೆಯನ್ನು ಕಳೆದುಕೊಂಡಾಗಲು ಸುಮ್ಮನೆ ಕೂರಲಿಲ್ಲ. ಸಾಹಿತ್ಯ ರಚನೆಯನ್ನು ಕೈ ಬಿಡಲಿಲ್ಲ. ಅವರು ವಿಶ್ವಕಥಾಕೋಶದ ಯೋಜನೆಯನ್ನು ರೂಪಿಸಿ ಪೂರ್ಣಗೊಳಿಸಿದ್ದು ಇದೇ ಅವಧಿಯಲ್ಲಿ ಎನ್ನುವುದನ್ನು ಗಮನಿಸಿದಾಗ, ದೈಹಿಕ ಅಸಾಮರ್ಥ್ಯವನ್ನು ಹಿಮ್ಮೆಟ್ಟಿನಿಂತ ಆತ್ಮಸ್ಥೈರ್ಯವು ಎಂದೂ ಬತ್ತದ ಸ್ಫೂರ್ತಿ ಚಿಲುಮೆಯಾಗಿದೆ.

ಒಟ್ಟಾರೆ ನಿರಂಜನ ಅವರ ನೆನಪು, ಇಂದಿಗೂ ನಮಗೆ ಸ್ಫೂರ್ತಿದಾಯಕ ಹುರುಪು.

ಕೃಪೆ: ಪ್ರಜಾವಾಣಿ ಸಾಪ್ತಾಹಿಕ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**